ದುಡಿಯುವ ಜನರ ಪ್ರಾಣ ಮಿತ್ರ

ಜನಶಕ್ತಿ

ಕನ್ನಡ ವಾರಪತ್ರಿಕೆ

ಸಂಪುಟ 16 । ಸಂಚಿಕೆ 9 । ಫೆಬ್ರವರಿ 21–27, 2022 । ಪುಟ 16 । ರೂ. 10

https://janashakthi.wordpress.com e-mail : js_weekly@yahoo.com



ನಾಡೋಜ
ಚನ್ನವೀರ ಕಣವಿ
ನಮನ



ನಿಜ ಸಮಸ್ಯೆಗಳಿಂದ ದಿಕ್ಕು ತಪ್ಪಿಸುವ ಪ್ರಯತ್ನ



ರಾಜ್ಯಗಳ ಹಕ್ಕುಗಳ ರಕ್ಷಣೆಗಾಗಿ ಮುಖ್ಯಮಂತ್ರಿಗಳ ಸಭೆಗೆ ಸಕಾಲ



ಶಿಕ್ಷಣದಲ್ಲಿ ಮೀಸಲಾತಿ ಮತ್ತು ಕೋರ್ಟ್‌ಗಳು: ಮೋದಿ ಸರ್ಕಾರದ ವಂಚಕತನ

ಕೋವಿಡ್ ಲಸಿಕೆಗೆ ವಿರೋಧ ಎಷ್ಟು ಸರಿ?



28–29 ಮಾರ್ಚ್ 2022 ದೇಶವ್ಯಾಪಿ ಸಾರ್ವತ್ರಿಕ ಮುಷ್ಕರದತ್ತ

ದೇಶದ ರೈತ ಬಾಂಧವರಿಗೆ ಪ್ರಧಾನಿ ನೀಡಿದ ಭರವಸೆ ಇನ್ನೂ ಈಡೇರಿಲ್ಲ: ಸಂಯುಕ್ತ ಕಿಸಾನ್ ಮೋರ್ಚಾ

ಮೂರು ಪ್ರಮುಖ ಕೃಷಿ ಕಾಯ್ದೆಗಳನ್ನು ರದ್ದುಪಡಿಸುವುದು ಸೇರಿದಂತೆ ಹಲವು ಮಹತ್ವದ ಬೇಡಿಕೆಗಳನ್ನು ಮುಂದಿಟ್ಟುಕೊಂಡು ರೈತರು ನಡೆಸಿದ ಐತಿಹಾಸಿಕ ಹೋರಾಟದ ಸಂದರ್ಭದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ನೀಡಿದ್ದ ಭರವಸೆಗಳನ್ನು ಈಡೇರಿಸುವಲ್ಲಿ ಕೇಂದ್ರ ಸರ್ಕಾರವು ವಿಫಲವಾಗಿದೆ ಎಂದು ಸಂಯುಕ್ತ ಕಿಸಾನ್ ಮೋರ್ಚಾ (ಎಸ್‌ಕೆಎಂ) ಆರೋಪಿಸಿದೆ.

ಎಸ್‌ಕೆಎಂ ಆಯೋಜಿಸಿದ್ದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ರೈತ ನಾಯಕ ಶಿವಕುಮಾರ್ ಶರ್ಮಾ ಉತ್ತರಪ್ರದೇಶದ ಜನತೆ ಬಿಜೆಪಿಗೆ ತಕ್ಕಶಿಕ್ಷೆ ನೀಡಬೇಕೆಂದು ಮನವಿ ಮಾಡಿದ್ದಾರೆ. ರಾಕೇಶ್ ಟಿಕಾಯತ್, ಯೋಗೇಂದ್ರ ಯಾದವ್ ಮತ್ತು ಹನ್ನಾನ್ ಮೊಲ್ಲಾ ಸೇರಿದಂತೆ ಎಸ್‌ಕೆಎಂ ನಾಯಕರು ಗೋಷ್ಠಿಯಲ್ಲಿ ಹಾಜರಿದ್ದರು.

'ರೈತರ ಪ್ರತಿಭಟನೆ ವೇಳೆ ಬೆಳೆಗಳಿಗೆ ಕನಿಷ್ಠ ಬೆಂಬಲ ಬೆಲೆ (ಎಂಎಸ್‌ಪಿ) ನಿಗದಿಪಡಿಸುವುದು ಸೇರಿದಂತೆ ಹಲವು ಬೇಡಿಕೆಗಳನ್ನು ಈಡೇರಿಸುವುದಾಗಿ ಭರವಸೆ ನೀಡಿದ್ದರು. ಆದರೆ, ಕೇಂದ್ರವು ಆ ಭರವಸೆಯನ್ನು ಈಡೇರಿಸಿಲ್ಲ' ಎಂದು ಆರೋಪಿಸಿದರು.

ಮೋದಿ ಸರ್ಕಾರ ಸುಳ್ಳು ಭರವಸೆಗಳನ್ನು ನೀಡುವ ಮೂಲಕ ರೈತರಿಗೆ ಮೋಸ ಮಾಡಿದೆ ಇತ್ತೀಚಿನ ಕೇಂದ್ರ ಬಜೆಟ್ ಕೃಷಿ ಸಬ್ಸಿಡಿಗಳನ್ನು ತೀವ್ರವಾಗಿ ಕಡಿತಗೊಳಿಸಿದ್ದು ರೈತ ಸಮುದಾಯಕ್ಕೆ ಏನೂ ಇಲ್ಲದಂತೆ ಮಾಡಿದೆ.

'ಕೇಂದ್ರವು ಪ್ರತಿಭಟನಾಕಾರರ ವಿರುದ್ಧ ದಾಖಲಾಗಿರುವ ಸುಮಾರು 46,000 ಮೊಕದ್ದಮೆಗಳನ್ನು ಹಿಂತೆಗೆದುಕೊಳ್ಳಲಾಗುವುದು, ಆಂದೋಲನದ ಸಮಯದಲ್ಲಿ ಸಾವನ್ನಪ್ಪಿದವರ ಕುಟುಂಬಗಳಿಗೆ ಆರ್ಥಿಕ ಪರಿಹಾರ ನೀಡಲಾಗುವುದು, ರೈತರನ್ನು ವಿದ್ಯುತ್ ಬಿಲ್‌ಗಳ ವ್ಯಾಪ್ತಿಯಿಂದ ದೂರವಿಡಲಾಗುವುದು ಎಂಬ ಭರವಸೆಗಳನ್ನು ನೀಡಲಾಗಿತ್ತು. 2021ರ ನವೆಂಬರ್ 19ರಂದು ಎಂಎಸ್‌ಪಿ ಖಾತರಿಪಡಿಸಲು ಸಮಿತಿ ರಚನೆ ಮಾಡಲಾಗುವುದೆಂದು ಘೋಷಿಸಿದ್ದರು. ಆದರೆ, ಇದುವರೆಗೆ ಕೇಂದ್ರ ಸರ್ಕಾರ ಯಾವ ಸಮಿತಿಯನ್ನೂ ರಚನೆ ಮಾಡಿಲ್ಲ' ಎಂದು ಶರ್ಮಾ ತಿಳಿಸಿದರು.

'ಕೃಷಿ ಸಚಿವ ನರೇಂದ್ರ ಸಿಂಗ್ ತೋಮರ್ ಕಳೆದ ಅಧಿವೇಶನದಲ್ಲಿ ಸಂಸತ್ತಿನಲ್ಲಿ ಎಂಎಸ್‌ಪಿ ಸಮಿತಿ ರಚನೆಗಾಗಿ ಸರ್ಕಾರ ಚುನಾವಣಾ ಆಯೋಗದಿಂದ ಅನುಮತಿ ಪಡೆಯಲಾಗುವುದು ಎಂದು ಹೇಳಿದ್ದರು. ಆದರೂ ಸಮಿತಿ ರಚನೆಯಾಗಿಲ್ಲ. ಸರ್ಕಾರ ತಾನು ಕೊಟ್ಟ ಮಾತನ್ನು ಉಳಿಸಿಕೊಂಡಿಲ್ಲ' ಎಂದು ದೂರಿದರು.

'ಮೋದಿ ಸರ್ಕಾರ ಡಿಸೆಂಬರ್ 9 ರಂದು ರೈತರಿಗೆ ಲಿಖಿತ ಭರವಸೆ ನೀಡಿದ್ದರೂ, ಯಾವುದೇ ಭರವಸೆಗಳನ್ನು ಈಡೇರಿಸಿಲ್ಲ. ಎಂಎಸ್‌ಪಿ ಸೇರಿದಂತೆ ಇತರ ಐದು ಅಂಶಗಳನ್ನು ಈಡೇರಿಸುವ ಜವಾಬ್ದಾರಿಯನ್ನು ಸರ್ಕಾರ ಮಾಡಲಿಲ್ಲ. ಹಾಗಾಗಿ, ಜನವರಿ 31ರಂದು ಎಸ್‌ಕೆಎಂ ದೇಶದಾದ್ಯಂತ 'ವಿಶ್ವಾಸದ್ರೋಹ ದಿನ' ಆಚರಿಸಿತು.

ಸಂಯುಕ್ತ ಕಿಸಾನ್ ಮೋರ್ಚಾ, ಉತ್ತರ ಪ್ರದೇಶ ರಾಜ್ಯದಲ್ಲಿ ನಡೆಯುತ್ತಿರುವ ವಿಧಾನಸಭಾ ಚುನಾವಣೆಯಲ್ಲಿ ಆಡಳಿತಾರೂಢ ಬಿಜೆಪಿ ವಿರುದ್ಧ ನೇರವಾಗಿ ಪ್ರಚಾರ ಮಾಡಲು "ಮಿಷನ್ ಉತ್ತರ ಪ್ರದೇಶ" ಪ್ರಾರಂಭಿಸಿದೆ. ಜೊತೆಗೆ ಯೋಗಿ ನೇತೃತ್ವದ ಸರ್ಕಾರವನ್ನು ಅಧಿಕಾರದಿಂದ ಹೊರಹಾಕುವಂತೆ ರೈತರನ್ನು ಕೇಳಿದೆ.

ನಾವು ಯಾರಿಗೆ ಮತ ಹಾಕಬೇಕೆಂದು ಹೇಳುವುದಿಲ್ಲ. ಆದರೆ, ಬಿಜೆಪಿಯನ್ನು ಶಿಕ್ಷಿಸಿ. ಯಾರಿಗೆ ಮತ ಹಾಕಬೇಕೆಂದು ರೈತನಿಗೆ ಗೊತ್ತು. ಯಾರು ಸರ್ಕಾರ ರಚಿಸುತ್ತಾರೆ ಎಂಬುದನ್ನು ನಿರ್ಧರಿಸುವುದು ನಮ್ಮ ಕೆಲಸವಲ್ಲ. ನಮಗೆ ಯಾರು ಬೆಂಬಲ ನೀಡುತ್ತಾರೆ ಎಂಬುದನ್ನು ಆಧರಿಸಿ ನಾವು ಸರ್ಕಾರವನ್ನು ಬೆಂಬಲಿಸುತ್ತೇವೆ' ಎಂದು ಶರ್ಮಾ ಹೇಳಿದರು.

ಎಐಕೆಎಸ್ ರಾಷ್ಟ್ರೀಯ ಅಧ್ಯಕ್ಷ ಹನ್ನನ್ ಮೊಲ್ಲಾ ಮಾತನಾಡಿ, ಕೃಷಿ ಸಚಿವಾಲಯಕ್ಕೆ 2021–22ರ ಬಜೆಟ್‌ನಲ್ಲಿ ರೂ. 123017.57 ಕೋಟಿ ಇತ್ತು,2022–23 ಬಜೆಟನಲ್ಲಿ 124000 ಕೋಟಿ ನಿಗದಿಪಡಿಸಲಾಗಿದೆ. ಕೃಷಿ ಕ್ಷೇತ್ರಕ್ಕೆ ಇದು ಅತ್ಯಲ್ಪ ಮೊತ್ತವಾಗಿದೆ. ಅಲ್ಲದೆ, ಕೃಷಿ ಆದಾಯವನ್ನು ಹೆಚ್ಚಿಸಲು ಡ್ರೋನ್‌ಗಳು ಮತ್ತು ಡಿಜಿಟಲ್ ತಂತ್ರಜ್ಞಾನಗಳನ್ನು ಪರಿಚಯಿಸಲು ಬಜೆಟ್ ಪ್ರಸ್ತಾಪಿಸಿದೆ. ರೈತರು ತಮ್ಮ ಉತ್ಪನ್ನಗಳಿಗೆ ಮೂಲ ಬೆಲೆಗಳನ್ನು ಪಡೆಯದಿರುವಾಗ ಡ್ರೋನ್‌ಗಳನ್ನು ಹೇಗೆ ಖರೀದಿಸಬಹುದು ಎಂದು ಒಕ್ಕೂಟ ಸರಕಾರವನ್ನು ಪ್ರಶ್ನೆ ಮಾಡಿದ ಹನ್ನನ್ ಮೊಲ್ಲ ಬಿಜೆಪಿ ಭರವಸೆಗಳನ್ನು ನೀಡಿ ಮೋಸ ಮಾಡಿದೆ ಎಂದು ಆರೋಪಿಸಿದರು.

ಗೋವಿಂದ ಪನ್ಸಾರೆಯವರ ಹಂತಕರು ಯಾರು?–ಐಯುಎಲ್‌ಪಿ

ಬರಹಗಾರ ಹಾಗೂ ಕಮ್ಯುನಿಸ್ಟ್ ನೇತಾರ ಗೋವಿಂದ ಪನ್ಸಾರೆಯವರ ಹತ್ಯೆಯಾಗಿ ಈ ಫೆಬ್ರುವರಿ 16ಕ್ಕೆ 7 ವರ್ಷಗಳಾದವು. ಆದರೂ, ಅವರನ್ನು ಕೊಂದವರಾರು ಎಂದು ಪತ್ತೆ ಹಚ್ಚುವಲ್ಲಿ ಮಹಾರಾಷ್ಟ್ರದ ಪೋಲೀಸ್ ಇನ್ನೂ ಅಸಮರ್ಥರಾಗಿದ್ದಾರೆ.

ಪನ್ಸಾರೆಯವರ ಹತ್ಯೆಯಲ್ಲಿ ಭಾಗಿಯಾದ ಎಲ್ಲರನ್ನೂ ಪತ್ತೆಹಚ್ಚಿ, ಬಂಧಿಸಿ ಮತ್ತು ಕಾನೂನು ಕ್ರಮ ಜರುಗಿಸಬೇಕೆಂದು ಇಂಟರ್‌ನ್ಯಾಷನಲ್ ಯೂನಿಯನ್ ಆಫ್ ಲೆಫ್ಟ್ ಪಬ್ಲಿಷರ್ಸ್ (ಐಯುಎಲ್‌ಪಿ–ಎಡಪಂಥೀಯ ಪ್ರಕಾಶಕರ ಅಂತರ‍್ರಾಷ್ಟ್ರೀಯ ಸಂಘ) ಈ ಸಂದರ್ಭದಲ್ಲಿ ಮಹಾರಾಷ್ಟ್ರದ ಸರ್ಕಾರಕ್ಕೆ ಮನವಿ ಮಾಡಿದೆ.

2015, ಫೆಬ್ರವರಿ 16 ರಂದು ಗೋವಿಂದ ಪನ್ಸಾರೆ ಮತ್ತು ಉಮಾ ಪನ್ಸಾರೆ ಬೆಳಗಿನ ವಾಯು ವಿಹಾರಕ್ಕೆ ಹೋಗಿದ್ದರು. ಮೋಟಾರು ಸೈಕಲ್ಲಿನಲ್ಲಿ ಬಂದ ಜನರು ಅವರ ಬಳಿ ನಿಂತು ಗುಂಡು ಹಾರಿಸಿ ಜಾಗ ಖಾಲಿಮಾಡಿದರು. ನಾಲ್ಕು ದಿನಗಳ ನಂತರ ಫೆಬ್ರವರಿ 20 ರಂದು ಗೋವಿಂದ ಪನ್ಸಾರೆ ಕೊನೆಯುಸಿರೆಳೆದರು. ಉಮಾ ಪನ್ಸಾರೆ ಬದುಕುಳಿದರು, ಆದರೆ ಆ ದಾಳಿಯಿಂದ ಸಂಕಟಪಟ್ಟರು. ಗೋವಿಂದ ಪನ್ಸಾರೆ ಕಮ್ಯುನಿಸ್ಟರಾಗಿದ್ದರು. ಅವರು ಬರೆದ "ಶಿವಾಜಿ ಯಾರು" (ಲೆಫ್ಟ್‌ವರ್ಡ್ ಬುಕ್ಸ್, ನವದೆಹಲಿ) ಎಂಬ ಪುಸ್ತಕವು ಬಲಪಂಥೀಯರಿಗೆ ಕಿರಿಕಿರಿ ಉಂಟುಮಾಡಿತು. 17 ನೇ ಶತಮಾನದ ಮಹಾನ್ ಹೋರಾಟಗಾರನ ಬದುಕನ್ನು ಕುರಿತ ವಾಸ್ತವ ಚಿತ್ರಣ ಅವರಿಗೆ ಹಿಡಿಸಲಿಲ್ಲ.

ಮಹಾರಾಷ್ಟ್ರದ ಪೋಲಿಸರು ಈ ಪ್ರಕರಣದಲ್ಲಿ ಪರಿಹಾರ ಕಾಣಲು ಅಸಮರ್ಥರಾಗಿದ್ದಾರೆ. ಸರಿಸುಮಾರು ಒಂದು ದಶಕ ಕಳೆದರೂ ಪೋಲಿಸರು ಅಗತ್ಯ ಅಂಶಗಳನ್ನು ಕಲೆ ಹಾಕಲಿಲ್ಲ. ಹಾಗಾಗಿ ಆರೋಪ ಪಟ್ಟಿ ಸಲ್ಲಿಸಲಾಗಲಿಲ್ಲ. ಪನ್ಸಾರೆಯವರ ಹತ್ಯೆಯ ಹಿಂದೆಯೇ ಡಾ.ನರೇಂದ್ರ ದಭೋಲ್ಕರ್ (ಆಗಸ್ಟ್ 20, 2013), ಡಾ.ಎಂ.ಎಂ.ಕಲಬುರ್ಗಿ (ಆಗಸ್ಟ್ 30, 2015), ಮತ್ತು ಶ್ರೀಮತಿ ಗೌರಿ ಲಂಕೇಶ್ (ಸೆಪ್ಟೆಂಬರ್ 5, 2017) ಮುಂತಾದ ಹಲವಾರು ಬರಹಗಾರರು, ವಿಚಾರವಾದಿಗಳು, ಜಾತ್ಯತೀತವಾದಿಗಳು ಹತ್ಯೆಗೊಳಗಾದರು. ಈ ಎಲ್ಲಾ ಪ್ರಕರಣಗಳಲ್ಲಿ ದೊರೆತ ಮಾಹಿತಿಗಳ ಪ್ರಕಾರ ಸನಾತನ ಸಂಸ್ಥಾ ಎಂಬ ಹಿಂದೂ ಭಯೋತ್ಪಾದಕ ಗುಂಪು ಹಾಗೂ ಅಂತಹ ಸಂಘಟನೆಗಳು ಸಂಚು ನಡೆಸಿರುವುದು ಬೆಳಕಿಗೆ ಬಂದಿದೆ.

ಭಾರತದಲ್ಲಿ ದ್ವೇಷಪೂರಿತ ಕೃತ್ಯಗಳು ಮತ್ತು ಭಾರತದ ಸಂಸ್ಕೃತಿಯ ವಿರುದ್ಧವೇ ದಾಳಿಗಳು (ನಮ್ಮ ಬರಹಗಾರರ ಹತ್ಯೆಗಳನ್ನೂ ಒಳಗೊಂಡಂತೆ) ಹೆಚ್ಚಾಗುತ್ತಿರುವುದನ್ನು ಇಡೀ ವಿಶ್ವ ನೋಡುತ್ತಿದೆ.

"ನಾವು, ಇಂಟರ್‌ನ್ಯಾಷನಲ್ ಯೂನಿಯನ್ ಆಫ್ ಲೆಫ್ಟ್ ಪಬ್ಲಿಷರ್ಸ್ ಸಂತ್ರಸ್ತರ ಕುಟುಂಬದವರೊಂದಿಗೆ ನಾವಿದ್ದೇವೆ ಮತ್ತು ಜಾತ್ಯತೀತತೆ, ಸಾಮಾಜಿಕ ಪ್ರಗತಿ ಹಾಗೂ ಸಾಮಾಜಿಕ ನ್ಯಾಯದಂತಹ ಮಾನವೀಯ ಹಾಗೂ ಪ್ರಗತಿಪರ ಮೌಲ್ಯಗಳ ರಕ್ಷಣೆಗಾಗಿ ನಮ್ಮ ದನಿ ಎತ್ತುತ್ತೇವೆ" ಈ ಸಂದರ್ಭದಲ್ಲಿ ನೀಡಿರುವ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಭಾರತ, ಪಾಕಿಸ್ತಾನ, ಬಾಂಗ್ಲಾದೇಶ್, ಸೇರಿದಂತೆ 19 ದೇಶಗಳ 32 ಸಂಘಟನೆಗಳ 40 ಮಂದಿ ಈ ಹೇಳಿಕೆಗೆ ಸಹಿ ಹಾಕಿದ್ದಾರೆ. ಕರ್ನಾಟಕದ ಕ್ರಿಯಾಮಾಧ್ಯಮವೂ ಸೇರಿ ಭಾರತದ 10 ಪ್ರಕಾಶಕರ ಪ್ರತಿನಿಧಿಗಳು ಸಹಿ ಹಾಕಿದ್ದಾರೆ.

ಸಹಕಾರೀ ಡೈರಿ ಉದ್ಯಮವನ್ನು ರೈತರ ಒಡೆತನದಿಂದ ಕೆಲವೇ ಖಾಸಗಿ ಕೈಗಳಿಗೆ ವರ್ಗಾಯಿಸುವ ತಿದ್ದುಪಡಿಗಳು ಬೇಡ: ಸರಕಾರಕ್ಕೆ 200ಕ್ಕೂ ಹೆಚ್ಚು ಪರಿಣಿತರ ಪತ್ರ

200ಕ್ಕೂ ಹೆಚ್ಚು ಹೈನು ಸಹಕಾರೀ ಉದ್ಯಮದ ಪರಿಣಿತರು ರಾಷ್ಟ್ರೀಯ ಹೈನು ಅಭಿವೃದ್ಧಿ ಮಂಡಳಿ(ಎನ್‌ಡಿಡಿಬಿ) ಕುರಿತಂತೆ ಕೇಂದ್ರ ಸರಕಾರ ತರಬೇಕೆಂದಿರುವ ತಿದ್ದುಪಡಿಗಳು ಅದನ್ನು ಖಾಸಗೀಕರಿಸುವತ್ತ ಒಯ್ಯುತ್ತವೆ, ಇದರಿಂದ ಈ ಉದ್ಯಮದ ಅಭಿವೃದ್ಧಿ ಕೇವಲ ಕೆಲವರಿಗೇ ಸೀಮಿತವಾಗುತ್ತದೆ ಎಂದು ಸರಕಾರಕ್ಕೆ ಮತ್ತು ಸಂಬಂಧಿತ ಕೇಂದ್ರ ಸಚಿವಾಲಯಗಳಿಗೆ ಪತ್ರ ಬರೆದಿದ್ದಾರೆ.

ಜನವರಿ 18 ರಂದು ಕೇಂದ್ರ ಸರಕಾರ 'ಎನ್‌ಡಿಡಿಬಿ ತಿದ್ದುಪಡಿ ಕಾಯ್ದೆ'ಯ ಪ್ರಸ್ತಾವನೆಯನ್ನು ಮುಂದಿಟ್ಟು, ಈ ಕುರಿತು ಸಾರ್ವಜನಿಕರ ಸಲಹೆ–ಸೂಚನೆಗಳನ್ನು ಕೇಳುವ ಪ್ರಕಟಣೆ ಹೊಡಿಸಿತ್ತು. ಇದರಲ್ಲಿ ಸೂಚಿಸಿರುವ ಬದಲಾವಣೆಗಳು ಡೈರಿ ಉದ್ಯಮದ ಸಹಕಾರಿ ಕಾರ್ಯತಂತ್ರವನ್ನು ದುರ್ಬಲಗೊಳಿಸುವ ಸಂಗತಿಗಳ ಮೇಲೆ ಗಮನ ಕೇಂದ್ರೀಕರಿಸಿವೆ, ಎನ್‌ಡಿಡಿಬಿಯ ಆಡಳಿತ ಮಂಡಳಿಯಲ್ಲಿ ಖಾಸಗಿ ಉದ್ದಿಮೆ ಪರಿಣಿತರನ್ನು ನೇಮಿಸುವುದು, ಎನ್‌ಡಿಡಿಬಿ ಸಹಕಾರಿಯೇತರ ಕ್ಷೇತ್ರಗಳಲ್ಲಿ ಹೂಡಿಕೆ ಮಾಡುವುದು ಇತ್ಯಾದಿಗಳನ್ನು ಕುರಿತಾಗಿದೆ.

ಈ ತಿದ್ದುಪಡಿಗಳು ಕ್ರಮೇಣ ಎನ್‌ಡಿಡಿಬಿಯ ಮತ್ತು ಮದರ್ ಡೇರಿ ಮುಂತಾದ ಅದರ ಅಂಗ ಸಂಸ್ಥೆಗಳ ಖಾಸಗೀಕರಣಕ್ಕೆ ಹಾದಿ ಮಾಡಿಕೊಡುತ್ತವೆ, ಈ ಕುರಿತು ಅಮುಲ್, ನಂದಿನಿ, ಮಿಲ್ಮ ಮೊದಲದ ಡೈರಿ ಸಹಕಾರಿಗಳ ನಿವೃತ್ತ ಎಂ.ಡಿ.ಗಳು ಬರೆದಿರುವ ಈ ಪತ್ರದಲ್ಲಿ ಎಚ್ಚರಿಸಲಾಗಿದೆ.

ಎನ್‌ಡಿಡಿಬಿ ಯನ್ನು 1965ರಲ್ಲಿ ಆನಂದ್ ಮಾದರಿಯಲ್ಲಿ ದೇಶಾದ್ಯಂತ ಡೈರಿ ಸಹಕಾರಿಗಳನ್ನು ರಚಿಸಲಿಕ್ಕಾಗಿ ಸ್ಥಾಪಿಸಲಾಯಿತು. ಅಮುಲ್ ಎಂದು ಜನಪ್ರಿಯವಾಗಿರುವ ಆನಂದ್ ಮತ್ತು ಎನ್‌ಡಿಡಿಬಿ ಈ ಸಹಕಾರಿಗಳ ರೈತ ಸದಸ್ಯರಿಗೆ ಈ ಉದ್ದಿಮೆಯ ಒಡೆತನವನ್ನು ಮಾತ್ರವಲ್ಲ, ಅವುಗಳ ಬ್ರಾಂಡ್ ಹೆಸರುಗಳ ಒಡೆತನವನ್ನೂ ಕೊಟು ಮಧ್ಯವರ್ತಿಗಳ ಹಾವಳಿ ಇಲ್ಲದಂತೆ ಮಾಡುತ್ತದೆ ಎಂದು 'ಸಹಕಾರೀ ಕಾರ್ಯತಂತ್ರ'ದ ಮೇಲೆ ಗಮನ ಕೇಂದ್ರೀಕರಿಸಿದವು ಎಂಬ ಸಂಗತಿಯನ್ನು ಈ ಪತ್ರ ಸರಕಾರಕ್ಕೆ ನೆನಪಿಸಿದೆ.

ಈ ಕಾರ್ಯತಂತ್ರ ಎನ್‌ಡಿಡಿಬಿ 1970ರಿಂದ 1996ರ ನಡುವೆ ನಿರ್ವಹಿಸಿದ ಆಪರೇಷನ್ ಫ್ಲಡ್' 1,2, ಮತ್ತು 3 ರಲ್ಲಿ ನಿರ್ಣಾಯಕ ಪಾತ್ರ ವಹಿಸಿತು, "ಇದು ದೇಶದಲ್ಲಿ 1970ರಲ್ಲಿ 20 ಮಿಲಿಯ ಮೆಟ್ರಿಕ್ ಟನ್ ಇದ್ದ ಹಾಲು ಉತ್ಪಾದನೆಯನ್ನು 200 ಮಿಲಿಯ ಮೆಟ್ರಿಕ್ ಟನ್‌ಗೆ ಏರಿಸುವಲ್ಲಿ ನೆರವಾಯಿತು, ಇದು ತಲಾ ಹಾಲು ಲಭ್ಯತೆಯನ್ನು 1970ರಲ್ಲಿದ್ದ 103 ಗ್ರಾಂ ನಿಂದ ಈಗ 400ಗ್ರಾಂಗೆ ಏರಿಸಿ ಪೋಷಣಾಂಶ ಏರಿಕೆಗೆ ದಾರಿ ಮಾಡಿಕೊಟ್ಟಿತು."

ಈಗ ಸರಕಾರದ ಪ್ರಸ್ತಾವಿತ ತಿದ್ದುಪಡಿಗಳು ಭಾರತೀಯ ಹೈನು ಉದ್ಯಮವನ್ನು ಆಸ್ಟ್ರೇಲಿಯ ಮತ್ತು ಅಮೆರಿಕಾದಲ್ಲಿರುವಂತಹ ಖಾಸಗಿ ಮಾದರಿಯತ್ತ ತಿರುಗಿಸುತ್ತವೆ, ಮತ್ತು ಉದ್ದಿಮೆಯ ಅಭಿವೃದ್ಧಿಯ ಪ್ರಯೋಜನವನ್ನು ಕೆಲವೇ ಜನರಿಗೆ ಸೀಮಿತಗೊಳಿಸುತ್ತದೆ ಎಂದು ಈ ಪರಿಣಿತರು ತಮ್ಮ ಪತ್ರದಲ್ಲಿ ಎಚ್ಚರಿಸಿದ್ದಾರೆ.

ಈ ತಿದ್ದುಪಡಿ ಕಾಯ್ದೆಯ ಪರಿಚ್ಛೇದ 4 'ಸಹಕಾರಿ ಕಾರ್ಯತಂತ್ರ'ವ್ನು ದುರ್ಬಲಗೊಳಿಸುತ್ತದೆ, ಮತ್ತು ಖಾಸಗಿ ವಲಯದ ಹೂಡಿಕೆಗೆ ತೆರೆದು ಕೊಡುತ್ತದೆ, ಪರಿಚ್ಛೇದ 2 ಎನ್‌ಡಿಡಿಬಿ ಆಡಳಿತದಲ್ಲಿ ಖಾಸಗಿ ಡೈರು ಉದ್ದಿಮೆಯ 'ಪರಿಣಿತ'ರಿಗೆ ಪ್ರವೇಶ ನೀಡುತ್ತದೆ ಇದೆಲ್ಲ ಎನ್‌ಡಿಡಿಬಿಯ ನೀತಿಗಳು ಮತ್ತು ತತ್ವಕ್ಕೆ ತದ್ವಿರುದ್ಧವಾಗಿವೆ. "ಖಾಸಗಿ ಡೈರಿ ಸ್ಟಾರ್ಟ್–ಅಪ್‌ಗಳಿಗೆ ಹಣ ನೀಡುವವರಿಗೆ ಬರವಿಲ್ಲ, ಆದರೆ ಡೈರಿ ಸಹಕಾರಿಗಳಿಗೆ ಇರುವುದು ಎನ್‌ಡಿಡಿಬಿ ಮಾತ್ರ" ಎಂದು ಈ ಪತ್ರದಲ್ಲಿ ಮಾರ್ಮಿಕವಾಗಿ ಹೇಳಲಾಗಿದೆ.

ಇದಲ್ಲದೆ, 10,000+ ಕೋಟಿ ರೂ.ಗಳ ಮದರ್ ಡೈರಿ, 710 ಕೋಟಿ ರೂ.ಗಳ ಐಡಿಎಂಸಿ, 906 ಕೋಟಿ ರೂ.ಗಳ ಇಂಡಿಯನ್ ಇಮ್ಯುನಿಲೋಜಿಕಲ್ಸ್, 5252 ಕೋಟಿ ರೂ.ಗಳ ವ್ಯವಹಾರ ನಡೆಸುವ ಹಾಲು ಉತ್ಪಾದನಾ ಕಂಪನಿಗಳ ಒಡೆತನಕ್ಕೆ ಸಂಚಕಾರ ಬರಲಿದೆ. ಎನ್‌ಡಿಡಿಬಿಯ ಈ ಉಪಸಂಸ್ಥೆಗಳನ್ನು ತೆರಿಗೆದಾರರ ಹಣದಿಂದ ರೈತರ ಹೆಸರಿನಲ್ಲಿ ಕಟ್ಟಲಾಗಿದೆ, ಇವನ್ನು ಖಾಸಗೀಕರಿಸಿದರೆ, ಅವುಗಳ ನ್ಯಾಯಬದ್ಧ ಒಡೆಯರ, ಅಂದರೆ ರೈತರ ಕೈಗಳಿಂದ ಬೇರೆಯವರ ಕೈಗಳಿಗೆ ಹೋಗುತ್ತವೆ ಎಂದು ಈ ಪರಿಣಿತರು ಆತಂಕ ವ್ಯಕ್ತಪಡಿಸಿದ್ದಾರೆ.

ಪ್ರಸ್ತಾವಿತ ತಿದ್ದುಪಡಿಗಳ ಅಪಾಯಗಳನ್ನು ಎತ್ತಿ ತೋರಿಸುತ್ತಲೇ ದೇಶದ ಸಹಕಾರೀ ಹೈನು ಉದ್ಯಮದ ಈ ಅನುಭವೀ ಹಿರಿಯ ಅಧಿಕಾರಿಗಳು ಮತ್ತು ಪರಿಣಿತರು ಎನ್‌ಡಿಡಿಬಿಯಲ್ಲಿನ ಭ್ರಷ್ಟಾಚಾರ ಕುರಿತಂತೆ, ಮತ್ತು ಅದರ ನಿರ್ವಹಣೆಯನ್ನು ಉತ್ತಮಗೊಳಿಸುವ ಸಲಹೆ–ಸೂಚನೆಗಳನ್ನು ತಮ್ಮ ಪತ್ರದಲ್ಲಿ ಕೊಟ್ಟಿದ್ದಾರೆ. ಉದಾ:ಸಹಕಾರಿಗಳ ರಾಜಕೀಯಕರಣವನ್ನು ತಪ್ಪಿಸುವುದು, ಚುನಾಯಿತ ಶಾಸಕರು/ಎಂಪಿಗಳು/ ಕೌನ್ಸಿಲರುಗಳು ಮಂಡಳಿಯನ್ನು ಕೈವಶ ಮಾಡಿಕೊಳ್ಳದಂತೆ ತಡೆಯಲು 'ಒಬ್ಬ ವ್ಯಕ್ತಿ ಒಂದು ಹುದ್ದೆ' ನಿಯಮವನ್ನು ಪಾಲಿಸುವುದು. ಎನ್‌ಡಿಡಿಬಿಯ ನಿರ್ವಾಹಕ ನಿರ್ದೇಶಕರು(ಎಂಡಿ) ಐಎಎಸ್ ಅಧಿಕಾರಿಯಾಗಿರದೆ, ಸಹಕಾರಿ ಡೈರಿ ಉದ್ದಿಮೆಯ ಒಬ್ಬ ಸರಿಯಾದ ಕಣ್ಣೋಟ ಇರುವ ವೃತ್ತಿಪರರು ಆಗಿರಬೇಕು ಎಂದೂ ಪತ್ರದಲ್ಲಿ ಸಲಹೆ ನೀಡಲಾಗಿದೆ.

ಭಾರತೀಯ ಹಾಲು ಉದ್ದಿಮೆಯಲ್ಲಿ 'ಬಲ್ಕ್ ಮಿಲ್ಕ್ ಚಿಲ್ಲರ್ಸ್(ಬಿಎಂಸಿ) ಕ್ಷೇತ್ರದಲ್ಲಿ ಹೂಡಿಕೆಯ ಅಗತ್ಯವಿದೆ, ಇದು ಬಹಳಷ್ಟು ಉದ್ಯೋಗಾವಕಾಶಗಳನ್ನು ನಿರ್ಮಿಸುವ ಕ್ಷೇತ್ರ ಕೂಡ, ಈ ಬಗ್ಗೆ ಗಮನ ಹರಿಸಬೇಕು ಎಂದೂ ಸೂಚಿಸಿರುವ ಈ ಪರಿಣಿತರು, ಹಾಲು ಸಹಕಾರಿ ಸಂಘಗಳು ವಿಕೇಂದ್ರೀಕೃತ ಸ್ವಾಯತ್ತ ಸಂಘಟನೆಗಳಾಗಿ ಕೆಲಸ ಮಾಡಲು ಅನುವು ಮಾಡಿ ಕೊಡುವ ಬ್ಲಾಕ್ ಚೈನ್ ತಂತ್ರಜ್ಞಾನವನ್ನು ಕೂಡ ಬಳಸಬಹುದು, ಇದು ವ್ಯವಹಾರಗಳಲ್ಲಿ ಪಾರದರ್ಶಕತೆ ಮತ್ತು ಹಸಿ ಹಾಲಿನ ಪತ್ತೆಗೆ ಅನುಕೂಲ ಕಲ್ಪಿಸಿಕೊಡುತ್ತದೆ ಎಂದೂ ಹೇಳಿದ್ದಾರೆ.

NDDB DAIRY SERVICES Amul milma Nandini

ಸಂಪಾದಕೀಯ

ಮುಸಲ್ಮಾನರಿಗೆ ಎಲ್ಲಿದೆ ನ್ಯಾಯ?

ಧಾರ್ಮಿಕ ಬಹುಸಂಖ್ಯಾತರಿಂದ ಅಲ್ಪಸಂಖ್ಯಾತ ಮುಸಲ್ಮಾನರಿಗೆ ನ್ಯಾಯ ಸಿಕ್ಕಿತೆ? ಇಲ್ಲ. ಅದು ಸಾಧ್ಯವಿಲ್ಲ ಎಂದು ಇತ್ತೀಚಿನ ಹಿಜಾಬ್ ಕುರಿತಾದ ಬೆಳವಣಿಗೆ ಮತ್ತೊಮ್ಮೆ ತೋರಿಸಿಕೊಟ್ಟಿದೆ. ಇಲ್ಲಿ ನ್ಯಾಯಾಲಯ ನೀಡುವ ತೀರ್ಪುಗಳನ್ನು ಸಹ ಅಲ್ಪಸಂಖ್ಯಾತರ ವಿರುದ್ಧ ತಪ್ಪಾಗಿ ಅರ್ಥೈಸಲಾಗುತ್ತದೆ. ಹಿಜಾಬ್ ಧರಿಸಿ ವಿದ್ಯಾರ್ಥಿನಿಯರು ಕಾಲೇಜಿಗೆ ಬರುವ ಕುರಿತಂತೆ ಕರ್ನಾಟಕ ಹೈಕೋರ್ಟ್ ನೀಡಿದ್ದ ಮಧ್ಯಂತರ ತೀರ್ಪನ್ನು ಕಾಲೇಜಿನ ಶಿಕ್ಷಕಿಯರಿಗೂ ಅನ್ವಯಿಸಿ ಸತಾಯಿಸಲಾಗುತ್ತಿದೆ.

ಚಾಂದಿನಿ ತುಮಕೂರು ನಗರದ ಜೈನ್ ಪಿಯು ಕಾಲೇಜಿನ ಅತಿಥಿ ಉಪನ್ಯಾಸಕಿ. ಕಳೆದ ಮೂರು ವರ್ಷಗಳಿಂದ ಅವರು ಹಿಜಾಬ್ ಧರಿಸಿಯೇ ಕಾಲೇಜ್ ನಲ್ಲಿ ಪಾಠ ಮಾಡುತ್ತಿದ್ದರು. ಇಲ್ಲಿಯ ವರೆಗೂ ಏನೂ ತೊಂದರೆ ಆಗಿರಲಿಲ್ಲ. ಆದರೆ 2022ರ ಫೆಬ್ರುವರಿ 16 ರಂದು ಬುಧವಾರ ಕಾಲೇಜಿನ ಪ್ರಾಂಶುಪಾಲರು ಅವರನ್ನು ಕರೆಯಿಸಿ ಹಿಜಾಬ್ ಸೇರಿದಂತೆ ಯಾವುದೇ ಧಾರ್ಮಿಕ ಸಂಕೇತದ ಬಟ್ಟೆ ಧರಿಸಿ ಕಾಲೇಜಿನಲ್ಲಿ ಪಾಠ ಮಾಡಬಾರದು ಎಂದು ಆದೇಶ ಬಂದಿದೆ ಎಂದು ಹೇಳಿದ್ದಾರೆ. ಪ್ರಾಂಶುಪಾಲರ ಅನಿರೀಕ್ಷಿತ ಮಾತುಗಳಿಂದ ನೊಂದ ಉಪನ್ಯಾಸಕಿ ರಾಜೀನಾಮೆ ಕೊಟ್ಟಿದ್ದಾರೆ. ಉಪನ್ಯಾಸಕಿಯ ಮಾತುಗಳಲ್ಲೇ ಹೇಳುವುದಾದರೆ **"ಹಿಜಾಬ್ ನನ್ನ ಹಕ್ಕು. ಹಾಗಾಗಿ ನಾನು ಹಿಜಾಬ್ ತೆಗೆಯುವುದಿಲ್ಲ. ಈ ಬೆಳವಣಿಗೆಯಿಂದಾಗಿ ನನ್ನ ಆತ್ಮಗೌರವಕ್ಕೆ ಧಕ್ಕೆ ಉಂಟಾಗಿದೆ. ಹಾಗಾಗಿ ನಾನು ರಾಜೀನಾಮೆ ಕೊಟ್ಟಿದ್ದೇನೆ."**

ಹೈಕೋರ್ಟಿನ ಆದೇಶದ ವ್ಯಾಪ್ತಿ ಮೀರಿ ವಿದ್ಯಾರ್ಥಿಯರ ಮೇಲೆ ಕ್ರಮ ಕೈಗೊಳ್ಳುತ್ತಿರುವುದು ಖಂಡನೀಯವಾಗಿದೆ. ಕಾನೂನು ಸುವ್ಯವಸ್ಥೆ ಕಾಪಾಡುವುದನ್ನು ಗಮನದಲ್ಲಿರಿಸಿ ಹೈಕೋರ್ಟ್ ಮಧ್ಯಂತರ ಆದೇಶವನ್ನು ಜಾರಿಗೊಳಿಸಿರಬಹುದು. ಕಾಲೇಜು ಅಭಿವೃದ್ಧಿ ಸಮಿತಿಗಳು ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಸಮವಸ್ತ್ರ ನಿಗದಿಪಡಿಸಿದ ಕಾಲೇಜುಗಳಿಗೆ ಮಾತ್ರ ಕೋರ್ಟ್ ಆದೇಶ ಅನ್ವಯಿಸುತ್ತದೆ. ಆದರೆ ಪ್ರತಿಯೊಂದು ಕಾಲೇಜು, ಪ್ರತಿಯೊಂದು ಶಿಕ್ಷಣ ಸಂಸ್ಥೆ ಆದೇಶವನ್ನು ಭಿನ್ನ ಭಿನ್ನವಾಗಿ ಅರ್ಥೈಸಿ ಹಿಜಾಬ್ ನಿಷೇಧವನ್ನು ಜಾರಿಗೊಳಿಸುತ್ತಿದೆ. ಪೊಲೀಸ್ ಸಿಬ್ಬಂದಿ ಮೂಲಕ ವಿದ್ಯಾರ್ಥಿನಿಯರನ್ನು ಬೆದರಿಸಲಾಗುತ್ತಿದೆ. ಆದೇಶದಲ್ಲಿ ತರಗತಿ ಕೊಠಡಿ ಎಂದು ಹೇಳಲಾಗಿದ್ದರೂ ವಿದ್ಯಾರ್ಥಿನಿಯರನ್ನು ಕಾಲೇಜ ಗೇಟ್‌ಗಳಲ್ಲಿಯೇ ತಡೆದು ನಿಲ್ಲಿಸಲಾಗುತ್ತದೆ. ಅನಗತ್ಯ ಲಾಠಿ ಪ್ರಹಾರ ಮಾಡಿ ವಿದ್ಯಾರ್ಥಿ ಗುಂಪುಗಳನ್ನು ಒಂದರ ವಿರುದ್ಧ ಇನ್ನೊಂದನ್ನು ಪ್ರಚೋದಿಸಲಾಗುತ್ತದೆ. ಉರ್ದು ಶಾಲೆಗಳಲ್ಲಿಯೂ ಹಿಜಾಬ್ ನಿರ್ಬಂಧಿಸಲಾಗುತ್ತಿದೆ. ಡಿಗ್ರಿ ಕಾಲೇಜುಗಳಲ್ಲಿ ಸಹ ಹಿಜಾಬ್ ನಿರ್ಬಂಧಿಸಿ ವಿದ್ಯಾರ್ಥಿಗಳನ್ನು ರೊಚ್ಚಿಗೆಬ್ಬಿಸಲಾಗುತ್ತಿದೆ. ಇದೆಲ್ಲವೂ ಬಹುಸಂಖ್ಯಾತರಿಗೆ ದೊರೆಯುತ್ತಿರುವ ಕುಮ್ಮಕ್ಕಿನಿಂದ.

ಧಾರ್ಮಿಕ ಅಲ್ಪ ಸಂಖ್ಯಾತರ ಮೇಲೆ ಬಹುಸಂಖ್ಯಾತರ ದಾಳಿ ದೌರ್ಜನ್ಯ ಹೆಚ್ಚುತ್ತಲೆ ಇದೆ. ಅವರಿಗೆ ಈ ವ್ಯವಸ್ಥೆಯಲ್ಲಿ ನ್ಯಾಯ ದೊರೆಯುವ ಯಾವ ಲಕ್ಷಣವೂ ಕಾಣುತ್ತಿಲ್ಲ. ಇದರಿಂದಾಗಿ ಅಲ್ಪಸಂಖ್ಯಾತ ಸಮುದಾಯ ತೀವ್ರ ಆತಂಕಕ್ಕೆ ಒಳಗಾಗುತ್ತಿದೆ. ಬಾಬರಿ ಮಸೀದಿ ಧ್ವಂಸ ಪ್ರಕರಣದಲ್ಲಿ ಅವರಿಗೆ ನ್ಯಾಯ ಸಿಗಲಿಲ್ಲ. ಇದೊಂದು ಘೋರ ಕಾನೂನು ಉಲ್ಲಂಘನೆಯ ಪ್ರಶ್ನೆ ಎಂದು ಒಪ್ಪಿಕೊಳ್ಳಲಾಗಿದ್ದರೂ ತಪ್ಪಿತಸ್ಥರಿಗೆ ಶಿಕ್ಷೆಯಾಗಿಲ್ಲ. ಮುಂಬೈ ಸರಣಿ ಬಾಂಬ್ ಸ್ಫೋಟದಲ್ಲಿ ಸಾವಿರಾರು ಮುಸಲ್ಮಾನರು ಹತ್ಯೆಗೀಡಾದರೂ ಅಪರಾಧಿಗಳಿಗೆ ಶಿಕ್ಷೆಯಾಗಿಲ್ಲ. ಗುಜರಾತ್ ಗಲಭೆ ಪ್ರಕರಣದಲ್ಲಿ 2000 ಕ್ಕೂ ಹೆಚ್ಚು ಮುಸಲ್ಮಾನರು ಹತರಾಗಿದ್ದರೂ ಕೊಲೆಗಡುಕರಿಗೆ ಶಿಕ್ಷೆಯಾಗಿಲ್ಲ. ಲವ್ ಜಿಹಾದ್ ಸುಳ್ಳು ಆರೋಪಕ್ಕೆ ಸಿಕ್ಕಿಹಾಕಿಕೊಂಡು ಎಷ್ಟೊಂದು ಅಮಾಯಕ ಮುಸಲ್ಮಾನ ಯುವಕರು ವಿಚಾರಣೆ ಇಲ್ಲದೆ ಜೈಲುಗಳಲ್ಲಿ ಕೊಳೆಯುತ್ತಿದ್ದಾರೆ? ಗೋ ಮಾಂಸವನ್ನು ಆಹಾರವಾಗಿ ಸೇವಿಸಿದ ಕಾರಣಕ್ಕಾಗಿ ಎಷ್ಟೊಂದು ಅಮಾಯಕರನ್ನು ಥಳಿಸಿ ಸಾಯಿಸಲಾಗಿದೆ?

ಈಗ ಮುಗ್ಧ ಮುಸಲ್ಮಾನ ವಿದ್ಯಾರ್ಥಿನಿಯರನ್ನು ಹಿಂಸೆಗೆ ಗುರಿಪಡಿಸಲು ಹೊರಟಿದ್ದಾರೆ. ಅಣ್ಣ ತಮ್ಮಂದಿರಂತೆ, ಅಕ್ಕತಂಗಿಯರಂತೆ ಒಟ್ಟಾಗಿ, ಶಾಲೆ ಕಾಲೇಜುಗಳಿಗೆ ಹೋಗುತ್ತಾ ಬರುತ್ತಾ ಇದ್ದ ನಮ್ಮ ಮಕ್ಕಳ ನಡುವೆ ದ್ವೇಷದ ಬೀಜ ಬಿತ್ತುತ್ತಿದ್ದಾರೆ. ಇದು ದೇಶವನ್ನು ಒಡೆಯುವ ಸಂಚು. ಮುಂದಿನ ನಮ್ಮ ಪೀಳಿಗೆಯನ್ನು ವ್ಯವಸ್ಥಿತವಾಗಿ ದಾರಿ ತಪ್ಪಿಸುವ ಕುತಂತ್ರ. ಕೊರೊನಾ ಸಂದರ್ಭದಲ್ಲಿ ಎಷ್ಟೋಂದು ಅನಾಥ ಶವಗಳನ್ನು ಹಿಂದು, ಮುಸಲ್ಮಾನ ಎಂಬ ಬೇದವಿಲ್ಲದೆ ಎಲ್ಲರೂ ಸೇರಿ ಅಂತ್ಯ ಸಂಸ್ಕಾರ ಮಾಡಿರಲಿಲ್ಲವೆ? ಈ ಸೌಹಾರ್ದತೆ ಉಳಿಯುವಂತಾದರೆ ಯಾರಿಗೆ ಏನು ನಷ್ಟ? ಅವರವರ ಧಾರ್ಮಿಕ ಆಚರಣೆಗಳ ಬಗ್ಗೆ ನಮಗೇಕೆ ದ್ವೇಷ? ಸಣ್ಣವರಿಗೆ, ದುರ್ಬಲರಿಗೆ, ಮಹಿಳೆಯರಿಗೆ ಹೆಚ್ಚಿನ ಕಾಳಜಿ ತೋರುವುದು ನಮ್ಮ ಸಂಸ್ಕೃತಿಯ ಭಾಗವಲ್ಲವೆ? ವಿದ್ಯಾರ್ಥಿ ವಿದ್ಯಾರ್ಥಿನಿಯರೆ, ದ್ವೇಷವನ್ನು ಬಿತ್ತುವವರ ಬಗ್ಗೆ, ಕೋಮುವಾದದ ಬೆಂಕಿ ಹಚ್ಚುವವರ ಬಗ್ಗೆ ಎಚ್ಚರಿಕೆಯಿಂದ ಇರೋಣ. ಅಂತವರು ನಮ್ಮ ಶತ್ರುಗಳು, ದೇಶದ ಶತ್ರುಗಳು. ನಮ್ಮ ನಾಡು ಶಾಂತಿಯ ತೋಟವಾಗಿರಲಿ. ಧಾರ್ಮಿಕ ಅಲ್ಪಸಂಖ್ಯಾತರ ಬಗ್ಗೆ ನಮ್ಮ ಕಾಳಜಿ ಆದರ್ಶಪ್ರಾಯವಾಗಿರಲಿ.

ರಾಜ್ಯದ ಸೌಹಾರ್ದತೆಗೆ ಧಕ್ಕೆ ತಂದು ನಿಜ ಸಮಸ್ಯೆಗಳ ದಿಕ್ಕು ತಪ್ಪಿಸುವ ಕೆಲಸ ಸರ್ಕಾರ ಮಾಡುತ್ತಿದೆ: ಸಿಪಿಐ(ಎಂ) ಆರೋಪ

ರಾಜ್ಯದಲ್ಲಿ ಅಧಿಕಾರ ನಡೆಸುತ್ತಿರುವ ಬಸವರಾಜ ಬೊಮ್ಮಾಯಿ ನೇತೃತ್ವದ ಬಿಜೆಪಿ ಸರ್ಕಾರ ರಾಜ್ಯದ ಸೌಹಾರ್ದತೆಗೆ ಭಂಗ ತರುವ ಕೆಲಸವನ್ನು ಮಾಡುತ್ತಿದೆ. ಒಂದೆಡೆ ಲೂಟಿಕೋರ ಕಾರ್ಪೊರೇಟ್ ಕಂಪನಿಗಳ ಪರವಾದ, ರೈತರು ಹಾಗೂ ಕಾರ್ಮಿಕರ ವಿರೋಧಿಯಾದ ಭೂ ಸುಧಾರಣಾ ತಿದ್ದುಪಡಿ ಕಾಯ್ದೆ–2020, ಎಪಿಎಂಸಿ ತಿದ್ದುಪಡಿ ಕಾಯ್ದೆ–2020, ಜಾನುವಾರು ಹತ್ಯ ನಿಷೇಧ ತಿದ್ದುಪಡಿ ಕಾಯ್ದೆ–2020 ಇವುಗಳನ್ನು ಜಾರಿ ಮಾಡುವ ಮೂಲಕ ಜನ ವಿರೋಧಿ, ರೈತ ವಿರೋಧಿಯಾದ ಕ್ರಮಗಳನ್ನು ಅನುಸರಿಸುತ್ತಿದೆ. ಮತ್ತೊಂದೆಡೆ, ಸೌಹಾರ್ದತೆಗೆ ಧಕ್ಕೆ ತರುವ ಕೆಲಸಗಳಿಗೆ ಕುಮ್ಮಕ್ಕು ನೀಡುತ್ತಿವೆ ಎಂದು ಸಿಪಿಐ(ಎಂ) ಪಕ್ಷದ ರಾಜ್ಯ ಕಾರ್ಯದರ್ಶಿ ಯು. ಬಸವರಾಜ ಅವರು ಆರೋಪಿಸಿದರು.

ನಗರದ ಪ್ರೆಸ್‌ಕ್ಲಬ್‌ನಲ್ಲಿ ಭಾರತ ಕಮ್ಯೂನಿಸ್ಟ್ ಪಕ್ಷ ಮಾರ್ಕ್ಸ್‌ವಾದಿ–ಸಿಪಿಐ(ಎಂ) ಪಕ್ಷವು ಆಯೋಜಿಸಿದ್ದ ಪತ್ರಿಕಾಗೋಷ್ಠಿಯನ್ನು ಉದ್ದೇಶಿಸಿ ಮಾತನಾಡಿದ ಯು. ಬಸವರಾಜ ಅವರು ದೇಶದಲ್ಲಿ ಸತತ ಒಂದು ವರ್ಷಕ್ಕೂ ಹೆಚ್ಚು ಕಾಲ ನಡೆದ ಐತಿಹಾಸಿಕ ರೈತ ಚಳುವಳಿ ಜಾಗತಿಕ ಗಮನ ಸೆಳೆದ ಬೃಹತ್ ಪ್ರತಿಭಟನೆಗೆ ಮಣಿದು ಪ್ರಧಾನ ಮಂತ್ರಿಗಳೇ ಜಗತ್ತಿನ ಮುಂದೆ ಮಂಡಿಯೂರಿ, ಕೈ ಮುಗಿದು ರೈತ ವಿರೋಧಿ ಕೃಷಿ ಕಾಯ್ದೆಗಳನ್ನು ವಾಪಾಸು ಪಡೆದಿರುವಾಗ, ರಾಜ್ಯದ ಬಸವರಾಜ ಬೊಮ್ಮಾಯಿಯವರ ಸರಕಾರ ಭಾವನಾತ್ಮಕ ವಿಷಯಗಳನ್ನು ಮುಂದೆ ಮಾಡಿ ಜನರ ದಾರಿ ತಪ್ಪಿಸಿ, ಲೂಟಿಕೋರ ಕಾಯ್ದೆಗಳನ್ನು ಉಳಿಸಿಕೊಳ್ಳಬಹುದೆಂದು ಭಾವಿಸಿದ್ದರೆ, ಅದಕ್ಕೆ ರಾಜ್ಯದ ಜನತೆ ಸರಿಯಾದ ಪಾಠ ಕಲಿಸಲಿದ್ದಾರೆಂದು ಎಂದು ತಿಳಿಸಿದರು.

ಅಲ್ಲದೆ, ಕಾರ್ಮಿಕ ವಿರೋಧಿ ಕಾರ್ಮಿಕ ಸಂಹಿತೆಗಳ ಜಾರಿ ಮತ್ತು ದಲಿತರು, ಮಹಿಳೆಯರು ಹಾಗೂ ಬಡವರ ವಿರೋಧಿಯಾದ ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯ ಜಾರಿಗಳನ್ನು ಕೂಡಲೇ ನಿಲ್ಲಿಸಬೇಕೆಂದು ಸಿಪಿಐ(ಎಂ) ಕರ್ನಾಟಕ ರಾಜ್ಯ ಸಮಿತಿ ಬಲವಾಗಿ ಒತ್ತಾಯಿಸುತ್ತದೆ ಎಂದರು.

ಆಳುವ ಸರ್ಕಾರವು ಈ ಬಗ್ಗೆ ಅಗತ್ಯ ಕ್ರಮವಹಿಸದೇ, ಕೋಮುವಾದಿ ಶಕ್ತಿಗಳ ಜೊತೆ ಕೈ ಜೋಡಿಸಿ ರಾಜ್ಯದ ಹೋರಾಟ ನಿರತ ಜನತೆಯ ಗಮನವನ್ನು ಬೇರೆಡೆ ಸೆಳೆಯುವ ಕುತಂತ್ರವನ್ನು ಅನುಸರಿಸುತ್ತಿರುವುದು ತೀವ್ರ ಖಂಡನೀಯವಾಗಿದೆ. ಸಂವಿಧಾನ ಹಾಗೂ ದಲಿತರು, ಅಲ್ಪ ಸಂಖ್ಯಾತರ ಮತ್ತು ಹೈನುಗಾರರ ವಿರೋಧಿಯಾದ ಜಾನುವಾರು ಹತ್ಯೆ ನಿಷೇಧ ತಿದ್ದುಪಡಿ ಹಾಗೂ ಎಲ್ಲ ಶೂದ್ರ ಹಾಗೂ ದಲಿತರು ಮತ್ತು ಮಹಿಳಾ ಸಮುದಾಯದ ವಿರೋದಿಯಾದ ಮತಾಂತರ ನಿಷೇಧ ಮತ್ತು ಜಾತಿ ವ್ಯವಸ್ಥೆಯನ್ನು ಬಲಪಡಿಸುವ ಕರ್ನಾಟಕ ಧಾರ್ಮಿಕ ಸ್ವಾತಂತ್ರ್ಯ ಸಂರಕ್ಷಣೆಯಂತಹ ಕರಾಳ ಕಾಯ್ದೆಗಳ ರಚನೆಯ ಮೂಲಕ ಹಿಂದುತ್ವ ಕೋಮುವಾದಿ ಶಕ್ತಿಗಳ ಬೆಳವಣಿಗೆಗೆ ಸಹಕರಿಸುವ ಹಾಗೂ ರಾಜ್ಯದ ಸೌಹಾರ್ದವನ್ನು ಕದಡುವ ಕೆಲಸದಲ್ಲಿ ತೊಡಗಿದೆ ಎಂದು ಹೇಳಿದರು.

ರಾಜ್ಯದಲ್ಲಿ ಮತೀಯ ದ್ವೇಷ ಹೆಚ್ಚಿಸಿ ಜನತೆಯ ಗಮನವನ್ನು ಬೇರೆಡೆ ಸೆಳೆದು, ಮರೆ ಮೋಸದ ಮೂಲಕ ಕರ್ನಾಟಕದ ಎಲ್ಲ ಸಂಪನ್ಮೂಲಗಳ ಕಾರ್ಪೊರೇಟ್ ಲೂಟಿಗೆ ತೆರೆಯುವ ಇಂತಹ ಕುತಂತ್ರಗಳನ್ನು ತಕ್ಷಣವೇ ನಿಲ್ಲಿಸಬೇಕೆಂದು ರಾಜ್ಯ ಸರಕಾರವನ್ನು ಆಗ್ರಹಿಸಿರುವ ಸಿಪಿಐ(ಎಂ) ಪಕ್ಷವು ರಾಜ್ಯದ ಜನತೆ ಐಕ್ಯತೆಯಿಂದ ಇಂತಹ ಕುತಂತ್ರವನ್ನು ಮತ್ತು ಕಾರ್ಪೊರೇಟ್ ಕಂಪನಿಗಳ ಲೂಟಿಕೋರ ನೀತಿಗಳನ್ನು ಸೋಲಿಸವ ಮೂಲಕ ರಾಜ್ಯದಲ್ಲಿ ಸೌಹಾರ್ದತೆಯನ್ನು ಬಲಗೊಳಿಸಬೇಕೆಂದು ಆಗ್ರಹಿಸಿದೆ.

ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯ ಜಿ.ಸಿ.ಬಯ್ಯಾರೆಡ್ಡಿ ಅವರು ಮಾತನಾಡಿ, ದೇಶದಾದ್ಯಂತ ಬೆಳೆದು ಬಂದ ರೈತ? ಕಾರ್ಮಿಕರ ಐತಿಹಾಸಿಕ ಹಾಗೂ ರಾಜ್ಯದಲ್ಲಿ ಲೂಟಿಕೋರ ನೀತಿಗಳನ್ನು ಮುನ್ನಡೆಸುವ ಮತ್ತು ತನ್ನ ಜನ ವಿರೋಧಿ ನೀತಿಗಳನ್ನು ಮುಚ್ಚಿಕೊಳ್ಳುವ ದುಷ್ಟ ಕಾರಣದಿಂದ ಸೌಹಾರ್ದತೆಯನ್ನು ಕದಡುವ ಹಿಜಾಬ್ ಹಾಗೂ ಕೇಸರಿ ಶಾಲು ವಿವಾದವನ್ನು ಬೆಳೆಯಲು ಬಿಡಲಾಯಿತು ಎಂಬುದನ್ನು ರಾಜ್ಯದ ಜನತೆ ಗಮನಿಸಬೇಕು. ಇದರಿಂದ ರಾಜ್ಯದ ಜನತೆಯಲ್ಲಿ ಆತಂಕ ಉಂಟಾಗಿ ವಿದ್ಯಾರ್ಥಿನೀಯರು ವಿದ್ಯಾಭ್ಯಾಸದಿಂದ ವಂಚನೆಗೊಳಗಾಗಬೇಕಾದ ದುಸ್ಥಿತಿ ಉಂಟಾಗಿದೆ ಎಂದು ತಿಳಿಸಿದರು.

ಕಾಂತರಾಜು ಆಯೋಗದ ವರದಿ ಜಾರಿಗೊಳಿಸಿ:

ನಿಖರ ಅಂಕಿ ಅಂಶಗಳೊಂದಿಗೆ ತ್ರಿಸ್ತರದ ಪರಿಶೀಲನೆ ಬಳಿಕವೇ ಸ್ಥಳೀಯ ಸಂಸ್ಥೆಗಳ ಚುನಾವಣೆಗಳಲ್ಲಿ ಹಿಂದುಳಿದ ವರ್ಗಗಳಿಗೆ ಮೀಸಲಾತಿ ನೀಡಬೇಕೆಂಬ ಆದೇಶದಿಂದಾಗಿ ಸ್ಥಳೀಯ ಸಂಸ್ಥೆಗಳ ಚುನಾವಣೆಗಳನ್ನು ಮುಂದೂಡುವುದು ಅಥವಾ ನಿಖರ ಅಂಕಿ ಅಂಶಗಳು ಇಲ್ಲವೆಂದು ಆ ಸ್ಥಾನಗಳನ್ನು ಸಾಮಾನ್ಯ ಸ್ಥಾನಗಳೆಂದು ಘೋಷಿಸಿ ಹಿಂದುಳಿದ ವರ್ಗಗಳ ಮೀಸಲಾತಿಯನ್ನು ಕಡೆಗಣಿಸಿ ಚುನಾವಣೆಗಳನ್ನು ನಡೆಸುವುದು. ಈ ಎರಡೂ ಕೂಡಾ ತಪ್ಪಾದ ಕ್ರಮಗಳೆಂದು ಸಿಪಿಐ(ಎಂ) ಭಾವಿಸಿದೆ.

ಈಗಾಗಲೇ ಸಿದ್ದರಾಮಯ್ಯ ನೇತೃತ್ವದ ಹಿಂದಿನ ಸರಕಾರ ಶ್ರೀ ಕಾಂತರಾಜು ನೇತೃತ್ವದ ಆಯೋಗದ ವರದಿಯನ್ನು ಅಂತಿಮಗೊಳಿಸುವ ಮೂಲಕ ಹಿಂದುಳಿದ ಜನ ಸಮುದಾಯಗಳ ಅಂಕಿ ಅಂಶಗಳನ್ನು ಗಣತಿ ಮೂಲಕ ಗುರುತಿಸಿರುವುದರಿಂದ ಅದನ್ನು ಬಳಸಿಕೊಂಡು ಸಮಯಕ್ಕೆ ಸರಿಯಾಗಿ ಸ್ಥಳೀಯ ಸಂಸ್ಥೆಗಳ ಚುನಾವಣೆಗಳನ್ನು ನಡೆಸಲು ಅಗತ್ಯ ಕ್ರಮವಹಿಸಬೇಕೆಂದು ರಾಜ್ಯ ಸರಕಾರವನ್ನು ಮತ್ತು ಚುನಾವಣಾ ಅಯೋಗವನ್ನು ಸಿಪಿಐ(ಎಂ) ಒತ್ತಾಯಿಸಿದೆ.

ರಾಜ್ಯದ ಸರಸರಿ ಆಯವ್ಯಯ 2.5 ಲಕ್ಷ ಕೋಟಿ ರೂ.ಗಳು ಆಗಿರುವ ಸಂದರ್ಭದಲ್ಲಿ ಅದರ ಮೂರನೇ ಒಂದು ಭಾಗದ ಪಾಲು ಸ್ಥಳೀಯ ಸಂಸ್ಥೆಗಳ ಅಡಿಯಲ್ಲಿನ ವ್ಯಾಪ್ತಿಯಲ್ಲಿಯೇ ವ್ಯಯವಾಗುವುದರಿಂದ ಸ್ಥಳೀಯ ಸಂಸ್ಥೆಗಳಲ್ಲಿ ಚುನಾಯಿತ ಪ್ರತಿನಿಧಿಗಳು ಇಲ್ಲದೆ ಇರುವುದು ಮತ್ತು ಕಾರ್ಯಾಂಗದ ಅಧಿಕಾರಿಗಳ ಮೂಲಕ ಅಭಿವೃದ್ಧಿ ಕಾಮಗಾರಿಗಳನ್ನು ನಡೆಸುವುದು ಮತ್ತೊಂದು ರೀತಿಯ ದೊಡ್ಡ ಪ್ರಮಾಣದ ಭ್ರಷ್ಟಾಚಾರಕ್ಕೆ ಎಡೆ ಮಾಡಿಕೊಡುತ್ತದೆ ಎಂದು ಆರೋಪಿಸಿದರು.

ಜಿಲ್ಲಾ ಮತ್ತು ತಾಲ್ಲೂಕು ಪಂಚಾಯತಿಗಳ

ಪುಟ 4 ಕ್ಕೆ

ಬದುಕಿನ ಹಕ್ಕನ್ನು ವಂಚಿಸುವ ಬಗ್ಗೆ ಧ್ವನಿ ಎತ್ತುವುದು ಅತೀ ಅಗತ್ಯ

–ಹೈಕೋರ್ಟ್ ನಿವೃತ್ತ ನ್ಯಾಯಾಧೀಶ ಎಚ್.ಎನ್. ನಾಗಮೋಹನ್ ದಾಸ್

ನಮ್ಮನ್ನಾಳುವವರು ಮತಾಂತರ ದಂತಹ ಭಾವನಾತ್ಮಕ ವಿಚಾರಗಳನ್ನು ಮುಂದಿಟ್ಟು ಬದುಕಿನ ಮೂಲಭೂತ ಹಕ್ಕುಗಳಿಂದ ನಮ್ಮನ್ನು ವಂಚಿತರನ್ನಾಗಿ ಸುತ್ತಿರುವುದರ ಬಗ್ಗೆ ಐಕ್ಯ ಹೋರಾಟದ ಅಗತ್ಯವಿದೆ ಎಂದು ಹೈಕೋರ್ಟ್ ನಿವೃತ್ತ ನ್ಯಾಯಾಧೀಶ ಎಚ್. ಎನ್. ನಾಗಮೋಹನದಾಸ್ ಹೇಳಿದರು.

ಅಖಿಲ ಭಾರತ ವಕೀಲರ ಸಂಘ (ಎಐಎಲ್‌ಯು) ಆಶ್ರಯದಲ್ಲಿ ನಗರದ ಸಹೋದಯ ಸಭಾಂಗಣದಲ್ಲಿ ಆಯೋಜಿಸಲಾದ “ಸಂವಿಧಾನ ಮತ್ತು ಮತಾಂತರ” ಎಂಬ ವಿಚಾರಗೋಷ್ಠಿಯನ್ನುದ್ದೇಶಿಸಿ ಮಾತನಾಡಿದರು.

ಜನರ ಸಂಕಷ್ಟಗಳಿಗೆ ಪರಿಹಾರದ ಮಾರ್ಗವಾಗಿ ಹುಟ್ಟಿಕೊಂಡ ಧರ್ಮ ಪ್ರಜಾಪ್ರಭುತ್ವ ವಿರೋಧಿಯಾದಾಗ ಸಮಾಜಕ್ಕೆ ಮಾರಕವಾಗುತ್ತದೆ. ಇಂದು ನಾವು ಅಂತಹ ಕಾಲಘಟ್ಟದಲ್ಲಿದ್ದು, ಪ್ರಜಾಪ್ರಭುತ್ವವನ್ನು ವಿರೋಧಿಸುವ ಈ ಪ್ರಕ್ರಿಯೆಯನ್ನು ಹಿಮ್ಮೆಟ್ಟಿಸಬೇಕಾಗಿದೆ ಎಂದವರು ಹೇಳಿದರು.

ಮಾನವ ಹಕ್ಕುಗಳಿಗೆ ಬದ್ಧವಾಗಿರುವುದಾಗಿ ಹೇಳಿಕೊಂಡು ವಿಶ್ವಸಂಸ್ಥೆಯಲ್ಲಿ ನಾವು ಒಪ್ಪಂದಕ್ಕೆ ಸಹಿ ಹಾಕಿಕೊಂಡಿದ್ದೇವೆ. ಅದರಲ್ಲಿನ ಮಾನವ ಹಕ್ಕುಗಳನ್ನೇ ನಮ್ಮ ಸಂವಿಧಾನದಲ್ಲೂ ಸೇರ್ಪಡೆ ಗೊಳಿಸಲಾಗಿದೆ. ಧರ್ಮದ ಹಕ್ಕಿನ ಕುರಿತು ಸಂವಿಧಾನದಲ್ಲಿ ವ್ಯಾಖ್ಯಾನಿಸಲಾಗಿದ್ದು, ವ್ಯಕ್ತಿಯೊಬ್ಬ ತನಗೆ ಇಷ್ಟ ಬಂದ ಧರ್ಮವನ್ನು ಒಪ್ಪಿ ಅದನ್ನು ಪ್ರಚಾರ ಮಾಡುವ ಹಕ್ಕನ್ನು ಹೊಂದಿರುತ್ತಾನೆ. ಒಂದು ಮತದಿಂದ ಇನ್ನೊಂದು ಮತಕ್ಕೆ ಪರಿವರ್ತನೆಯಾಗುವ ಹಕ್ಕು, ಹೊಸ ಮತವನ್ನು ಹುಟ್ಟು ಹಾಕುವ ಹಕ್ಕನ್ನೂ ಆತ ಹೊಂದಿರುತ್ತಾನೆ. ತನಗೆ ಯಾವುದೇ ಧರ್ಮ ಇಲ್ಲ ಎಂದು ಘೋಷಿಸಿಕೊಳ್ಳುವ ಹಕ್ಕನ್ನೂ ವ್ಯಕ್ತಿಗೆ ಸಂವಿಧಾನದ ಅನುಚ್ಛೇದ 25ರ ಪ್ರಕಾರ ನೀಡಲಾಗಿದೆ. 1950ರಿಂದ ಇಂದಿನವರೆಗೂ ಈ ವಿಚಾರವನ್ನು ಹಲವಾರು ಪ್ರಕರಣಗಳು, ಸಂದರ್ಭಗಳಲ್ಲಿ ನ್ಯಾಯಾಲಯ ವ್ಯಾಖ್ಯಾನ ಮಾಡುತ್ತಲೇ ಬರುತ್ತಿದೆ. ಆದರೆ ಇಂದು ಮತಾಂತರ ಕಾಯಿದೆ ಜಾರಿಗೆ ಸರಕಾರ ಹೊರಟಿದೆ. ಇಷ್ಟು ವರ್ಷ ಇಲ್ಲದ್ದು ಈಗ ಯಾಕೆ ಎಂದು ಪ್ರಶ್ನಿಸಿದ ನಾಗಮೋಹನದಾಸ್, ಭಾವನಾತ್ಮಕ ವಿಚಾರಗಳನ್ನು ಮುಂದಿಟ್ಟು ಜನರನ್ನು ಶಿಕ್ಷಣ, ಆರೋಗ್ಯ, ಉದ್ಯೋಗ, ಆಹಾರದ ಮೊದಲಾದ ಬದುಕಿನ ಹಕ್ಕುಗಳಿಂದ ವಂಚಿತರನ್ನಾಗಿಸುವ ಬಗ್ಗೆ ಧ್ವನಿ ಎತ್ತಬೇಕಾದ ತುರ್ತು ಅಗತ್ಯವಿದೆ ಎಂದರು.



ಎಐಎಲ್‌ಯು ಜಿಲ್ಲಾಧ್ಯಕ್ಷ ಯಶವಂತ ಮರೋಳಿ ಪ್ರಾಸ್ತಾವಿಕವಾಗಿ ಮಾತನಾಡಿದರು. ವೇದಿಕೆಯಲ್ಲಿ ಹಿರಿಯ ನ್ಯಾಯವಾದಿಗಳಾದ ನಾರಾಯಣಪೂಜಾರಿ, ಇಬ್ರಾಹಿಂ ಉಪಸ್ಥಿತರಿದ್ದರು. ಎಐಎಲ್‌ಯು ಕಾರ್ಯದರ್ಶಿ ರಾಮಚಂದ್ರ ಬಿ. ಸ್ವಾಗತಿಸಿ, ಕಾರ್ಯಕ್ರಮ ನಿರೂಪಿಸಿದರು.

ಕರಾವಳಿ ಕಾಲೇಜು ಮಾಲಕರಿಗಾಗಿ ಹೆದ್ದಾರಿ ಕಾಮಗಾರಿ ತಿರುವಿಗೆ ಸಿಪಿಐ(ಎಂ) ವಿರೋಧ

ಮಂಗಳೂರು ಬಂಗ್ರ ಕೂಳೂರಿನ ಬಳಿ ರಾಷ್ಟ್ರೀಯ ಹೆದ್ದಾರಿ ಬದಿಯಲ್ಲಿ ಬೃಹತ್ ಚರಂಡಿಗೆ ತಡೆಗೋಡೆ ಹಾಗೂ ಸರ್ವೀಸ್ ರಸ್ತೆ ನಿರ್ಮಾಣ ಕಾಮಗಾರಿ ನಡೆಸಲಾಗುತ್ತಿದೆ. ಆದರೆ ಈ ಕಾಮಗಾರಿಯು ಮುಂದುವರಿಯುತ್ತಾ ಹೋದಂತೆ ಕರಾವಳಿ ಕಾಲೇಜು ಬಳಿ ಹೆದ್ದಾರಿ ಕಡೆಗೆ ತಿರುಗಿಸಲಾಗುತ್ತಿದೆ. ಹಲವು ವರ್ಷಗಳಿಂದ ಒಂದೇ ದಿನ ನಿರಂತರ ವಿಪರೀತ ಮಳೆ ಬಂದಾಗ ಕೊಟ್ಟಾರ ಮುಳುಗಡೆಯಾಗುತ್ತದೆ. ಒಂದು ಬಾರಿ ಬಂಗ್ರಕೂಳೂರು ಹೆದ್ದಾರಿವರೆಗೂ ಜಲಾವೃತಗೊಂಡಿತ್ತು. ಕರಾವಳಿ ಕಾಲೇಜು ಬಳಿ ರಾಜಕಾಲುವೆ ಕಿರಿದಾಗಿ ಇದ್ದುದರಿಂದ ನೀರು ಹರಿವಿಗೆ ಅಡಚಣೆ ಇತ್ತು. ಇದನ್ನು ತೆರವುಗೊಳಿಸಲು ನಗರ ಪಾಲಿಕೆ ಅಧಿಕಾರಿಗಳು ಮುಂದಾಗಿದ್ದರು. ಆದರೆ ಅದಕ್ಕೆ ತಡೆ ಒಡ್ಡಲಾಗಿತ್ತು.

ಇದೀಗ ಹೆದ್ದಾರಿ ಇಲಾಖೆ ಕೂಡ ಚರಂಡಿ ಅಗಲಗೊಳಿಸದೇ, ಚರಂಡಿ ಇರುವ ಪ್ರದೇಶ ಬಿಟ್ಟು ಹೆದ್ದಾರಿ ಪಕ್ಕದಲ್ಲೇ ಅಂಡರ್‌ಪಾಸ್ ಚರಂಡಿ ನಿರ್ಮಿಸುತ್ತಿದೆ. ಕರಾವಳಿ ಕಾಲೇಜು ಮಂಭಾಗದ ಈ ಕಾಮಗಾರಿಯಿಂದ ನಗರದ ನಾನಾ ಕಡೆ ಇರುವ ಸರ್ವೀಸ್ ರಸ್ತೆ ರೀತಿಯೇ ಇಲ್ಲಿಯೂ ಅವೈಜ್ಞಾನಿಕ ಕಾಮಗಾರಿ ನಡೆಯುತ್ತಿದ್ದು, ಕಾಟಾಚಾರಕ್ಕೆ ಸರ್ವೀಸ್ ರಸ್ತೆ ಹಾಗೂ ಚರಂಡಿ ನಿರ್ಮಿಸಲಾಗುತ್ತಿದೆ. ಕರಾವಳಿ ಕಾಲೇಜು ಮಾಲಿಕರ ಅಕ್ರಮ ಅಂಗಡಿ ಕಟ್ಟಡ, ಜಾಗ ಉಳಿಸಲು ಈ ಕಾಮಗಾರಿಯನ್ನು ಹೆದ್ದಾರಿ ಇಲಾಖೆ ನಡೆಸುತ್ತಿದೆ. ಇದೊಂದು ಹಗರಣದಂತೆ ಕಾಣುತ್ತಿದೆ. ಸಂಸದರು, ಶಾಸಕರು, ಕಾರ್ಪೊರೇಟರ್‌ಗೆ ತಿಳಿಯದೆ ಕೆಲಸ ನಡೆಯಲು ಸಾಧ್ಯವಿಲ್ಲ. ಕೊಟ್ಟಾರ ಚೌಕಿ, ಮಾಲೆಮಾರ್ ಪ್ರದೇಶದ ಜನರು ಮಳೆಗಾಲದಲ್ಲಿ ನೆರೆ ಪ್ರಮಾಣ ಹೆಚ್ಚುವ ಆತಂಕದಲ್ಲಿದ್ದಾರೆ.

ಆದುದರಿಂದ ತಕ್ಷಣ ಕಾಮಗಾರಿಯನ್ನು ನಿಲ್ಲಿಸಿ ಯಾವುದೇ ಒತ್ತಡಕ್ಕೆ ಮಣಿಯದೆ ವೈಜ್ಞಾನಿಕ ರೀತಿಯಲ್ಲಿ ಕಾಮಗಾರಿ ನಡೆಸಬೇಕು. ಯಾರಾದೋ ಹಿತಾಸಕ್ತಿಗಳಿಗೆ ಜನರ ಹಣ ಪೋಲು ಮಾಡುವುದು ಸರಿಯಲ್ಲ. ಎಂದು ಜಿಲ್ಲಾಡಳಿತವನ್ನು ಒತ್ತಾಯಿಸಲಾಗಿದೆ. ಕಾಮಗಾರಿಯನ್ನು ಯಥಾ ಸ್ಥಿತಿಯಲ್ಲಿ ಮುಂದುವರಿಸಿದಲ್ಲಿ ಸಾರ್ವಜನಿಕ ಹೋರಾಟಗಳನ್ನು ರೂಪಿಸಲಾಗುತ್ತದೆ ಎಂದು ಸಿಪಿಐ(ಎಂ) ಮಂಗಳೂರು ಉತ್ತರ ಸಮಿತಿ ಹೇಳಿದೆ.



ರಾಜ್ಯದ ಸೌಹಾರ್ದತೆಗೆ ಧಕ್ಕೆ ತಂದು ನಿಜ ಸಮಸ್ಯೆಗಳ ದಿಕ್ಕು ತಪ್ಪಿಸುವ ಕೆಲಸ ಸರ್ಕಾರ ಮಾಡುತ್ತಿದೆ........ ಪುಟ 3 ರಿಂದ

ಚುನಾಯಿತ ಪ್ರತಿನಿಧಿಗಳ ಅವಧಿ ಈಗಾಗಲೇ ಮುಗಿದು ಹಲವು ತಿಂಗಳುಗಳು ಗತಿಸಿವೆ. ಆದರೆ, ಪಂಚಾಯತಿ ರಾಜ್ ಇಲಾಖೆಯ ಸಚಿವ ಕೆ.ಎಸ್. ಈಶ್ವರಪ್ಪ ನವರು ಚುನಾವಣೆಗಳನ್ನು ನಡೆಸುವುದು ಬೇಡ ಎಂದಿರುವುದು ಪ್ರಜಾಪ್ರಭುತ್ವ ವಿರೋಧಿ ನಿಲುವಾಗಿದೆ ಅದನ್ನು ಸಿಪಿಐ(ಎಂ) ಪಕ್ಷವು ವಿರೋಧಿಸುತ್ತದೆ ಎಂದು ಹೇಳಿದರು.

ಕಳಪೆ ಮೇಲ್ಸೆತುವೆ ನಿರ್ಮಿಸಿದವರ ಮೇಲೆ ಕ್ರಿಮಿನಲ್ ಮೊಕದ್ದಮೆ ದಾಖಲಿಸಿ

ಸುಮಾರು 750 ಕೋಟಿ ರೂ.ಗಳ ಸಾರ್ವಜನಿಕ ವೆಚ್ಚದಲ್ಲಿ ನಿರ್ಮಿಸಲಾದ ಗುರುಗುಂಟೆ ಪಾಳ್ಯದಿಂದ ತುಮಕೂರು ರಸ್ತೆಗೆ ಸಂಪರ್ಕ ಕಲ್ಪಿಸುವ ಮೇಲ್ಸೆತುವೆ ಕಳಪೆ ಕಾಮಗಾರಿ ಕೆಲಸದಿಂದಾಗಿ ಕಳೆದೆರಡು? ಮೂರು ತಿಂಗಳಿಂದ ನಿರುಪಯುಕ್ತವಾಗಿದ್ದು ಈಗ ಮರು ನಿರ್ಮಾಣವಾಗದೇ ಅದನ್ನು ಬಳಸದಂತಹ ದುಸ್ಥಿತಿ ಉಂಟಾಗಿದೆ. ಇದರಿಂದಾಗಿ ಈಗ ಮತ್ತು ಮುಂದೆ ಮರು ನಿರ್ಮಾಣ ಮಾಡುವ ಸಂದರ್ಭದಲ್ಲಿ ಸಾರ್ವಜನಿಕರು ಮತ್ತು ಪ್ರಯಾಣಿಕರು, ವಾಹನ ಚಾಲಕರು ದೊಡ್ಡ ಪ್ರಮಾಣದ ಹಿಂಸೆ ಅನುಭವಿಸುವಂತಾಗಿದೆ.

ಕಳಪೆ ಕಾಮಗಾರಿಯೊಂದಿಗೆ ನಿರ್ವಹಣೆ ಲೋಪಗಳಿಂದ ಸೇತುವೆಯ ಮುಖ್ಯ ಭಾರ ಹೊರುವ ಪಿಲ್ಲರ್‌ಗಳು ಹಾಗು ರಸ್ತೆಯ ನಡುವಿನ ಸ್ಪ್ರಿಂಗ್‌ಗಳು ಹಾಗು ತಂತಿಗಳು ಹಾಳಾಗಿವೆ, ಕಾಂಕ್ರೀಟ್ ಮಿಶ್ರಣ ಗುಣಮಟ್ಟದಲ್ಲಿನ ರಾಜಿಗಳು ಇಂತಹ ದುಸ್ಥಿತಿಗೆ ಕಾರಣವಾಗಿವೆ ಎನ್ನಲಾಗಿದೆ. ಟೋಲ್ ಸಂಗ್ರಹಿಸುವುದು ಮತ್ತು ವಾಹನ ಸವಾರರನ್ನು ದೋಚುವ ಕೆಲಸಕ್ಕೆ ಮಾತ್ರ ಆದ್ಯತೆ ನೀಡಿರುವ ಕೇಂದ್ರದ ಬಿಜೆಪಿ ಸರ್ಕಾರದ ರಸ್ತೆ ಸಾರಿಗೆ ಸಚಿವಾಲಯ, ರಾಷ್ಟ್ರೀಯ ಹೆದ್ದಾರಿಗಳ ನಿರ್ವಹಣೆ ಕುರಿತು ನಿಗದಿತ ಮೌಲ್ಯಮಾಪನ ನಡೆಸದೆ ನಿರ್ಲಕ್ಷ್ಯ ಮಾಡಿರುವುದು ಇದಕ್ಕೆ ನೇರ ಕಾರಣವಾಗಿದೆ. ಟೋಲ್ ಸಂಗ್ರಹ ಮತ್ತು ನಿರ್ವಹಣೆ ಗುತ್ತಿಗೆದಾರರನ್ನು ಸಹಾ ಕಪ್ಪು ಪಟ್ಟಿಗೆ ಸೇರಿಸಿ ಅವರಿಂದ ಸಹಾ ಇದುವರೆಗೆ ಸಂಗ್ರಹವಾದ ಟೋಲ್ ಹಾಗು ವೆಚ್ಚ ಮಾಡಲಾದ ನಿರ್ವಹಣ ವೆಚ್ಚವನ್ನು ವಸೂಲಿ ಮಾಡಬೇಕು ಎಂದು ಸಿಪಿಐ(ಎಂ) ಪಕ್ಷವು ಒತ್ತಾಯಿಸಿದೆ.

ರಾಜ್ಯದ ಬಹುತೇಕ ಜಿಲ್ಲೆಗಳಿಗೆ ರಾಜ್ಯ ರಾಜಧಾನಿಯ ಸಂಪರ್ಕವಾಗಿದ್ದ ಮೇಲ್ಸೆತುವೆಯನ್ನು ಕೆಡವಿ ನಿರ್ಮಿಸಲು ಕನಿಷ್ಠ 2 ವರ್ಷವಾದರು ಬೇಕಿರುವ ಕಾರಣ, ಮೆಟ್ರೊ ಸೇವೆಗಳನ್ನು ಹೆಚ್ಚಿಸಬೇಕು, ನಾಗಸಂದ್ರ ನಿಲ್ದಾಣದ ಬಳಿ ಕೆ.ಎಸ್.ಆರ್.ಟಿ.ಸಿ. ಬಸ್ ನಿಲ್ದಾಣ ಸ್ಥಾಪಿಸುವ ಕಾರ್ಯವನ್ನು ತುರ್ತಾಗಿ ಮಾಡಬೇಕು, ತುಮಕೂರಿನಿಂದ ಪ್ರತಿ ಅರ್ಧ ಗಂಟೆಗೆ ಒಂದು ರೈಲಿನ ವ್ಯವಸ್ಥೆ ಕಲ್ಪಿಸಲು ಕೇಂದ್ರ ಸರ್ಕಾರವನ್ನು ರಾಜ್ಯ ಸರ್ಕಾರ ಒತ್ತಾಯಿಸಬೇಕು. ತುಮಕೂರಿನ ಮೂಲಕ ಹಾದು ಬರುವ ಬಸ್‌ಗಳು ಅಲ್ಲಿನ ರೈಲ್ವೆ ನಿಲ್ದಾಣಕ್ಕೆ ತಲುಪಿ ಬರುವಂತೆ ಕ್ರಮವಹಿಸಬೇಕು ಎಂದು ಸಿಪಿಐ(ಎಂ) ಆಗ್ರಹಿಸಿದೆ.

ಸದರಿ ಕಳಪೆ ಕಾಮಗಾರಿ ಮಾಡಿದ ಗುತ್ತಿಗೆದಾರನ ಲೈಸನ್ಸನ್ನು ತಕ್ಷಣವೇ ರದ್ದು ಪಡಿಸಿ ಆತನ ಹಾಗೂ ಅದರ ಗುಣಮಟ್ಟ ಸಕ್ರಮವಾಗಿ ಪರಿಶೀಲಿಸದ ಎಲ್ಲಾ ಪ್ರಮುಖ ಅಧಿಕಾರಿಗಳ ಮೇಲೆ ಕ್ರಿಮಿನಲ್ ಮೊಕದ್ದಮೆಗಳನ್ನು ಹೂಡಬೇಕು ಮತ್ತು ಸಂಬಂಧಿತ ಈ ಎಲ್ಲರ ಆಸ್ತಿಗಳನ್ನು ಮುಟ್ಟುಗೋಲು ಹಾಕಿಕೊಳ್ಳಬೇಕೆಂದು ಸಿಪಿಐ(ಎಂ) ಒತ್ತಾಯಿಸಿದೆ.

ಗಂಗಾ ಕಲ್ಯಾಣ ಯೋಜನೆ ಭ್ರಷ್ಟಾಚಾರ ನಿಗ್ರಹಿಸಲು ಅಗತ್ಯ ನಿಯಮಗಳನ್ನು ರೂಪಿಸಲು ಆಗ್ರಹ

ಸಿಪಿಐ(ಎಂ) ಪಕ್ಷದ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯ ಗೋಪಾಲಕೃಷ್ಣ ಅರಳಹಳ್ಳಿ ಮಾತನಾಡಿ, ಪರಿಶಿಷ್ಟ ಜಾತಿ, ಪಂಗಡ ಹಾಗು ಹಿಂದುಳಿದ ವರ್ಗಗಳ ಸಣ್ಣ, ಅತಿ ಸಣ್ಣ ರೈತರಿಗೆ ಕೊಳವೆ ಬಾವಿಗಳ ಮೂಲಕ ನೀರಾವರಿ ವ್ಯವಸ್ಥೆಯನ್ನು ಕಲ್ಪಿಸುವ ಯೋಜನೆಯೇ ಗಂಗಾ ಕಲ್ಯಾಣ ಯೋಜನೆಯಾಗಿದೆ. ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡಿ ಕೊಳವೆ ಬಾವಿಯನ್ನು ಹಾಕಿ ನೀರಾವರಿ ಮಾಡಿಕೊಂಡು ಕೃಷಿ ನಡೆಸಲು ಬಡ ಪರಿಶಿಷ್ಟ ಜಾತಿ, ಪಂಗಡ ಹಾಗು ಹಿಂದುಳಿದ ಜಾತಿಗಳ ಸಣ್ಣ, ಅತಿ ಸಣ್ಣ ರೈತರಿಗೆ ಸಾಧ್ಯವಿಲ್ಲದ ಹಿನ್ನೆಲೆಯಲ್ಲಿ ಪ್ರತಿ ಫಲಾನುಭವಿಗೆ 4.5 ಲಕ್ಷ ರೂ. ಹಣಕಾಸಿನ ನೆರವಿನೊಂದಿಗೆ ಗಂಗಾ ಕಲ್ಯಾಣ ಯೋಜನೆಯನ್ನು ಹಲವು ವರ್ಷಗಳಿಂದ ರಾಜ್ಯ ಸರ್ಕಾರಗಳು ಜಾರಿ ಮಾಡುತ್ತಿವೆ ಎಂದರು.

ಬಡವರಿಗಾಗಿ ಜಾರಿಯಾಗುತ್ತಿರುವ ಈ ಯೋಜನೆಯಲ್ಲಿ ಹಲವು ವರ್ಷಗಳಿಂದ ಭ್ರಷ್ಟಾಚಾರ ನಡೆದು ಬಂದಿದೆ. ಆದರೆ ಇತ್ತೀಚೆಗೆ ಉನ್ನತ ಮಟ್ಟದಲ್ಲಿಯೇ ಫಲಾನುಭವಿಗಳ ಆಯ್ಕೆ ಗುತ್ತಿಗೆದಾರರ ಆಯ್ಕೆ, ಸಾಮಾಗ್ರಿಗಳ ಖರೀದಿಯಲ್ಲಿ ವ್ಯಾಪಕ ಭ್ರಷ್ಟಾಚಾರ ನಡೆಯುವ ಚರ್ಚೆ ಮಾಹಿತಿಗಳು ಲಭ್ಯವಾಗುತ್ತಿವೆ. ಈ ಆರೋಪಗಳ ಹಿನ್ನೆಲೆಯಲ್ಲಿ ಸದನ ಸಮಿತಿಯನ್ನು ರಚಿಸಲಾಗಿದೆ. ಈ ಸದನ ಸಮಿತಿಯು ಭ್ರಷ್ಟಾಚಾರದ ಆರೋಪಗಳ ತನಿಖೆ ನಡೆಸಿ ಸದನದಲ್ಲಿ ವರದಿಯನ್ನು ಮಂಡಿಸಿ, ತಪ್ಪಿತಸ್ಥರಿಗೆ ಶಿಕ್ಷೆಯಾಗುವಂತೆ ಮಾಡುವ ಬದಲಿಗೆ, ಅನಗತ್ಯ ಕಾಲಾಹರಣ ಮಾಡುತ್ತಿದೆ. ಮಾತ್ರವಲ್ಲ, ಭ್ರಷ್ಟ ಅಧಿಕಾರಿಗಳ ರಕ್ಷಣೆಗೆ ನಿಂತಿದೆ ಎಂಬ ಗುಮಾನಿಗಳು ಕೇಳಿ ಬರುತ್ತಿವೆ.

ಈ ಹಿನ್ನೆಲೆಯಲ್ಲಿ ಶ್ರೀ ವೈ.ಎ. ನಾರಾಯಣಸ್ವಾಮಿ ಅಧ್ಯಕ್ಷತೆಯಲ್ಲಿ ರಚನೆಯಾಗಿರುವ ಸದನ ಸಮಿತಿಯು ಕೂಡಲೇ ತನಿಖೆಯನ್ನು ಪೂರ್ಣಗೊಳಿಸಿ, ಸದನದಲ್ಲಿ ವರದಿಯನ್ನು ಮಂಡಿಸಿ ತಪ್ಪಿತಸ್ಥರಿಗೆ ಕಠಿಣ ಶಿಕ್ಷೆಯಾಗುವಂತೆ ಕ್ರಮ ವಹಿಸಬೇಕು ಮತ್ತು ಈ ವರದಿಯ ಆಧಾರದಲ್ಲಿ ಗಂಗಾ ಕಲ್ಯಾಣ ಯೋಜನೆಯು ಜಾರಿಯಲ್ಲಿರುವ ಲೋಪದೋಷಗಳನ್ನು ಸರಿಪಡಿಸಿ, ಭ್ರಷ್ಟಾಚಾರವನ್ನು ನಿಗ್ರಹಿಸುವ ರೀತಿಯಲ್ಲಿ ಪಾರದರ್ಶಕ ನಿಯಮಗಳನ್ನು ರೂಪಿಸಬೇಕೆಂದು ಭಾರತ ಕಮ್ಯೂನಿಷ್ಟ ಪಕ್ಷ (ಮಾರ್ಕ್ಸ್‌ವಾದಿ)–ಸಿಪಿಐ(ಎಂ) ರಾಜ್ಯ ಸಮಿತಿಯು ರಾಜ್ಯ ಸರ್ಕಾರವನ್ನು ಆಗ್ರಹಿಸಿದೆ.

ಚೆಂಬೆಳಕಿನ ಖ್ಯಾತಿಯ ಕವಿ, ನಾಡೋಜ ಚನ್ನವೀರ ಕಣವಿ ನಿಧನ



ವಯೋಸಹಜ ಅನಾರೋಗ್ಯದಿಂದ ಬಳಲುತ್ತಿದ್ದ ಕನ್ನಡದ ಖ್ಯಾತ ಹಿರಿಯ ಸಾಹಿತಿ ಡಾ.ಚೆನ್ನವೀರ ಕಣವಿ ಅವರನ್ನು ಧಾರವಾಡದ ಎಸ್‌ಡಿಎಂ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ಕೊಡಿಸಲಾಗುತ್ತಿತ್ತು. ಬುಧವಾರ ಚಿಕಿತ್ಸೆ ಫಲಕಾರಿಯಾಗದೇ ಮೃತಪಟ್ಟಿದ್ದಾರೆ.

ನಾಡಿನ ಅಪೂರ್ವ ಸಾಹಿತಿಗಳಲ್ಲಿ ಒಬ್ಬರಾದ ಚೆಂಬೆಳಕಿನ ಕವಿ ಡಾ. ಚೆನ್ನವೀರ ಕಣವಿ ಹೊಸಗನ್ನಡ ಕಾವ್ಯದ 2ನೇ ತಲೆಮಾರಿನ ಕವಿ. ಪ್ರಕೃತಿಲೀಲೆ, ಪ್ರಣಯ, ದಾಂಪತ್ಯ, ವಾತ್ಸಲ್ಯದಂತಹ ರಮ್ಯ ಪರಂಪರೆಯ ನವ್ಯ ವಿಷಯಗಳು ಅವರ ಕೃತಿಗಳಲ್ಲಿವೆ. ಕಣವಿ ಜನಸಾಮಾನ್ಯರಿಗೆ ಸರಳವಾಗಿ ಕಾವ್ಯದ ರುಚಿ ಉಣಬಡಿಸಿದ ಶ್ರೇಷ್ಠಕವಿ ಮಾತ್ರವಲ್ಲ ಒಬ್ಬ ವಿಮರ್ಶಕರೂ ಹೌದು.

ಚನ್ನವೀರ ಕಣವಿಯವರು ಗದಗ ಜಿಲ್ಲೆಯ ಹೊಂಬಳ ಗ್ರಾಮದಲ್ಲಿ 1928 ರ ಜೂನ್ 28 ರಂದು ಜನಿಸಿದರು. ತಂದೆ ಸಕ್ಕರೆಪ್ಪ ಮತ್ತು ತಾಯಿ ಪಾರ್ವತವ್ವ. ತಂದೆ ಸಕ್ಕರೆಪ್ಪ ಪ್ರಾಥಮಿಕ ಶಾಲೆಯಲ್ಲಿ ಶಿಕ್ಷಕರಾಗಿದ್ದರು. ಧಾರವಾಡದಲ್ಲಿಯೆ ಮಾಧ್ಯಮಿಕ ಹಾಗು ಕಾಲೇಜು ಶಿಕ್ಷಣ ಪೂರೈಸಿ ಕಣವಿಯವರು 1952ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯದಿಂದ ಎಂ.ಎ. ಪದವಿ ಪಡೆದು ಆಗ ತಾನೆ ಆರಂಭವಾಗಿದ್ದ ವಿಶ್ವವಿದ್ಯಾಲಯದ ಪ್ರಸಾರಾಂಗ ವಿಭಾಗದ ಕಾರ್ಯದರ್ಶಿಯಾಗಿದ್ದರು.

1956ರ ವೇಳೆಗೆ ಅದೇ ವಿಭಾಗದ ನಿರ್ದೇಶಕರಾಗಿ 1983 ರವರೆಗೆ ಸೇವೆ ಸಲ್ಲಿಸಿದರು. ಅವರ ಪತ್ನಿ ಶಾಂತಾದೇವಿ ಅವರು ಕೂಡ ಸಾಹಿತ್ಯ ಸಂಸ್ಕೃತಿಯ ಒಲವುಳ್ಳ ದೊಡ್ಡ ಮನೆತನದಿಂದ ಬಂದವರು.

ಚನ್ನವೀರ ಕಣವಿಯವರು ವಿಮರ್ಶೆಯನ್ನು ಬರೆದಿದ್ದರಾದರೂ ಪ್ರಧಾನವಾಗಿ ಅವರು ಕವಿಯಾಗಿದ್ದರು. ಚೆನ್ನವೀರ ಕಣವಿಯವರು ಕವಿಯಾಗಿ ಪ್ರಕಟವಾಗಿದ್ದು ನವೋದಯದ 'ನಡುಹಗಲ' ಕಾಲದಲ್ಲಿ. ಬೇಂದ್ರೆ, ಕುವೆಂಪು, ಪು.ತಿ.ನ, ಮಧುರಚೆನ್ನ ಮೊದಲಾದವರ ಕಾವ್ಯ ಹೊಸದಾಗಿ ಕಾವ್ಯ ರಚನೆಗೆ ತೊಡಗುವವರನ್ನು ಗಾಢವಾಗಿ ಪ್ರಭಾವಿಸುತ್ತಿದ್ದ ಕಾಲ ಅದು.

ಕಣವಿ ಅವರ ಪ್ರಾರಂಭದ ರಚನೆಗಳಲ್ಲಿ ಇಂಥ ಪ್ರಭಾವಗಳ ನೆಲೆಯನ್ನು ಗುರುತಿಸಬಹುದಾಗಿದ್ದು, ಅವರ ಕಾವ್ಯದಲ್ಲಿ ರಮ್ಯ ಮನೋಧರ್ಮ, ಆದರ್ಶಪ್ರಿಯತೆ, ವ್ಯಕ್ತಿತ್ವ ನಿರ್ಮಾಣದ ಹಂಬಲಗಳು ವಿಶೇಷವಾಗಿ ಕಂಡು ಬರುತ್ತವೆ. 1949ರಲ್ಲಿ ಪ್ರಕಟವಾದ 'ಕಾವ್ಯಾಕ್ಷಿ', 1950ರಲ್ಲಿ ಪ್ರಕಟವಾದ 'ಭಾವಜೀವಿ' ಸಂಗ್ರಹಗಳಲ್ಲಿ ಈ ಎಲ್ಲ ಅಂಶಗಳನ್ನೂ ಗುರುತಿಸಬಹುದು.

1953ರಲ್ಲಿ ಕಣವಿಯವರ ಮೂರನೆಯ ಸಂಗ್ರಹ 'ಆಕಾಶಬುಟ್ಟಿ' ಪ್ರಕಟವಾಯಿತು. ಈ ಸಂಗ್ರಹದಲ್ಲಿ ಕಣವಿ ಅವರ ಆಸಕ್ತಿಗಳು ವಿಸ್ತಾರಗೊಳ್ಳುತ್ತಿರುವ ಸೂಚನೆಗಳಿವೆ. ಸಾಮಾಜಿಕತೆ ಈ ಸಂಗ್ರಹದಲ್ಲಿ ಗುರುತಿಸಲೇಬೇಕಾದ ಬಹುಮುಖ್ಯ ಅಂಶವಾಗಿದೆ. ಸಮಾಜದ ದೋಷಗಳನ್ನು ಕವಿ ಇಲ್ಲಿ ವ್ಯಗ್ರರಾಗಿ ಟೀಕೆಗೆ ಗುರಿ ಮಾಡುತ್ತಾರೆ. ವ್ಯಂಗ್ಯದ ಧಾಟಿ ಇಂಥ ಸಂದರ್ಭಗಳಲ್ಲಿ ಮುಖ್ಯವಾಗುತ್ತಿತ್ತು.

ಬಸವರಾಜ ಕಟ್ಟೀಮನಿ, ನಿರಂಜನ, ಎಕ್ಕುಂಡಿ ಮೊದಲಾದವರ ಸ್ನೇಹ ಸಂಪರ್ಕ ಮತ್ತು ಆಗ ಪ್ರಚಲಿತವಿದ್ದ ಪ್ರಗತಿಶೀಲ ಸಾಹಿತ್ಯ ಚಳವಳಿ ಅವರನ್ನು ಪ್ರಭಾವಿಸಿರಬಹುದು. ಆಕಾಶಬುಟ್ಟಿ ಸಂಗ್ರಹದಲ್ಲಿರುವ ಪ್ರಜಾಪ್ರಭುತ್ವ ಎಂಬ ಕವಿತೆಯನ್ನು ನಾವಿಲ್ಲಿ ವಿಶೇಷವಾಗಿ ನೆನೆಯಬೇಕು.

ಶೈಕ್ಷಣಿಕ ವಲಯದ ಶಾಂತಿ ಕದಡುವ ಯತ್ನಕ್ಕೆ ಆತಂಕ ವ್ಯಕ್ತಪಡಿಸಿದ ಸೌಹಾರ್ದತೆಗಾಗಿ ಕರ್ನಾಟಕ

ಶಿರವಸ್ತ್ರ(ಹಿಜಾಬ್) ಕೇಸರಿ ಶಾಲು ವಿವಾದವು ಶೈಕ್ಷಣಿಕ ವಲಯದಲ್ಲಿ ಬಹುವಾಗಿ ವಿದ್ಯಾರ್ಥಿಗಳಲ್ಲಿ ಶಾಂತಿ ಕದಡುವ ಮೂಲಕ ಮಕ್ಕಳ ಶಿಕ್ಷಣಕ್ಕೆ ಕುತ್ತಾಗಿ ಪರಿಣಮಿಸಿರುವುದಕ್ಕೆ ಆತಂಕ ವ್ಯಕ್ತಪಡಿಸಿರುವ ಸೌಹಾರ್ದತೆಗಾಗಿ ಕರ್ನಾಟಕವು ಹೇಳಿಕೆಯನ್ನು ಬಿಡುಗಡೆಗೊಳಿಸಿದೆ.

ಅದರ ಪೂರ್ಣ ಹೇಳಿಕೆ ಹೀಗಿವೆ; ವಿದ್ಯಾರ್ಥಿನಿಯರು ಶಿರವಸ್ತ್ರ- ಹಿಜಾಬ್ ಧರಿಸಿ ತರಗತಿಗಳಿಗೆ ಹಾಜರಾಗುವ ವಿಷಯವು ಅತ್ಯಂತ ತೀವ್ರ ವಿವಾದವಾಗಿ ಬೆಳೆದು ಶಾಂತಿ, ಸೌಹಾರ್ದತೆ, ಒಗ್ಗಟ್ಟು ಮತ್ತು ಶೈಕ್ಷಣಿಕ ಶಾಂತಿಯನ್ನು ಕದಡುವ ಮಟ್ಟಕ್ಕೆ ಹೋಗಿರುವ ಪ್ರಕರಣದ ಬಗ್ಗೆ ನಾವೆಲ್ಲರೂ ಅತ್ಯಂತ ಆತಂಕಿತರಾಗಿದ್ದೇವೆ.

ಈ ವಿವಾದ ಹೇಗೆ ಆರಂಭಗೊಂಡಿದ್ದರೂ ಅದೀಗ ಹೆಣ್ಣುಮಕ್ಕಳ ಅದರಲ್ಲೂ ಮುಖ್ಯವಾಗಿ, ಮುಸ್ಲಿಮ್ ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಕುತ್ತಾಗಿ ಪರಿಣಮಿಸುತ್ತಿದೆ. ಶಿರವಸ್ತ್ರದ ಕಾರಣಕ್ಕೆ ಶಿಕ್ಷಣದಿಂದ ವಂಚಿತರಾಗಬೇಕಾಗುತ್ತಿದೆ. ಮುಸ್ಲಿಮೇತರ ಮಕ್ಕಳು ಕೂಡ ಈ ವಿವಾದದಿಂದಾಗಿ ಶಿಕ್ಷಣದಿಂದ ದೂರವಾಗುವ ಸ್ಥಿತಿ ನಿರ್ಮಾಣವಾಗಿದೆ.

ಈ ವಿವಾದವು ಎರಡೂ ಕಡೆಯ ಮತೀಯ ಶಕ್ತಿಗಳ ರಾಜಕೀಯ ದುರುಪಯೋಗದ ಅಸ್ತ್ರವಾಗುತ್ತಿದೆ. ಮಕ್ಕಳು ಮತೀಯತೆಯ ರಾಜಕಾರಣಕ್ಕೆ ದಾಳಗಳಾಗುತ್ತಿರುವುದು ವಿಷಾದನೀಯ, ಖಂಡನೀಯ. ಇಂತಹ ಶಕ್ತಿಗಳ ಆಟಕ್ಕೆ ಪೋಷಕರು, ಮಕ್ಕಳು, ಪ್ರಜ್ಞಾವಂತ



ನಾಗರೀಕರು ಅವಕಾಶ ನೀಡಬಾರದು ಎಂದು ವಿನಂತಿಸುತ್ತೇವೆ.

ವಸ್ತ್ರ ಸಂಹಿತೆಯ ಹೆಸರಿನಲ್ಲಿ ಶಿಕ್ಷಣದ ಹಕ್ಕಿಗೆ ಎಂದೂ ವಂಚನೆ ಮಾಡಬಾರದು. ಸಮವಸ್ತ್ರವನ್ನು ಉಳಿಸಿಕೊಂಡು ಸಮಸ್ಯೆಯನ್ನು ಸೌಹಾರ್ದಯುತವಾಗಿ ಬಗೆಹರಿಸಿ ಕೊಂಡು ಹೆಣ್ಣು ಮಕ್ಕಳು ಶಿಕ್ಷಣ ಪಡೆಯುವಂತಾಗಬೇಕು. ಇದು ಸಂವಿಧಾನಾತ್ಮಕ ಹಕ್ಕಾಗಿದೆ, ಅದನ್ನು ಉಳಿಸಬೇಕು.

ಈ ಒಟ್ಟು ಸನ್ನಿವೇಶವನ್ನು ರಾಜಕೀಯ ಶಕ್ತಿಗಳು ದುರುಪಯೋಗಪಡಿಸಿಕೊಳ್ಳದಂತೆ ತಡೆಯಲು ಎಚ್ಚರವಹಿಸಬೇಕು. ಶೈಕ್ಷಣಿಕ ಶಾಂತಿ ನಮಗೆ ಬೇಕು. ಶಿಕ್ಷಣದ ಹಕ್ಕು ಸಂರಕ್ಷಣೆ ಮಾಡುವುದು ನಮ್ಮೆಲ್ಲರ ಆದ್ಯತೆಯಾಗಬೇಕು.

ಈ ಪ್ರಶ್ನೆಯು ಹುಟ್ಟು ಹಾಕಿರುವ ಮತ್ತು ಅದರ ದೀರ್ಘಾವಧಿ ಪರಿಣಾಮಗಳನ್ನು ಗಂಭೀರವಾಗಿ ಅರಿತು ಸೌಹಾರ್ದಯುತವಾಗಿ ಬಗೆಹರಿಯಲು ಸಂಬಂಧಿಸಿದ ಎಲ್ಲಾ ಭಾಗೀದಾರ ಪಕ್ಷಗಳು ಮತ್ತು ಸಮಾಜದ ಜನತೆ ಮುಂದಾಗಬೇಕು ಎಂದು ಕಳಕಳಿಯಿಂದ ವಿನಂತಿಸುತ್ತೇವೆ.

ಈ ಮೇಲಿನ ವಿಚಾರವನ್ನು ಒಳಗೊಂಡ ಜಂಟಿ ಹೇಳಿಕೆಯನ್ನು ಡಾ. ಕೆ. ಮರುಳಸಿದ್ದಪ್ಪ, ಪ್ರೊ. ಬರಗೂರು ರಾಮಚಂದ್ರಪ್ಪ, ಡಾ. ಜಿ. ರಾಮಕೃಷ್ಣ, ಬೊಳುವಾರು ಮಹಮದ್ ಕುಂಞಿ, ಪ್ರೊ. ಅರವಿಂದ ಮಾಲಗತ್ತಿ, ಡಾ. ಎಸ್.ಜಿ. ಸಿದ್ಧರಾಮಯ್ಯ, ಪ್ರೊ. ಪುರುಷೋತ್ತಮ ಬಿಳಿಮಲೆ, ಪ್ರೊ. ನರೇಂದ್ರ ನಾಯಕ್, ಡಾ. ಬಂಜಗೆರೆ ಜಯಪ್ರಕಾಶ್, ಡಾ. ವಿಜಯಾ, ಡಾ. ಹೆಚ್.ಎಸ್. ಅನುಪಮಾ, ಡಾ. ವಿನಯಾ ಒಕ್ಕುಂದ, ಡಾ. ಎನ್. ಗಾಯತ್ರಿ, ಪ್ರೊ. ಸುಕನ್ಯಾ ಮಾರುತಿ, ಡಾ. ಕೆ. ಶರೀಫಾ, ಕೆ. ನೀಲಾ, ಡಾ. ವಸುಂದರಾ ಭೂಪತಿ, ಸೂಫಿ ವಲಿಬಾ, ಡಾ. ಪ್ರಭು ಖಾನಾಪುರೆ, ಅಮೀರ್ ಜಾನ್ ಖಾದ್ರಿ, ಮಾವಳ್ಳಿ ಶಂಕರ್, ಲಕ್ಷ್ಮೀನಾರಾಯಣ ನಾಗವಾರ, ಫಾ. ಡಾ. ಮನೋಹರಚಂದ್ರ ಪ್ರಸಾದ್, ಪೆರಿಕೋ ಪ್ರಭು, ಮುನೀರ್ ಕಾಟಿಪಳ್ಳ, ಡಾ. ಎಸ್.ವೈ. ಗುರುಶಾಂತ್, ಕೆ.ಎಸ್. ವಿಮಲಾ, ಗೋಪಾಲಕೃಷ್ಣ ಅರಳಹಳ್ಳಿ, ಬಿ. ರಾಜಶೇಖರಮೂರ್ತಿ ಸೇರಿದಂತೆ ಹಲವು ಮಂದಿ ಧ್ವನಿಯಾಗಿದ್ದಾರೆ.

ಅರಣ್ಯ ಇಲಾಖೆಯ ಕಿರುಕುಳವನ್ನು ತಡೆಗಟ್ಟುವಂತೆ ಕೆಪಿಆರ್‌ಎಸ್ ಒತ್ತಾಯ



ಬೇಲೂರು ತಾಲ್ಲೂಕಿನ ಅಡವಿ ಬಂಟೇನಹಳ್ಳಿಯ ಗ್ರಾಮದಲ್ಲಿ ಸುಮಾರು 70 ವರ್ಷಗಳಿಂದ (1952 ರಿಂದ) ಇದೇ ಗ್ರಾಮದಲ್ಲಿ ಸರ್ಕಾರಿ ಭೂಮಿಯನ್ನು ಸಾಗುವಳಿ ಮಾಡಿಕೊಂಡು ಕೃಷಿ ಚಟುವಟಿಕೆಯ ಮೂಲಕ ಜೀವನ ಸಾಗಿಸುತ್ತಿದ್ದ 83 ಕುಟುಂಬಕ್ಕೆ 1968–69 ನೇ ಸಾಲಿನಲ್ಲಿ ಸರ್ಕಾರವು ಕಂದಾಯ ಇಲಾಖೆಯ ಮೂಲಕ ಬಗರ್ ಹುಕುಂ ಸಾಗುವಳಿಯ ಆಧಾರದ ಮೇಲೆ ಸಾಗುವಳಿ ಚೀಟಿಗಳನ್ನು ನೀಡಿದೆ. ಸಾಗುವಳಿ ಮಾಡುತ್ತಿರುವ ರೈತರ ಹೆಸರುಗಳಲ್ಲೇ ಪಹಣಿಗಳು ಬರುತ್ತಿವೆ. ಇದೇ ಭೂಮಿಯಲ್ಲಿ ವಿದ್ಯುತ್ ಸಂಪರ್ಕ ಪಡೆದು ಕೊಳವೆ ಬಾವಿಗಳನ್ನು ಕೊರೆಸಿ, ಮನೆಗಳನ್ನು ಕಟ್ಟಿಕೊಂಡು, ತೆಂಗಿನ ಮರಗಳನ್ನು ಬೆಳೆಸಿ, ಪಹಣಿಯ ಆಧಾರದಲ್ಲಿ ಬ್ಯಾಂಕ್‌ಗಳಲ್ಲಿ ಸಾಲವನ್ನೂ ಪಡೆದಿರುತ್ತಾರೆ.

ಆದರೆ 2015 ಫೆಬ್ರವರಿ 12–13 ರಂದು ಅರಣ್ಯ ಇಲಾಖೆಯ ಅಧಿಕಾರಿಗಳು ಈ ಭೂಮಿ ಅರಣ್ಯ ಇಲಾಖೆಗೆ ಸಂಬಂಧಿಸಿದ್ದು ಇದನ್ನು ತೆರವುಗೊಳಿಸಬೇಕೆಂದು ನೋಟಿಸ್ ಜಾರಿ ಮಾಡಿ ತೆರವಿಗೆ ಮುಂದಾದಾಗ ರೈತರು ಸಂಘಟಿತರಾಗಿ ಕರ್ನಾಟಕ ಪ್ರಾಂತ ರೈತ ಸಂಘದ ನೇತೃತ್ವದಲ್ಲಿ ಚಳುವಳಿ ನಡೆಸಿ ತೆರವು ಕಾರ್ಯಾಚರಣೆಯನ್ನು ತಡೆಯುತ್ತಾರೆ. ಇದೇ ಸಂದರ್ಭದಲ್ಲಿ ಅರಣ್ಯ ಇಲಾಖೆಯವರು ಕೊಟ್ಟ ನೋಟೀಸ್ ಮತ್ತು ಅವರ ಧಾಖಲಾತಿಗಳ ಪ್ರಕಾರ ಈ ಭೂಮಿ ಹಾಸನ ತಾಲ್ಲೂಕಿನ ಸೀಗೆ ಗುಡ್ಡ ಕಾವಲಿಗೆ ಸೇರಿದ ಸರ್ವೆ ನಂಬರ್ 74–75 ಆಗಿದ್ದು ಇದು ಅರಣ್ಯ ಇಲಾಖೆಗೆ ಒಳಪಟ್ಟಿದ್ದು ಎಂದು ಅರಣ್ಯ ಇಲಾಖೆಯ ಅಧಿಕಾರಿಗಳು ಹೇಳಿದರು. ಅದೇ ಸಂದರ್ಭದಲ್ಲಿ ಅಡವಿ ಬಂಟೇನಹಳ್ಳಿಯಲ್ಲಿ ವಾಸವಾಗಿದ್ದು ಸಾಗುವಳಿ ಮಾಡುತ್ತಿರುವ ರೈತ ಕುಟುಂಬಗಳಿಗೆ 1968–69 ರಲ್ಲಿ ಕಂದಾಯ ಇಲಾಖೆಯಿಂದ ಬೇಲೂರು ತಾಲ್ಲೂಕು ಶಿವಪುರ ಕಾವಲಿನ ಸರ್ವೆ ನಂಬರ್ 1 ಕ್ಕೆ ಸಾಗುವಳಿ ಚೀಟಿ ನೀಡಿದ್ದು, ಪ್ರಸ್ತುತ ಪಹಣಿಗಳಲ್ಲೂ ಶಿವಪುರ ಕಾವಲು ಸರ್ವೆ ನಂಬರ್ 1 ಎಂದು ಬರುತ್ತಿದೆ.

ಈ ನಡುವೆ ಮತ್ತೆ ರೈತರ ಮೇಲೆ ಅರಣ್ಯ ಇಲಾಖೆಯ ದೌರ್ಜನ್ಯ ಹೆಚ್ಚಾಗಿದ್ದು ಕೆಲವು ರೈತರಿಗೆ ಈ ಭೂಮಿಯನ್ನು ತೆರವುಗೊಳಿಸುವುದಾಗಿ ನೋಟೀಸ್ ಜಾರಿ ಮಾಡಿದ್ದಾರೆ. ಕಳೆದ 7 ವರ್ಷಗಳಿಂದ ಯಾವಾಗ ಅರಣ್ಯ ಇಲಾಖೆಯವರು ಬಂದು ತೊಂದರೆ ಕೊಡುತ್ತಾರೋ ಎನ್ನುವ ಭಯದಲ್ಲೇ ಇಲ್ಲಿಯ ರೈತರು ಜೀವನ ನಡೆಸಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ. ರೈತರು ಉಳುಮೆ ಮಾಡುತ್ತಿರುವ ಕೃಷಿ ಭೂಮಿ ಕಂದಾಯ ಇಲಾಖೆಗೆ ಸೇರಿದ್ದಾ ಅಥವಾ ಅರಣ್ಯ ಇಲಾಖೆಗೆ ಸೇರಿದ್ದಾ ಎಂಬುದನ್ನು ಎರಡು ಇಲಾಖೆಗಳು ಸೇರಿ ಇತ್ಯರ್ಥಪಡಿಸಬೇಕು. ಆದರೆ ಈ ಕೆಲಸವನ್ನು ಮಾಡದ ಅಧಿಕಾರಿಗಳು ನಿರಂತರವಾಗಿ ರೈತರಿಗೆ ತೊಂದರೆ ನೀಡುತ್ತಿದ್ದಾರೆ.

ಬೇಲೂರು ಮತ್ತು ಹಾಸನ ತಾಲ್ಲೂಕಿನ ಗಡಿಭಾಗಗಳಲ್ಲಿ ಬರುವ ಸೀಗೆಗುಡ್ಡ ಕಾವಲು, ಶಿವಪುರ ಕಾವಲು, ಐದಳ್ಳ ಕಾಲವುಗಳಲ್ಲಿ ಇದೇ ರೀತಿಯ ಗೊಂದಲಗಳಿವೆ. ಇಂತಹ ಗೊಂದಲಗಳಿಂದಾಗಿ ಗಡಿಬಾಗದ ರೈತರು ಅತ್ಯಂತ ಸಂಕಷ್ಟಕ್ಕೆ ಒಳಗಾಗಿ ಅರಣ್ಯ ಇಲಾಖೆಯಿಂದ ನಿರಂತರವಾಗಿ ಕಿರುಕುಳ ಅನುಭವಿಸುತ್ತಿದ್ದಾರೆ. ಹಾಸನ ಜಿಲ್ಲಾಧಿಕಾರಿಗಳು ಕೂಡಲೇ ಮಧ್ಯಪ್ರವೇಶ ಮಾಡಿ ಕಂದಾಯ ಇಲಾಖೆ ಮತ್ತು ಅರಣ್ಯ ಇಲಾಖೆ ಜೊತೆಗೆ ಹಾಸನ – ಬೇಲೂರು ತಾಲ್ಲೂಕುಗಳ ತಹಸಿಲ್ದಾರ್‌ಗಳು ಹಾಗೂ ಉಪವಿಭಾಗಾಧಿಕಾರಿಗಳು ಮತ್ತು ರೈತ ಮುಖಂಡರನ್ನು ಒಳಗೊಂಡಂತೆ ತಮ್ಮ ಅಧ್ಯಕ್ಷತೆಯಲ್ಲಿ ಸಭೆಯನ್ನು ನಡೆಸಿ ಕಂದಾಯ ಮತ್ತು ಅರಣ್ಯ ಇಲಾಖೆಗಳು ಜಂಟಿಯಾಗಿ ಜಿಪಿಎಸ್ ಸರ್ವೆ ನಡೆಸಲು ಆದೇಶಿಸಿ ಈ ಗೊಂದಲಕ್ಕೆ ತೆರೆಯೆಳೆದು ರೈತರಿಗೆ ಅನುಕೂಲ ಮಾಡಿಕೊಡಬೇಕೆಂದು ಕರ್ನಾಟಕ ಪ್ರಾಂತ ರೈತ ಸಂಘ (ಕೆಪಿಆರ್‌ಎಸ್) ಹಾಸನ ಜಿಲ್ಲಾ ಸಮಿತಿಯು ಅಡವಿ ಬಂಟೇನಹಳ್ಳಿ ಗ್ರಾಮಸ್ಥರ ಪರವಾಗಿ ಪ್ರತಿಭಟನೆ ಮಾಡಿ ಮನವಿ ಮಾಡಿದೆ.

ಲಸಿಕಾ–ವಿರೋಧ ಎಷ್ಟು ಸರಿ?

ಲಸಿಕೆಯೂ ಸೇರಿ ಯಾವುದೇ ಔಷಧ ಮಾತ್ರವಲ್ಲ ಆಹಾರ ಪದಾರ್ಥಗಳು ಕೂಡಾ ಉಪಯೋಗಿಸುವವರಲ್ಲಿ ಅತ್ಯಲ್ಪ ಪ್ರಮಾಣದಿಂದ ಹಿಡಿದು ಬಹಳ ಗಂಭೀರ ಪರಿಣಾಮಗಳನ್ನು ಬೀರುವ ಸಾಧ್ಯತೆ ಇದೆ. ಇದಕ್ಕೆ ಕೋವಿಡ್ ಲಸಿಕೆಯೂ ಅಪವಾದವಲ್ಲ. ಆದರೆ ಇದೇ ಕಾರಣಕ್ಕೆ ಕೊವಿಡ್ ತಡೆಗಟ್ಟುವ ಲಸಿಕೆ ಮತ್ತು ಇತರ ವಿಧಾನಗಳಿಗೆ ವಿರೋಧ ಸಮಂಜಸ ವೆನಿಸಲಾರದು. ನಮ್ಮ ಸಮಾಜವನ್ನು ಸಾಂಕ್ರಾಮಿಕದಿಂದ ರಕ್ಷಿಸಲು ಲಸಿಕೆ ಪಡೆಯುವುದರೊಂದಿಗೆ ಕೋವಿಡ್ ತಡೆಗಟ್ಟುವ ಸೂಕ್ತ ನಡವಳಿಕೆಯನ್ನು ಪಾಲಿಸುವುದು ನಮ್ಮೆಲ್ಲರ ಕರ್ತವ್ಯ.

ಈ ಲಸಿಕಾ ವಿರೋಧ ಕೇವಲ ಕೋವಿಡ್ ಲಸಿಕೆಯ ವಿರುದ್ಧವಾಗಿ ಮಾತ್ರ ಪ್ರಚಲಿತದಲ್ಲಿ ಪ್ರಾರಂಭವಾದದ್ದಲ್ಲ. ಬದಲು ವೈದ್ಯ ಝನ್ನರ್ 18ನೇ ಶತಮಾನದಲ್ಲಿ ಮೊತ್ತ ಮೊದಲ ಅಂತ್ಯದಲ್ಲಿ/ಸಿಡುಬು ಕಾಯಿಲೆಯ ವಿರುದ್ಧದ ಲಸಿಕೆ ಕಂಡು ಹಿಡಿದಾಗಿನಿಂದಲೆ ಕಾಣಿಸಿಕೊಂಡಿತ್ತು. ಅಮೇರಿಕಾದಲ್ಲಿ 1860 ರಲ್ಲಿ ಪ್ರಾರಂಭವಾದ ಈ ವಿರೋಧ ಮುಂದೆ ಅಲ್ಲಿ ಈ ಲಸಿಕೆಯನ್ನು ಜನಸಾಮಾನ್ಯರು ತೆಗೆದುಕೊಳ್ಳುವುದನ್ನು ಕಡ್ಡಾಯಗೊಳಿಸಿದಾಗ ಉಲ್ಬಣಿಸಿತ್ತು. 1879 ರಲ್ಲಿ ಅಲ್ಲಿ ಲಸಿಕಾ ವಿರೋಧಿ ಸಂಘಟನೆ ಸ್ಥಾಪನೆಗೊಂಡಿತು. ಇದು ಲಸಿಕೆ ನೀಡುವ ಹಿಂದಿರುವ ಉದ್ದೇಶವನ್ನೇ ಪ್ರಶ್ನಿಸಿತ್ತು. ಜನಸಾಮಾನ್ಯರ ಆರೋಗ್ಯದ ಬಗೆಗಿನ ಕಾಳಜಿಯಿಂದ ಈ ಲಸಿಕೆ ನೀಡಲಾಗುತ್ತಿಲ್ಲ. ಈ ಲಸಿಕೆ & ತಯಾರಿಕೆ ದೊಡ್ಡ ಔಷಧ ಕಂಪೆನಿಗಳಿಗೆ ಅಪಾರ ಲಾಭ ತರುತ್ತದೆ. ಇವರು ನೀಡುವ ಲಂಚದಿಂದ ಪ್ರೇರಿತರಾದ ವೈದ್ಯಕೀಯ ಸಂಸ್ಥೆಗಳು, ವೈದ್ಯರು, ವಿಜ್ಞಾನಿಗಳು, ರಾಜಕೀಯ ವ್ಯಕ್ತಿಗಳು, ಈ ಲಸಿಕೆಯಿಂದ ಜನಸಾಮಾನ್ಯರಿಗಾಗುವ ಅಪಾಯಗಳನ್ನು ಮುಚ್ಚಿಟ್ಟು, ಅದರ ಉಪಯೋಗದಿಂದಾಗುವ ಲಾಭದ ಬಗೆಗೆ ಸುಳ್ಳು ಮಾಹಿತಿಗಳನ್ನು ಜನರಿಗೆ ನೀಡುತ್ತಾರೆ ಎಂದು ಈ ಸಂಘಟನೆ ಪತ್ರಿಕೆಗಳಲ್ಲಿ ಲೇಖನ ಬರೆಯಿತು. ದೊಡ್ಡ ದೊಡ್ಡ ಜಾಹೀರಾತು ಫಲಕಗಳ ಮೂಲಕ ಜನಸಾಮಾನ್ಯರಿಗೆ ತಪ್ಪು ಮಾಹಿತಿಗಳನ್ನು ನೀಡಿತು. ಕಡ್ಡಾಯ ಲಸಿಕೆ ಹಾಕುವುದು ವ್ಯಕ್ತಿಯ ಸ್ವಾತಂತ್ರ್ಯ ಹರಣ ಎಂದು ಖಂಡ ತುಂಡವಾಗಿ ವಾದಿಸಿತು. ಇದರಿಂದಾಗಿ ಮುಂದಿನ ದಿನಗಳಲ್ಲಿ ಲಸಿಕೆಯ ಉಪಯೋಗ ಜನಸಾಮಾನ್ಯರಲ್ಲಿ ತಳಕಂಡಿತು. ಹೀಗಾಗಿ ಎರಡು ದಶಕಗಳ ನಂತರ ಅಮೇರಿಕಾದಲ್ಲಿ ಸಿಡುಬು ದೊಡ್ಡ ಮಟ್ಟದಲ್ಲಿ ಕಾಣಿಸಿಕೊಂಡಿತ್ತು.

ಈ ಲಸಿಕಾ ವಿರೋಧ ಆಗ ಮಾತ್ರವಲ್ಲ ಸತತವಾಗಿ ಮುಂದುವರಿದಿದೆ. ಮೊಸೆಲ್ಸ್, ದುಮ್ಸ್, ರುಬೆಲ್ಲಾ ಎನ್ನುವ ಮೂರು ಕಾಯಿಲೆಗಳನ್ನು ತಡೆಗಟ್ಟುವ 'ಎಮ್.ಎಮ್.ಆರ್.' ಲಸಿಕೆಯನ್ನು ಮಕ್ಕಳಿಗೆ ನೀಡುವುದರಿಂದ 'ಆಟಿಸಂ' ಎನ್ನುವ ಕಾಯಿಲೆ ಮಕ್ಕಳಲ್ಲಿ ಕಾಣಿಸಿಕೊಳ್ಳುತ್ತದೆಯೆನ್ನುವ ಅಪಪ್ರಚಾರ ಅಮೇರಿಕಾದಲ್ಲಿ ಇತ್ತೀಚೆಗೆ ನಡೆದಿತ್ತು.

ಲಸಿಕೆಯ ಮಹತ್ವ:

1980 ರಲ್ಲಿ ಪ್ರಪಂಚ ಸಿಡುಬಿನಿಂದ ಮುಕ್ತವಾಗಿತ್ತು. ಅಂದಿನ ದಿನಗಳಲ್ಲಿ ಪ್ರಬಲವಾಗಿದ್ದ ವಿಶ್ವ ಆರೋಗ್ಯ ಸಂಸ್ಥೆಯ ನೇತೃತ್ವದಲ್ಲಿ ಇಡೀ ಪ್ರಪಂಚದಲ್ಲಿ ನಡೆದ 'ಸಿಡುಬು ನಿರ್ಮೂಲನಾ ಅಭಿಯಾನ'ದಿಂದ ಇದು ಸಾಧ್ಯವಾಗಿತ್ತು.

ಆ ಕಾರ್ಯದಲ್ಲಿ ಸೆಫವಾಗಲು ಬಳಸಿದ ಅಸ್ತ್ರ, ಲಸಿಕಾ ವಿರೋಧಿಗಳಿಂದ ಬಲವಾಗಿ ವಿರೋಧಕ್ಕೊಳ್ಳಪಟ್ಟ, 1796 ರಲ್ಲಿ ವೈದ್ಯ ಝನ್ನರ್ ರಿಂದ ಕಂಡುಹಿಡಿಯಲ್ಪಟ್ಟ ಸಿಡುಬು ತಡೆಗಟ್ಟುವ ಲಸಿಕೆ.

ಮಕ್ಕಳಿಗೆ ಹಾಗೂ ಗರ್ಭಿಣಿ ಸ್ತ್ರೀಯರಿಗೆ ಸೂಕ್ತ ಕಾಲದಲ್ಲಿ ನೀಡುತ್ತಿದ್ದ ಲಸಿಕೆಯಿಂದಾಗಿ ಇಂದು

ಡಾ. ಕೆ. ಸುಶೀಲ

ಪೋಲಿಯೋ, ಡಿಫ್ತೀರಿಯಾ, ನಾಯಿ ಕೆಮ್ಮು, ದ–ಮಿಸೆಲ್ಸ್(ಢಡಾರ) ನವಜಾತ ಶಿಶುಗಳಲ್ಲಿನ ಪೆಟಿನೆಸ್, ಕಾಯಿಲೆಗಳು ನಮ್ಮ ದೇಶದಲ್ಲಿ ಗಣನೀಯ ಪ್ರಮಾಣದಲ್ಲಿ ಇಳಿಕೆ ಕಂಡಿವೆ. ಮುಂದಿನ ದಿನಗಳಲ್ಲಿ ಕಂಡು ಹಿಡಿದೆ ಇತರ ಕೆಲವು ಲಸಿಕೆಗಳು ಅಸಂಖ್ಯಾತ ಜೀವವನ್ನು ಉಳಿಸುವಲ್ಲಿ ಪ್ರಮುಖ ಪಾತ್ರ ವಹಿಸುವುದು ಕಾಣಿಸುತ್ತಿದೆ.

ಇಂದಿನ ದಿನಗಳಲ್ಲಿ ಲಸಿಕೆಯೂ ಸೇರಿ ಕೋವಿಡ್–19 ಕಾಯಿಲೆ ತಡೆಗಟ್ಟು ವಿವಿಧ ವಿಧಾನಗಳ ವಿರೋಧ:

ಕೋವಿಡ್–19 ಈ ಪ್ರಪಂಚಕ್ಕೆ ಕಾಲಿಟ್ಟ ದಿನಗಳಲ್ಲಿ 'ಕೋವಿಡ್' ಎನ್ನುವ ಕಾಯಿಲೆಯೇ ಸುಳ್ಳು ಎನ್ನುವ ವಾದ ಪ್ರಪಂಚದ ಹಲವು ಭಾಗಗಳಿಂದ ಕೇಳಿಬಂದಿತ್ತು. ಆದರೆ ಈ ಕಾಯಿಲೆಯ ಭೀಕರ ದರ್ಶನ ಮುಂದುವರಿದಂತೆ ಈ ಗುಂಪಿನವಾದ ಕ್ಷೀಣಗೊಳ್ಳುತ್ತಾ ಬಂದಿತ್ತು.

ಕೋವಿಡ್‌ನಿಂದ ಬಳಲುವ ವ್ಯಕ್ತಿಯ ಉಸಿರು ಹಾಗೂ ಮಾತನಾಡುವಾಗ ಬಾಯಿಂದ ಹೊರ ಸಿಡಿಯುವ ಸೂಕ್ಷ್ಮ ಎಂಜಲು ಕಣಗಳ ಮೂಲಕ ಹೊರಬಂದು ಹತ್ತಿರದಲ್ಲಿರುವ ಆರೋಗ್ಯವಂತ ಮೂಗು ಬಾಯಿ ಕಣ್ಣಿನ ಮೂಲಕ ಅವರ ದೇಹ ಪ್ರವೇಶಿಸುವ 'ಸಾರ್ಸ್–ಕೋವ್–2' ವೈರಸ್ ಅವರಲ್ಲಿ ಕಾಯಿಲೆಯನ್ನುಂಟು ಮಾಡುವುದು ತಿಳಿದ ವಿಷಯ. ಕೋವಿಡ್ ಕಾಣಿಸಿಕೊಂಡ ಪ್ರಾರಂಭಿಕ ದಿನಗಳಲ್ಲಿ ಈ ವಿಷಯ ಅರಿತ ತಜ್ಞರು, ಸೋಂಕು ತಡೆಗಟ್ಟಲು ಮೂಗು, ಬಾಯಿಗಳನ್ನು ಮಾಸ್ಕ್‌ಗಳಿಂದ ಮುಚ್ಚುವುದು, ಇಬ್ಬರು ವ್ಯಕ್ತಿಗಳ ನಡುವೆ ಅಂತರ ಕಾಪಾಡುವುದು, ಮೂಗು ಬಾಯಿಗಳನ್ನು ಮುಟ್ಟಿ ವೈರಸ್‌ಗಳಿಂದ ಕಲುಷಿತಗೊಂಡಕೈಗಳನ್ನು ಪದೇ ಪದೇ ಸಾಬೂನಿನಿಂದ ತೊಳೆಯುವುದು ಸೂಕ್ತ ವಿಧಾನವೆನ್ನುವ ಮಾಹಿತಿ ನೀಡಿದ್ದರು. ಆದರೆ ಮಾಸ್ಕ ತಯಾರಿಕೆಗೆ ಉಪಯೋಗಿಸುವ ವಸ್ತುಗಳಲ್ಲಿ ಸೂಕ್ಷ್ಮ ರಂದ್ರಗಳಿದ್ದು ವೈರಸ್‌ಗಳು ಈ ರಂಧ್ರದ ಪರಿಧಿಗಿಂತ ಅತೀ ಸೂಕ್ಷ್ಮವಿರುವುದರಿಂದ ಮಾಸ್ಕಧಾರಣೆ ಕೋವಿಡ್ ತಡೆಗಟ್ಟಲು ಪ್ರಯೋಜನಕಾರಿ ಅಲ್ಲ ಎಂದು ಹಲವರು ಆಕ್ಷೇಪಣೆ ಎತ್ತಿದ್ದರು. ಒಂದು ಪದರಿನ ಬಟ್ಟೆಯ ಮಾಸ್ಕ್ ಪ್ರತಿಶತ 20% ವೈರಸ್‌ಗಳನ್ನು ತಡೆಯಬಲ್ಲದಾದರೆ ಗುಣಮಟ್ಟ ಹೊಂದಿಕೊಂಡು 90–95% ವೈರಸ್‌ಗಳನ್ನು ತಡೆಗಟ್ಟಲು ಮಾಸ್ಕ್‌ಗಳಿಂದ ಸಾಧ್ಯ ಎನ್ನುವುದು. ಈ ವಿಷಯದಲ್ಲಿ ಸಂಶೋಧನೆ ಮಾಡಿದ ತಜ್ಞರು ಮಾಹಿತಿ ನೀಡಿದರು. ಈ ಎರಡು ವರ್ಷಗಳ ಅನುಭವದಲ್ಲಿ ಕೋವಿಡ್ ತಡೆಗಟ್ಟುವ ವಿಧಾನಗಳ ಸೂಕ್ತ ನಡವಳಿಕೆ ಪಾಲಿಸುವುದರಿಂದ ಬಹಳಷ್ಟು ಪ್ರಮಾಣದಲ್ಲಿ ಈ ಕಾಯಿಲೆ ತಡೆಗಟ್ಟಲು ಸಾಧ್ಯ ಎನ್ನುವುದು ಸಾಬೀತಾಗಿದೆ.

ಲಸಿಕೆ:

ಇಲ್ಲಿಯ ತನಕ ಉಪಯೋಗಕ್ಕೆ ಬಂದ ಲಸಿಕೆಗಳು 4–6 ವರ್ಷಗಳ ಅಧ್ಯಯನದ ನಂತರ ಉಪಯೋಗಕ್ಕೆ ಬಿಡುಗಡೆಗೊಂಡಂತಹವು. ಆದರೆ ಬಹಳ ಶೀಘ್ರವಾಗಿ ಹಬ್ಬುತ್ತಿದ್ದು, ಕಾಯಿಲೆ ಗುಣಪಡಿಸುವ ಸೂಕ್ತ ಔಷಧ ಇಲ್ಲದ ಕೋವಿಡ್ ತಡೆಗಟ್ಟಲು ಸೂಕ್ತ ಲಸಿಕೆಯ ಅವಶ್ಯಕತೆ ಬಹಳವಾಗಿತ್ತು. ಇದಕ್ಕಾಗಿ ಹಗಲಿರುಳು ಶ್ರಮಿಸಿದ ಹಲವು ವಿಜ್ಞಾನಿಗಳ ಕೆಲಸದ ಪರಿಣಾಮವಾಗಿ ವರ್ಷ ಒಂದರೊಳಗೆ ಕೋವಿಡ್ ಲಸಿಕೆ ತಯಾರಾಗಿತ್ತು. ಇದು ಫಲಾನುಭವಿಗಳಿಗೆ ಸುರಕ್ಷಿತ ಹಾಗೂ ಕೋವಿಡ್ ಬರದಂತೆ, ಬಂದರೆ ಗಂಭೀರ ಮಟ್ಟಕ್ಕೆ ಹೋಗದಂತೆ ಮತ್ತು ಹೀಗೆ ಬಂದವರಲ್ಲಿ ಸಾವಿನ ಪ್ರಮಾಣ ಬಹಳಷ್ಟು ಕಡಿತಗೊಳಿಸುವಲ್ಲಿ ಸಹಕಾರಿ ಎನ್ನುವುದು ತಜ್ಞರ ಅಭಿಪ್ರಾಯವಾಗಿತ್ತು. ಆದರೆ ಲಸಿಕೆ ನೀಡುವ ರೋಗ ತಡೆಗಟ್ಟುವ ಶಕ್ತಿಯು ದೇಹದಲ್ಲಿ ಉಳಿಯುವ ಕಾಲದ ಬಗ್ಗೆ ಧೀರ್ಘ ಕಾಲದ ನಂತರ ಈ ಲಸಿಕೆಯಿಂದ ಏನಾದರೂ ತೊಂದರೆ ಬರುವ ಸಂಭವಗಳ ಬಗ್ಗೆ ಸರಿಯಾದ ಮಾಹಿತಿ ಇರಲಿಲ್ಲ.



ಆದರೆ ಕೋವಿಡ್ ಕಾಣಿಸಿಕೊಂಡ ಈ ಎರಡು ವರ್ಷಗಳ ಕಾಲಾವಧಿಯಲ್ಲಿ ವೈರಸ್ ಬದಲಾವಣೆಯಿಂದ ಹುಟ್ಟಿಕೊಂಡ ರೂಪಾಂತರಿ ವೈರಸ್‌ಗಳ ಬಗ್ಗೆ, ಲಸಿಕೆ ಉಪಯೋಗಕ್ಕೆ ಬಂದ ಈ ಒಂದು ವರ್ಷದ ಕಾಲಾವಧಿಯಲ್ಲಿ ಮೂಲ ಸಾರ್ಸ್–ಕೋವ–2 ಹಾಗೂ ಅದರ ರೂಪಾಂತರಿಗಳಿಂದ ಬರುವ ಕೋವಿಡ್‌ನ್ನು ತಡೆಗಟ್ಟುವ ಈ ಲಸಿಕೆಯ ಸಾಮರ್ಥ್ಯದ ಬಗ್ಗೆ ಬಹಳಷ್ಟು ಉಪಯುಕ್ತ ಮಾಹಿತಿಗಳು ದೊರೆತಿವೆ. ಲಸಿಕೆಯೂ ಸೇರಿ ಕೋವಿಡ್ ತಡೆಗಟ್ಟುವ ವಿಧಾನಗಳ ವಿರೋಧಿಗಳು ಇವುಗಳನ್ನು ವಿರೋಧಿಸಲು ನೀಡುವ ಕಾರಣಗಳು ಹಲವು.

1. ಹಲವು ದೇಶಗಳು ಮಾಸ್ಕ್ ಧಾರಣೆ ಹಾಗೂ ಲಸಿಕೆ ಪಡೆಯುವುದನ್ನು ಕಡ್ಡಾಯಗೊಳಿಸಿವೆ. ಪ್ರತಿ ವ್ಯಕ್ತಿಗೆ ತನಗೇನು ಬೇಕು, ಬೇಡ ಎಂದು ನಿರ್ಧರಿಸುವ ಹಕ್ಕು ಇದೆ. ಕಡ್ಡಾಯಗೊಳಿಸುವುದರಿಂದ ವ್ಯಕ್ತಿಯ ಸ್ವಾತಂತ್ರ್ಯ ಹರಣವಾಗುವುದರಿಂದ ಈ ಲಸಿಕೆಯನ್ನು ಬಹಿಸ್ಕರಿಸತಕ್ಕದ್ದು.

ಒಂದು ಸಮಯದಲ್ಲಿ ಯಾವುದೇ ವ್ಯಕ್ತಿ ಸಾಂಕ್ರಾಮಿಕ ಸೋಂಕು ರೋಗದಿಂದ ಬಳಲುತ್ತಿದ್ದು ಅದು ಇತರರಿಗೆ ಹರಡುವುದನ್ನು ತಡೆಗಟ್ಟುವ ವಿಧಾನಗಳನ್ನು (ಉದಾ: ಮಾಸ್ಕ್ ಧಾರಣೆ, ಅಂತರ ಕಾಪಾಡುವಿಕೆ)– ಪಾಲಿಸದಿದ್ದರೆ ಆತ ನೇರ ಹಾಗೂ ಪರೋಕ್ಷವಾಗಿ ಆ ಸೋಂಕು ಸಮಾಜದ ಅಸಂಖ್ಯಾತ ಜನರಿಗೆ ಹರಡಲು ಹಾಗೂ ಅವರ ಸಾವು ನೋವಿಗೆ ಕಾರಣನಾಗುತ್ತಾನೆ. ಈ ರೋಗಿಗಳಿಂದಾಗಿ ಅಲ್ಲಿನ ಆರೋಗ್ಯ ಸೇವೆಯ ಮೇಲೆ ವಿಪರೀತ ಒತ್ತಡ ಬೀಳುತ್ತದೆ. ಇದು ಇತರ ಹಲವಾರು ಕಾಯಿಲೆಗಳಿಂದ ಬಳಸುವ ತುರ್ತು ಚಿಕಿತ್ಸೆಯ ಅವಶ್ಯಕತೆ ಇರುವ ರೋಗಿಗಳಿಗೆ ಸೂಕ್ತ ಚಿಕಿತ್ಸೆ ದೊರಕದೇ ಅದರ ಸಾವು ನೋವಿಗೂ ಕಾರಣವಾಗುತ್ತದೆ. ಅಮೇರಿಕಾದಲ್ಲಿ 19 ನೇ ಶತಮಾನದಲ್ಲಿ ಸಿಡುಬಿನ ಲಸಿಕೆಯನ್ನು ಜನರಿಗೆ ಕಡ್ಡಾಯಗೊಳಿಸಿದಾಗ ಅದು ವ್ಯಕ್ತಿ ಸ್ವಾತಂತ್ರಕ್ಕೆ ಧಕ್ಕೆ ಬರುತ್ತದೆಂದು ವಿರೋಧಿಸಿದಾಗ ಅಲ್ಲಿನ ಸುಪ್ರೀಂ ಕೋರ್ಟ್ ಸಾರ್ವಜನಿಕರ ಒಳಿತಿಗಿಂತ ಒಬ್ಬ ವ್ಯಕ್ತಿಯ ಸ್ವಾತಂತ್ರ್ಯ ಮುಖ್ಯವಲ್ಲ. ಯಾವುದೇ ವ್ಯಕ್ತಿ ಸರ್ಕಾರ ನೀಡುವ ಸಾರ್ವಜನಿಕ ಸೌಲಭ್ಯಗಳನ್ನು ಉಪಯೋಗಿಸುವಾಗ, ಸಮಾಜದ ಒಳಿತನ್ನು ಬಯಸಬೇಕಾಗುತ್ತದೆ ಎಂದು ನೀಡಿದ ತೀರ್ಪು ಇಲ್ಲಿಯೂ ಪ್ರಸ್ತುತ.

2. ಲಸಿಕೆ ನೀಡುವ ಉದ್ದೇಶ–ಸಮಾಜದ ಒಳಿತಿಗಾಗಿ ಇಲ್ಲ; ಬದಲು ಬಹುರಾಷ್ಟ್ರೀಯ ಔಷಧ ಕಂಪನಿಗಳ ಅಪಾರ ಲಾಭಕ್ಕಾಗಿ ಇದೆ. ಲಸಿಕೆ ತೆಗೆದುಕೊಂಡ ನಂತರವೂ ಹಲವರಿಗೆ ಕೋವಿಡ್ ಸೋಂಕು ತಗಲಿದೆ. ಈ ಲಸಿಕೆ ಪಡೆದ ಹಲವರಿಗೆ ತೊಂದರೆ ಉಂಟಾಗಿದೆ. ಹೀಗಾಗಿ ಈ ಲಸಿಕೆಯನ್ನು ಬಹಿಷ್ಕರಿಸಬೇಕೆನ್ನುವುದು ಈ ಲಸಿಕಾ ವಿರೋಧಿ ಗುಂಪಿನ ವಾದ.

ಈ ಲಸಿಕಾ ತಯಾರಿಸುವ ಕಂಪೆನಿಗಳಾದ 'ಫೈಝರ್' ಹಾಗೂ ಮಾಡನಗಳೂ ಈ ಒಂದು ವರ್ಷದಲ್ಲಿ ಲಸಿಕೆಯ ದುಬಾರಿ ಮಾರಾಟದಿಂದ 50 ಬಿಲಿಯನ್ ಡಾಲರ್ ಪಡೆದವು ಎಂದು ಹೇಳಲಾಗುತ್ತಿದೆ. ಆದರೆ ಇದಕ್ಕಾಗಿ ಅವರು ತಯಾರಿಸಿದ ಲಸಿಕೆಗೆ ಬಹಿಷ್ಕಾರ ಹಾಕುವುದು ಸೂಕ್ತ ಉತ್ತರವಲ್ಲ. ಬದಲು ಅವರು ಲಸಿಕೆಯನ್ನು ಸೂಕ್ತವಾದ ಕಡಿಮೆ ಬೆಲೆಯಲ್ಲಿ ಮಾರಬೇಕೆನ್ನುವ ಬೇಡಿಕೆ ಇಟ್ಟು ಆ ಕಂಪೆನಿಗಳ ವಿರುದ್ಧ ಪ್ರತಿಭಟನೆ ನಡೆಸುವುದು ಅಗತ್ಯ.


ಇಂದು ಪ್ರಪಂಚದ ಹೆಚ್ಚಿನ ಎಲ್ಲಾ ಬಡದೇಶಗಳ ಅಧಿಕ ಪ್ರಮಾಣದ ಜನರು ಲಸಿಕೆ ಪಡೆದಿಲ್ಲ. ಎರಡು ಲಸಿಕೆ ತಯಾರಿಸುವ ಕಂಪೆನಿಗಳು ಹಾಗೂ ಅಮೇರಿಕಾಕ್ಕೆ ಇಡೀ ಪ್ರಪಂಚಕ್ಕೆ ಅಗತ್ಯವಿರುವ ಲಸಿಕೆ ತಯಾರಿಸುವ ಸಾಮರ್ಥ್ಯ ಇದೆ. ಇದಕ್ಕೆ ಬೇಕಾದ ಹಣ 25 ಬಿಲಿಯ ಡಾಲರ್. (ಅಮೇರಿಕಾದ ಮಿಲಿಟರಿ ವೆಚ್ಚಕ್ಕಾಗಿ ಕಾದಿಟ್ಟ ಹಣ 768 ಬಿಲಿಯನ್ ಡಾಲರು. ಆದರೆ ಈ ವೆದ್ದ ಭರಿಸಲು ಇವುಗಳು ತಯಾರಿಲ್ಲ. ಅಥವಾ ಈ ಕಂಪೆನಿಗಳು ಈ ಲಸಿಕ್ಕೆ ತಯಾರಿಸುವ ವಿಧಾನ ಹಾಗೂ ಹಕ್ಕನ್ನು ಬಡ ದೇಶಗಳಿಗೆ ಹಸ್ತಾಂತರಿಸಿದರೆ ಇವು ತಮ್ಮ ಜನರಿಗೆ ಬೇಕಾದ ಲಸಿಕೆಯನ್ನು ಅತೀ ಕಡಿಮೆ ವೆಚ್ಚದಲ್ಲಿ ತಯಾರಿಸಬಲ್ಲವು. ಹಾಗೂ ಈ ಕಾಯಿಲೆ ಪ್ರಪಂಚದಲ್ಲಿ ಹತೋಟಿಗೆ ಬಾರದಿದ್ದರ ಈ ವೈರಸ್‌ನಿಂದ ಮುಂದೆ ಹುಟ್ಟುವ ರೂಪಾಂತರಿಯಲ್ಲಿ, ಪ್ರಚಲಿತದಲ್ಲಿ ಉಪಯೋಗದಲ್ಲಿರುವ ಲಸಿಕೆಯ ನಿರೋಧಕ ಶಕ್ತಿಗೆ ಪ್ರತಿರೋಧ ಒಟ್ಟುವ ಹಾಗೂ ತೀಕ್ಷ ಕಾಯಿಲೆ ಉಂಟು ಮಾಡುವ ರೂಪಾಂತರಿ ಹುಟ್ಟುವ ಸಂಭವ ಹೆಚ್ಚು. ಅಂತಹ ಪರಿಸ್ಥಿತಿ ಬಂದಾಗ ಈಗಿನ ಲಸಿಕೆಯಲ್ಲಿ ಮಾರ್ಪಾಡು ಮಾಡಿ ಶ್ರೀಮಂತ ರಾಷ್ಟ್ರಗಳ ಜನತೆಗೆ ದುಬಾರಿ ಬೆಲೆಯಲ್ಲಿ ದೂರುವುದು ಈ ಕಂಪೆನಿಗಳಿಗೆ ಲಾಭದಾಯಕ. ಆದ್ದರಿಂದ ಲಸಿಕೆ ನಿಷೇಧಿಸಬೇಕೆನ್ನುವ ಈ ಲಸಿಕಾ ವಿರೋಧಿಗಳ ಕಾರ್ಯ ಈ ಔಷಧ ಕಂಪನಿಗೆ ವರವಾಗಿ ಪರಿಣಮಿಸುವುದು.

ಈ ಒಂದು ವರ್ಷದ ಅನುಭವದಲ್ಲಿ ತಿಳಿದ ವಿಷಯವೇನೆಂದರೆ ಈ ಲಸಿಕೆ ಸಂಪೂರ್ಣವಾಗಿ ಸೋಂಕನ್ನು ತಡೆಗಟ್ಟುವುದಿಲ್ಲ. ಹೊಸ ರೂಪಾಂತರಿ ವೈರಸ್ ಲಸಿಕೆಗೆ ಹೆಚ್ಚಿನ ಪ್ರಮಾಣದಲ್ಲಿ ತನ್ನ ರೋಗ ನಿರೋಧಕ ಸಾಮರ್ಥ್ಯ ಇನ್ನು ಉಳಿಸಿಕೊಂಡಿದೆ. ಕೋವಿಡ್ ಕಾಯಿಲೆ ಲಸಿಕೆ ಪಡೆದ ನಂತರ ಬಂದಾಗ ತೀಕ್ಷ್ಣ ಸ್ವರೂಪ ಪಡೆಯುವ ಸಂಭವ ಹಾಗೂ ಮರಣದ ಪ್ರಮಾಣ ಬಹಳಷ್ಟು ಇಲ್ಲಿ ಕಡಿಮೆಯಾಗಿದೆ.

ಲಸಿಕೆಯೂ ಸೇರಿ ಯಾವುದೇ ಔಷಧ ಮಾತ್ರವಲ್ಲ ಆಹಾರ ಪದಾರ್ಥಗಳು ಕೂಡಾ ಉಪಯೋಗಿಸುವವರಲ್ಲಿ ಅತ್ಯಲ್ಪ ಪ್ರಮಾಣದಿಂದ ಹಿಡಿದು ಬಹಳ ಗಂಭೀರ ಪರಿಣಾಮಗಳನ್ನು ಬೀರುವ ಸಾಧ್ಯತೆ ಇದೆ. ಇದಕ್ಕೆ ಕೋವಿಡ್ ಲಸಿಕೆಯೂ ಅಪವಾದವಲ್ಲ. ಆದರೆ ತೊಂದರೆಗೊಳಗಾದ ಹೆಚ್ಚಿನವರಲ್ಲಿ ಈ ತೊಂದತೆಗಳು ಬಹಳ ಸೌಮ್ಯ ಸ್ವಭಾವದ್ದಾಗಿದೆ. ಇದರಿಂದಾಗಿ ಅತೀ ಗಂಭೀರ ಪರಿಣಾಮ ಎಲ್ಲೋ 10 ಮಿಲಿಯಕ್ಕೊಬ್ಬರಲ್ಲಿ ಬಂದಿರಬಹುದು.

3. ಯಾವುದೇ ಕೋವಿಡ್ ತಡೆಗಟ್ಟುವ ಸೂಕ್ತ ನಡವಳಿಕೆ ಪಾಲಿಸದೆ, ಲಸಿಕೆಯನ್ನು ತೆಗೆದುಕೊಳ್ಳದಿದ್ದವರಲ್ಲಿ ಹಲವರಿಗೆ ಈ ಕಾಯಿಲೆ ಬಂದಿಲ್ಲ. ಹೀಗಾಗಿ ಈ ಯಾವ ವಿಧಾನಗಳ ಬಳಕೆಯ ಅಗತ್ಯವಿಲ್ಲ ಎನ್ನುವ ವಾದವಿದೆ. ಇವರಲ್ಲಿ ಕೆಲವರಿಗೆ ಗುಣಲಕ್ಷಣ ಸೋಂಕು ಬಂದಿರಬಹುದು. ಇನ್ನು ಕೆಲವರ ವಂಶವಾಹಿನಿಯಲ್ಲಿ ಈ ಕಾಯಿಲೆ ತಡೆಗಟ್ಟುವ ಶಕ್ತಿ ಇದ್ದಿರಬಹುದು. ಒಂದು ಅಧ್ಯಯನದ ಪ್ರಕಾರ ಸಾರ್ಸ್–ಕೋವ್–2 ಜಾತಿಗೆ ಸೇರಿದ ಕೊರೋನಾ ವೈರಸ್‌ನಿಂದ ಬಂದ ಪ್ಲೂ ಕೋವಿಡ್ ಕಾಯಿಲೆ ನಿರೋಧಕ ಶಕ್ತಿಯನ್ನು ರೋಗಿಗೆ ನೀಡುವ ಸಾಧ್ಯತೆ ಇದೆ. ಆದ್ದರಿಂದ ಇದು ಎಲ್ಲರಿಗೂ ಅನ್ವಯಿಸುವುದಿಲ್ಲ.

ನಮ್ಮ ಸಮಾಜವನ್ನು ಕೋವಿಡ್‌ನಿಂದ ರಕ್ಷಿಸಲು ಲಸಿಕೆ ಪಡೆಯುವುದರೊಂದಿಗೆ ಕೋವಿಡ್ ತಡೆಗಟ್ಟುವ ಸೂಕ್ತ ನಡವಳಿಕೆಯನ್ನು ಪಾಲಿಸುವುದು ನಮ್ಮೆಲ್ಲರ ಕರ್ತವ್ಯ.



ಒಕ್ಕೂಟ ತತ್ವದ ರಕ್ಷಣೆಗೆ ಒಗ್ಗಟ್ಟಾಗಲು ಸಕಾಲ

ಎಲ್ಲ ರಾಜ್ಯಗಳ ಹಣಕಾಸು, ಆರ್ಥಿಕ ಮತ್ತು ಶಾಸಕಾಂಗ ಕ್ಷೇತ್ರಗಳ ಮೇಲೆ ಪರಿಣಾಮ ಬೀರುವ ರೀತಿಯಲ್ಲಿ ಒಕ್ಕೂಟ ತತ್ವದ ಮೇಲೆ ಸಾರ್ವತ್ರಿಕವಾಗಿ ದಾಳಿ ನಡೆಯುತ್ತಿದೆ. ಬೇರೆ ಪಕ್ಷಗಳು ಆಡಳಿತ ನಡೆಸುವ ಅಥವಾ ಕೇಂದ್ರದ ತಾಳಕ್ಕೆ ತಕ್ಕಂತೆ ಕುಣಿಯದ ರಾಜ್ಯಗಳನ್ನು ನಿರ್ದಿಷ್ಟವಾಗಿ ಗುರಿ ಮಾಡಲಾಗುತ್ತಿದೆ. ಇವನ್ನು ಹಿಮ್ಮೆಟ್ಟಿಸಲು ಬಿಜೆಪಿಯೇತರ ರಾಜ್ಯ ಸರ್ಕಾರಗಳು ಒಟ್ಟಿಗೆ ಬರುವುದು ಅತ್ಯಗತ್ಯವಾಗಿದೆ. ಇಂಥ ವೇದಿಕೆಯನ್ನು ಯಾವುದೇ ರಾಜಕೀಯ ಮಿತ್ರಕೂಟಗಳ ರಚನೆಗಾಗಿ ಬಳಸಿಕೊಂಡರೆ ಒಕ್ಕೂಟತತ್ವ ಮತ್ತು ರಾಜ್ಯಗಳ ಹಕ್ಕುಗಳ ವಿಚಾರ ನಗಣ್ಯವಾಗಿ ತದ್ವಿರುದ್ಧ ಪರಿಣಾಮ ಬೀರುವ ಅಪಾಯವಿದೆ. ಒಕ್ಕೂಟತತ್ವದ ಮೇಲಿನ ಕೇಂದ್ರದ ಆಕ್ರಮಣದ ವಿರುದ್ಧ ವಿಶಾಲ ಐಕ್ಯತೆಯನ್ನು ರೂಪಿಸಲು ಕಾಲ ಈಗ ಪಕ್ವವಾಗಿದೆ. ಈ ಏಕೈಕ ಅಜೆಂಡಾದೊಂದಿಗೆ ಬಿಜೆಪಿಯೇತರ ಮುಖ್ಯಮಂತ್ರಿಗಳ ಸಭೆ ನಡೆಸುವುದು ತೀರಾ ಅಗತ್ಯವಾಗಿದೆ.

ಪ್ರಕಾಶ ಕಾರಟ್



ಒಕ್ಕೂಟ ತತ್ವದ ಉಳಿವು ಮತ್ತು ಕೇಂದ್ರ–ರಾಜ್ಯ ಸಂಬಂಧಗಳ ಮೇಲೆ ಮೋದಿ ಸರ್ಕಾರ ನಡೆಸುತ್ತಿರುವ ದಾಳಿಯನ್ನು ಎದುರಿಸಲು ಒಗ್ಗಟ್ಟಾಗಿ ನಿಲ್ಲುವ ಅಗತ್ಯವನ್ನು ಪ್ರತಿಪಕ್ಷಗಳ ಆಡಳಿತವಿರುವ ಕೆಲವು ರಾಜ್ಯಗಳ ಮುಖ್ಯಮಂತ್ರಿಗಳು ಚರ್ಚಿಸುತ್ತಿದ್ದಾರೆ.

ರಾಜ್ಯಗಳ ಹಕ್ಕುಗಳನ್ನು ರಕ್ಷಿಸುವ ವಿಚಾರದಲ್ಲಿ ರಾಜ್ಯ ಸರ್ಕಾರಗಳ ಸಂಯುಕ್ತ ನಿಲುವನ್ನು ಉಪೇಕ್ಷಿಸುವಂತಿಲ್ಲ. ಮೋದಿ ಸರ್ಕಾರ ತನ್ನ ಎರಡನೇ ಅವಧಿಯಲ್ಲಿ ಕೇಂದ್ರೀಕರಣ ಪ್ರಕ್ರಿಯೆಯನ್ನು ಹಾಗೂ ಎಲ್ಲ ಅಧಿಕಾರಗಳನ್ನು ತನ್ನ ಕೈಗೆ ತೆಗೆದುಕೊಳ್ಳುವುದನ್ನು ತೀವ್ರಗೊಳಿಸಿದೆ. ಆಕ್ರಮಣಕ್ಕೆ ಕೇಂದ್ರ–ರಾಜ್ಯ ಸಂಬಂಧಗಳ ಯಾವ ಕ್ಷೇತ್ರವನ್ನೂ ಮೋದಿ ಸರ್ಕಾರ ಬಿಟ್ಟಿಲ್ಲ. ಜಮ್ಮು ಮತ್ತು ಕಾಶ್ಮೀರವನ್ನು ವಿಭಜಿಸಿ ಎರಡು ಕೇಂದ್ರಾಡಳಿತ ಪ್ರದೇಶ ರಚಿಸಿದ್ದು ಈ ವಿಚಾರದಲ್ಲಿ ಅದರ ಅತಿಯಾದ ಕ್ರಮವಾಗಿದೆ. ಸಂಪನ್ಮೂಲಗಳಲ್ಲಿ ರಾಜ್ಯಗಳಿಗೆ ಸಂವಿಧಾನ ವಿಧಿಸಿರುವ ಪಾಲನ್ನು ಪೆಟ್ರೋಲಿಯಂ ಉತ್ಪನ್ನಗಳ ಮೇಲೆ ಸರ್ಚಾರ್ಜ್ ಮತ್ತು ಸೆಸ್ ಹಾಕುವುದು ಮುಂತಾದವುಗಳ ಮೂಲಕ ವಂಚಿಸಲಾಗುತ್ತಿದೆ. ಹಣಕಾಸು ಆಯೋಗದ ಕಾರ್ಯವ್ಯಾಪ್ತಿಯನ್ನು ಕೂಡ ಕೇಂದ್ರ ಸರ್ಕಾರಕ್ಕೆ ಅನುಕೂಲಕರವಾಗುವಂತೆ ನಿರೂಪಿಸಲಾಗುತ್ತಿದೆ. ಈಗ ವಾಪಸ್ ಪಡೆಯಲಾಗಿರುವ, ಮೂರು ಕೃಷಿ ಕಾನೂನುಗಳು ಕೂಡ ರಾಜ್ಯಗಳ ಹಕ್ಕುಗಳ ಮೇಲಿನ ಅತಿಕ್ರಮಣವಾಗಿತ್ತು. ಯಾಕೆಂದರೆ ಕೃಷಿ ಮಾರುಕಟ್ಟೆಯನ್ನು ಸಂವಿಧಾನವು ರಾಜ್ಯ ಪಟ್ಟಿಯಲ್ಲಿ ಸೇರಿಸಿದೆ. ಹೊಸ ಶಿಕ್ಷಣ ನೀತಿಯು ಶಿಕ್ಷಣದ ವಿವಿಧ ಹಂತಗಳಲ್ಲಿ ಅದನ್ನು ಕೇಂದ್ರೀಕರಿಸುವ ಕೇಂದ್ರ ಸರ್ಕಾರದ ಉದ್ದೇಶವನ್ನು ಪ್ರತಿಫಲಿಸುತ್ತದೆ. ಬಿಜೆಪಿಯೇತರ ಆಡಳಿತದ ರಾಜ್ಯಗಳ ರಾಜ್ಯಪಾಲರು ಹೆಚ್ಚೆಚ್ಚು ಪಕ್ಷಪಾತಿಯಾಗಿ ಕೇಂದ್ರದ ಏಜೆಂಟರಂತೆ ವರ್ತಿಸುತ್ತಿದ್ದಾರೆ. ಐಎಎಸ್ ಮತ್ತು ಐಪಿಎಸ್ ಅಧಿಕಾರಿಗಳ ಅಖಿಲ ಭಾರತ ಸೇವಾ ನಿಯಮಗಳಿಗೆ ತಿದ್ದುಪಡಿ ತರುವ ಕೇಂದ್ರದ ಇತ್ತೀಚಿನ ಪ್ರಸ್ತಾಪನೆಯು ರಾಜ್ಯ ಸರಕಾರಗಳನ್ನು ಬದಿಗೊತ್ತಿ ರಾಜ್ಯಗಳಿಂದ ಅಧಿಕಾರಿಗಳನ್ನು ವಾಪಸ್ ಪಡೆಯಲು ಕೇಂದ್ರಕ್ಕೆ ಸ್ವೇಚ್ಛಾಧಿಕಾರವನ್ನು ನೀಡಲಿದೆ. ಈ ರೀತಿ, ಕೇಂದ್ರ ಸರ್ಕಾರದ ದಾಳಿಯ ಪಟ್ಟಿ ಬೆಳೆಯುತ್ತಲೇ ಹೋಗುತ್ತದೆ.

ಎಲ್ಲ ರಾಜ್ಯಗಳ ಹಣಕಾಸು, ಆರ್ಥಿಕ ಮತ್ತು ಶಾಸಕಾಂಗ ಕ್ಷೇತ್ರಗಳ ಮೇಲೆ ಪರಿಣಾಮ ಬೀರುವ ರೀತಿಯಲ್ಲಿ ಒಕ್ಕೂಟ ತತ್ವದ ಮೇಲೆ ಸಾರ್ವತ್ರಿಕವಾಗಿ ದಾಳಿ ನಡೆಯುತ್ತಿದೆ. ನಿರ್ದಿಷ್ಟವಾಗಿ ಗುರಿಯಿಟ್ಟುಕೊಂಡು ದಾಳಿ ನಡೆಸುವ ಪ್ರಕರಣಗಳೂ ಇವೆ. ಬೇರೆ ಪಕ್ಷಗಳು ಆಡಳಿತ ನಡೆಸುವ ಅಥವಾ ಕೇಂದ್ರದ ತಾಳಕ್ಕೆ ತಕ್ಕಂತೆ ಕುಣಿಯದ ರಾಜ್ಯಗಳನ್ನು ನಿರ್ದಿಷ್ಟವಾಗಿ ಗುರಿ ಮಾಡಲಾಗುತ್ತಿದೆ. ಈ ಎರಡೂ ಬಗೆಯ ದಾಳಿಗಳನ್ನು ಹಿಮ್ಮೆಟ್ಟಿಸಲು ಬಿಜೆಪಿಯೇತರ ರಾಜ್ಯ ಸರ್ಕಾರಗಳು ಒಟ್ಟಿಗೆ ಬರುವುದು ಅತ್ಯಗತ್ಯವಾಗಿದೆ.

ಕೇಂದ್ರ ಸರ್ಕಾರ 2021 ಏಪ್ರಿಲ್‌ನಲ್ಲಿ ದೆಹಲಿ ರಾಷ್ಟ್ರೀಯ ರಾಜಧಾನಿ ಪ್ರದೇಶ ಕಾನೂನಿಗೆ ತಿದ್ದುಪಡಿ ತಂದು ದೆಹಲಿ ಸರಕಾರವೆಂದರೆ ಉಪರಾಜ್ಯಪಾಲರು ಎಂದು ಘೋಷಿಸಿ ಚುನಾಯಿತ ಸರಕಾರ ಮತ್ತು ಶಾಸನ ಸಭೆಗೆ ಅಧಿಕಾರವಿಲ್ಲದಂತೆ ಮಾಡಲಾಯಿತು. ಇದು ಎಎಪಿ ಸರ್ಕಾರದ ಮೇಲಿನ ದಾಳಿ ಮಾತ್ರವೇ ಆಗಿರಲಿಲ್ಲ. ಸಂವಿಧಾನದಡಿಯಲ್ಲಿ ಚುನಾಯಿತವಾದ ರಾಜ್ಯ ಸರ್ಕಾರದ ಪಾತ್ರದ ಬುಡಕ್ಕೆ ಕೊಟ್ಟ ಕೊಡಲಿಯೇಟು ಆಗಿತ್ತು. ಒಕ್ಕೂಟ ತತ್ವ ಹಾಗೂ ರಾಜ್ಯಗಳ ಹಕ್ಕುಗಳ ರಕ್ಷಣೆಗಾಗಿ ಎಲ್ಲ ಪ್ರಜಾತಾಂತ್ರಿಕ ಹಾಗೂ ಜಾತ್ಯತೀತ ಶಕ್ತಿಗಳು ಐಕ್ಯ ನಿಲುವು ತಳೆಯುವುದು ಅನಿವಾರ್ಯವಾಗಿದೆ. ಎಲ್ಲ ಬಿಜೆಪಿಯೇತರ ಮುಖ್ಯಮಂತ್ರಿಗಳ ಸಭೆ ಈ ದಿಕ್ಕಿನಲ್ಲಿ ಸಕಾಲಿಕ ಹಾಗೂ ಅಗತ್ಯ ಹೆಜ್ಜೆಯಾಗಲಿದೆ.

ಆದರೆ, ಮುಖ್ಯಮಂತ್ರಿಗಳ ಇಂಥ ಸಮ್ಮೇಳನವು ಕೇವಲ ಒಕ್ಕೂಟ ತತ್ವ ಮತ್ತು ರಾಜ್ಯಗಳ ಹಕ್ಕುಗಳ ಮೇಲೆ ಮಾತ್ರವೇ ಗಮನವನ್ನು ಕೇಂದ್ರೀಕರಿಸಬೇಕು. ಇಂಥ ವೇದಿಕೆಯನ್ನು ಯಾವುದೇ ರಾಜಕೀಯ ಮಿತ್ರಕೂಟಗಳ ರಚನೆಗಾಗಿ ಬಳಸಿಕೊಂಡರೆ ಒಕ್ಕೂಟತತ್ವ ಮತ್ತು ರಾಜ್ಯಗಳ ಹಕ್ಕುಗಳ ವಿಚಾರ ನಗಣ್ಯವಾಗಿ ತದ್ವಿರುದ್ಧ ಪರಿಣಾಮ ಬೀರುವ ಅಪಾಯವಿದೆ.


ಪಶ್ಚಿಮಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಮಾಡುತ್ತಿರುವಂತೆ ಮುಖ್ಯಮಂತ್ರಿಗಳ ಇಂಥ ಒಂದು ಸಭೆಯನ್ನು ಪ್ರಾದೇಶಿಕ ರಾಜಕೀಯ ಪಕ್ಷಗಳ ಪರ್ಯಾಯ ಮೈತ್ರಿಕೂಟ ರಚನೆಗಾಗಿ ಬಳಸಲು ಪ್ರಯತ್ನಿಸುವುದು ಒಕ್ಕೂಟ ತತ್ವ ರಕ್ಷಣೆಯ ಗಂಭೀರ ವಿಚಾರದಿಂದ ಗಮನವನ್ನು ಬೇರೆಡೆ ತಿರುಗಿಸುತ್ತದೆ, ಅಷ್ಟೇ. ಒಕ್ಕೂಟ ರಂಗದ ಬಗ್ಗೆ ತೆಲಂಗಾಣ ಮುಖ್ಯಮಂತ್ರಿ ಕೆ. ಚಂದ್ರಶೇಖರ ರಾವ್ ಮಾತನಾಡುತ್ತಿರುವುದು ಅಥವಾ ಪರ್ಯಾಯ ಮೈತ್ರಿಕೂಟಕ್ಕೆ ತಾನೇ ನಾಯಕಿಯೆಂಬಂತೆ ಬಿಂಬಿಸಿಕೊಳ್ಳಲು ಮಮತಾ ಬ್ಯಾನರ್ಜಿ ಮಾಡುವ ಪ್ರಯತ್ನ – ಇವೆಲ್ಲವೂ ರಾಜಕೀಯ ವಿಚಾರಗಳಾಗಿದ್ದು ಬೆಜೆಪಿಯೇತರ ಸರ್ಕಾರಗಳ ಮುಖ್ಯಮಂತ್ರಿಗಳನ್ನು ಒಂದೇ ವೇದಿಕೆಗೆ ತರುವ ಕಾರ್ಯಭಾರದೊಂದಿಗೆ ಅದನ್ನು ಬೆರೆಸಬಾರದು.

ದೊಡ್ಡ ಬಂಡವಾಳಶಾಹಿಗಳ ನೇತೃತ್ವದ ಆಳುವ ವರ್ಗಗಳು ಅಧಿಕಾರ ಕೇಂದ್ರೀಕರಣದ ಅಜೆಂಡಾವನ್ನು ಹಲವು ದಶಕಗಳಿಂದ ಮುಂದೊತ್ತುತ್ತಲೇ ಬಂದಿವೆ. ಕೇಂದ್ರದಲ್ಲಿ ಅಧಿಕಾರದಲ್ಲಿದ್ದಾಗ ಕಾಂಗ್ರೆಸ್ ಪಕ್ಷ ಕೂಡ ಹಲವು ಸಂದರ್ಭಗಳಲ್ಲಿ ಅಧಿಕಾರ ಕೇಂದ್ರೀಕರಣಕ್ಕೆ ಮುಂದಾಗಿದ್ದುದು ವಾಸ್ತವ ಸಂಗತಿ. ಆದರೆ, ಈಗ ಪ್ರತಿಪಕ್ಷದಲ್ಲಿರುವ ಕಾಂಗ್ರೆಸ್ ಆಡಳಿತದ ರಾಜ್ಯಗಳು ಕೂಡ ರಾಜ್ಯಗಳ ಹಕ್ಕುಗಳ ಮೇಲಿನ ಕೇಂದ್ರದ ದಬ್ಬಾಳಿಕೆಯ ಬಿಸಿಯನ್ನು ಅನುಭವಿಸುತ್ತಿವೆ. ಆದ್ದರಿಂದ, ಎಲ್ಲ ಬಿಜೆಪಿಯೇತರ ರಾಜ್ಯ ಸರ್ಕಾರಗಳನ್ನು ಜಂಟಿ ವೇದಿಕೆಗೆ ತರುವುದು ಅಗತ್ಯವಾಗಿದೆ.

ಸಿಪಿಐ (ಎಂ) ಪ್ರತಿಪಾದಿಸುತ್ತಾ ಬಂದಿರುವಂತೆ, ಒಕ್ಕೂಟತತ್ವದ ಮೇಲಿನ ಕೇಂದ್ರದ ಆಕ್ರಮಣದ ವಿರುದ್ಧ ವಿಶಾಲ ಐಕ್ಯತೆಯನ್ನು ರೂಪಿಸಲು ಕಾಲ ಈಗ ಪಕ್ವವಾಗಿದೆ. ಈ ಏಕೈಕ ಅಜೆಂಡಾದೊಂದಿಗೆ ಬಿಜೆಪಿಯೇತರ ಮುಖ್ಯಮಂತ್ರಿಗಳ ಸಭೆ ನಡೆಸುವುದು ತೀರಾ ಅಗತ್ಯವಾಗಿದೆ.

ಅನು: ವಿಶ್ವ

ಒಕ್ಕೂಟ ರಂಗದ ಬಗ್ಗೆ ತೆಲಂಗಾಣ ಮುಖ್ಯಮಂತ್ರಿ ಕೆ. ಚಂದ್ರಶೇಖರ ರಾವ್ ಮಾತನಾಡುತ್ತಿರುವುದು ಅಥವಾ ಪರ್ಯಾಯ ಮೈತ್ರಿಕೂಟಕ್ಕೆ ತಾನೇ ನಾಯಕಿಯೆಂಬಂತೆ ಬಿಂಬಿಸಿಕೊಳ್ಳಲು ಮಮತಾ ಬ್ಯಾನರ್ಜಿ ಮಾಡುವ ಪ್ರಯತ್ನ - ಇವೆಲ್ಲವೂ ರಾಜಕೀಯ ವಿಚಾರಗಳಾಗಿದ್ದು ಬೆಜೆಪಿಯೇತರ ಸರ್ಕಾರಗಳ ಮುಖ್ಯಮಂತ್ರಿಗಳನ್ನು ಒಂದೇ ವೇದಿಕೆಗೆ ತರುವ ಕಾರ್ಯಭಾರದೊಂದಿಗೆ ಅದನ್ನು ಬೆರೆಸಬಾರದು. ಇದು ಒಕ್ಕೂಟತತ್ವ ಮತ್ತು ರಾಜ್ಯಗಳ ಹಕ್ಕುಗಳ ವಿಚಾರ ನಗಣ್ಯವಾಗಿ ತದ್ವಿರುದ್ಧ ಪರಿಣಾಮ ಬೀರುವ ಅಪಾಯವಿದೆ.



ವ್ಯಂಗ್ಯಚಿತ್ರ: ಪಿ. ಮಹಮ್ಮದ್



ಅಖಿಲ ಭಾರತ ಕೋಟಾದಲ್ಲಿ ಒಬಿಸಿ ಮೀಸಲಾತಿ ಕೊನೆಗೂ ಬಂದಿರುವುದು ಮದ್ರಾಸ್ ಹೈಕೋರ್ಟಿನ ಆದೇಶ ಮತ್ತು 'ಯೋಗ್ಯತೆಗೆ ಎದುರಾಗಿ ಮೀಸಲಾತಿ' ಎಂಬ ಹುಸಿ ಚರ್ಚೆಯನ್ನು ನಿರ್ಣಾಯಕವಾಗಿ ಹೊಡೆದು ಹಾಕಿದ ಸುಪ್ರಿಂ ಕೋರ್ಟಿನ ತೀರ್ಪಿನ ನಂತರವೇ ಆದರೂ, ಇದನ್ನು ತಂದಿರುವುದು ತನ್ನ "ಹಿಂದುಳಿದವರ ಪರ"ವಾಗಿರುವ ನೀತಿಯಿಂದಾಗಿ ಎಂದು ಪ್ರಚಾರ ಮಾಡುವಾಗಲೇ, ಮೋದಿ ಸರ್ಕಾರವು ಇಡಬ್ಲ್ಯುಎಸ್ ಮೀಸಲಾತಿ ಮೂಲಕ ಮೇಲ್ಜಾತಿ ಜನರ ಹಿತಾಸಕ್ತಿಯನ್ನು ಕಾಪಾಡಲಾಗುತ್ತಿದೆ ಎಂದೂ ಹೇಳುತ್ತಿದೆ. ಈ ನಡುವೆ ನಾಯಿ ಕೊಡೆಗಳಂತೆ ಖಾಸಗಿ ಕಾಲೇಜುಗಳು ಆರಂಭವಾಗುವುದಕ್ಕೆ ಉತ್ತೇಜನ ನೀಡಿದ್ದರಿಂದಾಗಿ, ಮೀಸಲಾತಿ ಅನ್ವಯವಾಗುವ ಸೀಟುಗಳ ಅನುಪಾತವು ಒಂದೇ ಸಮನಾಗಿ ಇಳಿಯುತ್ತಿದೆ ಎಂಬುದರ ಬಗ್ಗೆಯಾಗಲೀ, ತಮ್ಮ ಸವಲತ್ತುಗಳನ್ನು ಹೇಗಾದರೂ ಉಳಿಸಿಕೊಳ್ಳಲೇಬೇಕೆಂದೇ ಸಂಕಲ್ಪ ಮಾಡಿಕೊಂಡಿರುವವರು ಹೀಗೆ ಕಡಿಮೆಯಾಗುತ್ತಿರುವ ಸೀಟುಗಳ ಪಾಲಿನ ಒಂದು ಸಣ್ಣ ಅಂಶ ಕೂಡ ಜಾತಿಯಾಧಾರದಲ್ಲಿ ಚಾರಿತ್ರಿಕವಾಗಿ ವಂಚಿತರಾದ ಹಾಗೂ ತಾರತಮ್ಯಕ್ಕೆ ಒಳಗಾದ ವಿಭಾಗಗಳಿಗೆ ಹೋಗುವುದನ್ನು ಒಪ್ಪದಿರುವುದರ ಬಗ್ಗೆಯಾಗಲೀ ಚಕಾರ ಎತ್ತುವುದಿಲ್ಲ. ಮೋದಿ ಸರ್ಕಾರದ ಈ ವಂಚಕತನ ಅದು ನಡೆದು ಬಂದ ದಾರಿಗೆ ತಕ್ಕುದಾಗಿಯೇ ಇದೆ.

ಶಿಕ್ಷಣದಲ್ಲಿ ಮೀಸಲಾತಿ ನೀತಿ ಮತ್ತು ಮೋದಿ ಸರ್ಕಾರದ ವಂಚಕತನ

ಎಸ್.ಆರ್. ರಾಮನ್
ಅನು: ಟಿ. ಸುರೇಂದ್ರ ರಾವ್

(ಕೃಪೆ: ಪೀಪಲ್ಸ್ ಡೆಮಾಕ್ರಸಿ, ಜನವರಿ 30, 2022)

ಈ ವರ್ಷದ ಜನವರಿ 7 ರಂದು, ಸುಪ್ರೀಂ ಕೋರ್ಟು ಶೇಕಡಾ 27 ಮೀಸಲಾತಿ ಕುರಿತ ತೀರ್ಪನ್ನು ನೀಡಿತು; ವೈದ್ಯಕೀಯ ಕಾಲೇಜುಗಳಲ್ಲಿ ಅಖಿಲ ಭಾರತ ಕೋಟಾದಲ್ಲಿ ಮೀಸಲಾತಿ ನೀಡಿದ್ದು ಅಸಂವಿಧಾನಿಕವಲ್ಲ ಎಂದು ಆದೇಶಿಸಿತು; ಈ ಮೂಲಕ 2021–22 ರ ಶೈಕ್ಷಣಿಕ ವರ್ಷದಿಂದ ಅಂತಹ ಮೀಸಲಾತಿಯನ್ನು ನೀಡಬಹುದಾಗಿದೆ. ಸರಿ ಸುಮಾರು ಎರಡು ವಾರಗಳ ನಂತರ, ಜನವರಿ 20 ರಂದು ಆ ತೀರ್ಮಾನಕ್ಕೆ ಬರಲು ಕಾರಣವೇನೆಂದು ನ್ಯಾಯಾಲಯ ಸ್ಪಷ್ಟಪಡಿಸಿತು. ಆದರೆ ಅಂತಹ ಒಂದು ತೀರ್ಪಿನ ಅಗತ್ಯವಾದರೂ ಏಕುಂಟಾಯಿತು ಮತ್ತು ಅದರ ಹಿಂದಿರುವ ತರ್ಕ ಎಲ್ಲಾ ವಿವೇಕಯುತ ಜನರಿಗೆ ಹೊಳೆದಿಲ್ಲ ಎಂಬ ವಿದ್ಯಮಾನವೇ ಮೇಲ್ಜಾತಿ ಜನಗಳ ಹಿತಾಸಕ್ತಿ ಎಷ್ಟರ ಮಟ್ಟಿಗೆ ಭದ್ರವಾಗಿ ಬೇರೂರಿದೆ ಎಂಬುದಕ್ಕೆ ಸಾಕ್ಷಿ. ಮೇಲ್ಜಾತಿ ಜನಗಳು ತಮ್ಮ ಸವಲತ್ತುಗಳನ್ನು ಕಾಯ್ದುಕೊಳ್ಳಲು ಯಾವ ರೀತಿ ಹೋರಾಡುತ್ತಾರೆ ಎನ್ನುವುದು ಸಾಬೀತಾಯಿತು. ಸಾಮಾಜಿಕ ನ್ಯಾಯದ ಪರವಾಗಿ ಬಾಯುಪಚಾರದ ಮಾತನ್ನಾಡುವ ಕೇಂದ್ರದಲ್ಲಿನ ಸರ್ಕಾರಗಳು ಈ ಕಾರ್ಯಸೂಚಿಗೆ ಯಾವುದೇ ಆಕ್ಷೇಪಗಳನ್ನು ಎತ್ತದೆ ಎಷ್ಟರ ಮಟ್ಟಿಗೆ ಒಪಿಕೊಳ್ಳುತ್ತವೆ ಎನ್ನುವುದಕ್ಕೆ ಕೂಡ ಸಾಕ್ಷಿ.

ಮೊದಲು, ಈ ತೀರ್ಪಿನ ಹಿನ್ನೆಲೆಯನ್ನು ನಾವು ಪರಿಶೀಲಿಸೋಣ. ವೈದ್ಯಕೀಯ ಶಿಕ್ಷಣದ ಪದವಿ ಮತ್ತು ಸ್ನಾತಕೋತ್ತರ ಪದವಿಗಳಲ್ಲಿ ಅಖಿಲ ಭಾರತ ಕೋಟಾವನ್ನು ಸೃಷ್ಟಿಸಿದ್ದು 1986 ರ ಸುಪ್ರೀಂ ಕೋರ್ಟಿನ ತೀರ್ಪು. ವೈದ್ಯಕೀಯ ಕಾಲೇಜುಗಳಲ್ಲಿ ಕೊನೇಪಕ್ಷ ಒಂದು ವಿಭಾಗದ ಸೀಟುಗಳನ್ನಾದರೂ ಅಭ್ಯರ್ಥಿಗಳ ವಾಸದ ಸ್ಥಾನಮಾನವನ್ನು ಪರಿಗಣಿಸದೆಯೇ ಹಂಚಿಕೆ ಮಾಡಬಾರದು ಎನ್ನುವುದು ಅಖಿಲ ಭಾರತ ಕೋಟಾದ ಹಿಂದಿನ ಆಲೋಚನೆಯಾಗಿತ್ತು. ವೈದ್ಯಕೀಯ ಕಾಲೇಜುಗಳ ಅತಿ ಅಸಮಾನ ಹರಡಿಕೆಯ ಹಿನ್ನೆಲೆಯಲ್ಲಿ, ಬಹಳ ಕಡಿಮೆ ಕಾಲೇಜುಗಳನ್ನು ಹೊಂದಿರುವ ರಾಜ್ಯಗಳ ಅಭ್ಯರ್ಥಿಗಳಿಗೆ ವೈದ್ಯಕೀಯ ಶಿಕ್ಷಣ ಪಡೆಯಲು ಅಖಿಲ ಭಾರತ ಕೋಟಾ ಸಹಾಯವಾಗುತ್ತದೆ ಎಂಬುದು ಕೋರ್ಟಿನ ಅಭಿಪ್ರಾಯವಾಗಿತ್ತು. ಕಳೆದ ಮೂರೂವರೆ ದಶಕಗಳಲ್ಲಿ ಅಖಿಲ ಭಾರತ ಕೋಟಾ ಯೋಜನೆಯಲ್ಲಿ ಕೆಲವು ಮಾರ್ಪಾಟುಗಳಾಗಿವೆ, ಆದರೆ ಈಗ, ಎಂಬಿಬಿಎಸ್ ಸೀಟುಗಳ ಶೇಕಡಾ 15 ರಷ್ಟನ್ನು ಮತ್ತು ಸ್ನಾತಕೋತ್ತರ ಪದವಿ ಸೀಟುಗಳ ಶೇಕಡಾ 50 ರಷ್ಟನ್ನು ಸರ್ಕಾರಿ ಒಡೆತನದ ವೈದ್ಯಕೀಯ ಕಾಲೇಜುಗಳಲ್ಲಿ ಅಖಿಲ ಭಾರತ ಕೋಟಾಕ್ಕೆ ಮೀಸಲಿಡಬೇಕಾಗಿದೆ.



1986 ರಲ್ಲೇ ಅಖಿಲ ಭಾರತ ಕೋಟಾವನ್ನು ಆರಂಭಿಸಿದ್ದಾಗ್ಯೂ, ನಂತರದ ಎರಡು ದಶಕಗಳ ಕಾಲ ಈ ಸೀಟುಗಳಿಗೆ ಮೀಸಲಾತಿಗಳು ಇರಲಿಲ್ಲ. 2007–08 ಶೈಕ್ಷಣಿಕ ವರ್ಷದಲ್ಲಿ ಮಾತ್ರವೇ ಪರಿಶಿಷ್ಟ ಜಾತಿ (ಎಸ್.ಸಿ) ಮತ್ತು ಪರಿಶಿಷ್ಟ ವರ್ಗ (ಎಸ್.ಟಿ.) ಕ್ಕೆ ಮೀಸಲಾತಿಯನ್ನು ಜಾರಿ ಮಾಡಲಾಯಿತು. ಇತರೆ ಹಿಂದುಳಿದ ಜಾತಿ (ಒಬಿಸಿ) ಗಳಿಗೆ ಮೀಸಲಾತಿ ಜಾರಿಯಾಗದೆ ಹಾಗೆಯೇ ಉಳಿದುಬಿಟ್ಟಿತು. ಕೇಂದ್ರ ಶಿಕ್ಷಣ ಸಂಸ್ಥೆಗಳ (ಪ್ರವೇಶಾತಿಯಲ್ಲಿ ಮೀಸಲಾತಿ) ಕಾಯಿದೆ 2007 ಜಾರಿಗೆ ಬರುವುದರೊಂದಿಗೆ, ಅಖಿಲ ಭಾರತ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ (ಎಐಐಎಂಎಸ್) ಅಥವಾ ಜವಾಹರ ಲಾಲ್ ಸ್ನಾತಕೋತ್ತರ ವೈದ್ಯಕೀಯ ಶಿಕ್ಷಣ ಮತ್ತು ಸಂಶೋಧನಾ ಸಂಸ್ಥೆ (ಜೆಐಪಿಎಂಇಆರ್) ನಂತಹ ಕೇಂದ್ರೀಯ ಶೈಕ್ಷಣಿಕ ಸಂಸ್ಥೆಗಳಲ್ಲಿ 2009–10 ರಿಂದ ಶೇಕಡಾ 27 ರಷ್ಟು ಮೀಸಲಾತಿಯನ್ನು ಒಬಿಸಿಗಳಿಗೆ ಜಾರಿ ಮಾಡಲಾಯಿತು. ಆದರೆ ಈ ಮೀಸಲಾತಿಯನ್ನು ಅಖಿಲ ಭಾರತ ಕೋಟಾ ಸೀಟುಗಳಿಗೆ ವಿಸ್ತರಿಸಲಿಲ್ಲ. ಇಂತಹ ಮೀಸಲಾತಿ ಆರಂಭಿಸಲು ಒಂದು ಯೋಜನೆಯನ್ನು ರೂಪಿಸಿ ಎಂದು ಆರೋಗ್ಯ ಸಚಿವಾಲಯದ ವೈದ್ಯಕೀಯ ಶಿಕ್ಷಣ ಇಲಾಖೆಯು ಕೇಳಿಕೊಂಡಾಗಲೂ ಅದು ವಿಸ್ತರಣೆಯಾಗಲಿಲ್ಲ.

2020 ರ ಜೂನ್ 17 ರಂದು, ಹಿಂದುಳಿದ ವರ್ಗಗಳ, ಎಸ್.ಸಿ., ಎಸ್.ಟಿ. ಮತ್ತು ಅಲ್ಪಸಂಖ್ಯಾತರ ರಾಷ್ಟ್ರೀಯ ಸಂಘಟನೆ (ಎನ್‌ಯುಬಿಸಿ) ಯು ದೆಹಲಿ ಹೈಕೋರ್ಟಿನಲ್ಲಿ ಒಂದು ಅರ್ಜಿ ಸಲ್ಲಿಸಿ ವೈದ್ಯಕೀಯ ಪದವಿ ಹಾಗೂ ಸ್ನಾತಕೋತ್ತರ ಪದವಿ ಪ್ರವೇಶಾತಿಗೆ ಅಖಿಲ ಭಾರತ ಕೋಟಾ ಸೀಟುಗಳಲ್ಲಿ ಒಬಿಸಿ ಮೀಸಲಾತಿಯನ್ನು ನೀಡಬೇಕು ಎಂದು ಆರೋಗ್ಯ ಸಚಿವಾಲಯಕ್ಕೆ ಆದೇಶ ನೀಡಬೇಕೆಂದು ಕೋರಿತು. ಕೋಟಾವನ್ನು ಜಾರಿಮಾಡದೆ ಒಬಿಸಿಯವರಿಗೆ ಸಾವಿರಾರು ಸೀಟುಗಳನ್ನು ವಂಚಿಸಲಾಗಿದೆ ಎಂದು ಆ ಅರ್ಜಿಯಲ್ಲಿ ಎತ್ತಿ ಹೇಳಲಾಯಿತು. ಮದ್ರಾಸ್ ಹೈಕೋರ್ಟಿನಲ್ಲಿ ಹಲವಾರು ತಮಿಳು ನಾಡಿನ ರಾಜಕೀಯ ಪಕ್ಷಗಳು ಅನೇಕ ಅರ್ಜಿಗಳನ್ನು ಸಲ್ಲಿಸಿ ಕೇಂದ್ರದ ಸಂಚಯ (ಪೂಲ್) ಕ್ಕೆ ತಮಿಳು ನಾಡಿನಿಂದ ಕೊಡಮಾಡುವ ಸೀಟುಗಳ ಮೇಲೆ ಒಬಿಸಿ ಕೋಟಾ ಜಾರಿ ಮಾಡಬೇಕೆಂದು ಕೋರಿದವು. 2020 ರ ಜುಲೈ 27 ರಂದು ತೀರ್ಪು ನೀಡಿದ ಮದ್ರಾಸ್ ಹೈಕೋರ್ಟ್ ಒಬಿಸಿ ಮೀಸಲಾತಿಗೆ ಕಾನೂನಿನ ತೊಡಕು ಇಲ್ಲ ಎಂದು ಹೇಳಿತು, ಮತ್ತು ರಾಜ್ಯದಿಂದ ರಾಜ್ಯಕ್ಕೆ ಈ ನೀತಿಗಳು ಬೇರೆ ಬೇರೆ ಇರುವುದರಿಂದ ಕೋಟಾಗಳಿಗೆ ವಿಧಾನಗಳನ್ನು ರೂಪಿಸಲು ಕೇಂದ್ರ ಸರ್ಕಾರ ತೀರ್ಮಾನ ಮಾಡಬೇಕೆಂದು ಸಲಹೆ ನೀಡಿತು. 2021 ರ ಮಾರ್ಚ್‌ನಲ್ಲಿ ಡಿಎಂಕೆ ಪಕ್ಷವು ಮದ್ರಾಸ್ ಹೈಕೋರ್ಟಿನಲ್ಲಿ ಕೇಂದ್ರ ಸರ್ಕಾರದ ವಿರುದ್ಧ ನ್ಯಾಯಾಂಗ ನಿಂದನೆ ಅರ್ಜಿ ಸಲ್ಲಿಸಿ ಅಖಿಲ ಭಾರತ ಕೋಟಾದಲ್ಲಿನ ಒಬಿಸಿ ಮೀಸಲಾತಿ ನೀಡಬೇಕೆಂಬ ಜುಲೈ 27, 2020 ರ ಮದ್ರಾಸ್ ಹೈಕೋರ್ಟಿನ ಆದೇಶವನ್ನು ಜಾರಿ ಮಾಡಿಲ್ಲ ಎಂದು ತಿಳಿಸಿತು. 2021 ರ ಜೂನ್ 20 ರಂದು ಮದ್ರಾಸ್ ಹೈಕೋರ್ಟ್ ತೀರ್ಪು ನೀಡಿ ಒಬಿಸಿ ಕೋಟಾವನ್ನು ಜಾರಿ ಮಾಡದೆ ವೈದ್ಯಕೀಯ ಪ್ರವೇಶಾತಿಯನ್ನು ಮಾಡುವಂತಿಲ್ಲ ಎಂದು ಆದೇಶಿಸಿತು.

ಹೀಗೆ ಅಂತಿಮವಾಗಿ ಅಖಿಲ ಭಾರತ ಕೋಟಾ ಸೀಟುಗಳಲ್ಲಿ ಒಬಿಸಿ ಕೋಟಾವನ್ನು ತರಲಾಯಿತು. ಕೋರ್ಟಿನ ನಿರ್ದೇಶನವನ್ನು ಉಲ್ಲೇಖಿಸದೇ, "ಬಹಳ ಕಾಲದಿಂದ ಬಾಕಿ ಉಳಿದಿದ್ದ ಸಮಸ್ಯೆಗೆ ಉತ್ತರವಾಗಿ" ಅಖಿಲ ಭಾರತ ಕೋಟಾ ಸೀಟುಗಳಲ್ಲಿ ಒಬಿಸಿಗಳಿಗೆ ಶೇಕಡಾ 27 ರಷ್ಟು ಮೀಸಲಾತಿಯನ್ನು ಮತ್ತು ಆರ್ಥಿಕವಾಗಿ ದುರ್ಬಲ ವಿಭಾಗ (ಇಡಬ್ಲ್ಯುಎಸ್) ದವರಿಗೆ ಶೇಕಡಾ 10 ರಷ್ಟು ಮೀಸಲಾತಿಯನ್ನು "ಐತಿಹಾಸಿಕ ಹಾಗೂ ಯುಗಪ್ರವರ್ತಕ ನಿರ್ಧಾರ"ದ ಮೂಲಕ ಜಾರಿಮಾಡಲು ತೀರ್ಮಾನಿಸಿದೆ ಎಂದು ಜುಲೈ 19, 2021 ರಂದು ಕೇಂದ್ರ ಸರ್ಕಾರವು ಪ್ರಕಟಿಸಿತು. ಈ ನಿರ್ಧಾರದಿಂದಾಗಿ ಎಂಬಿಬಿಎಸ್‌ನಲ್ಲಿ 1,500 ಒಬಿಸಿ ವಿದ್ಯಾರ್ಥಿಗಳಿಗೆ ಮತ್ತು ಸ್ನಾತಕೋತ್ತರ ಪದವಿ ಪ್ರವೇಶಾತಿಗೆ 2,500 ಒಬಿಸಿ ವಿದ್ಯಾರ್ಥಿಗಳಿಗೆ ಮತ್ತು ಅದೇ ಸಮಯದಲ್ಲಿ 550 ಇಡಬ್ಲ್ಯುಎಸ್ ವಿದ್ಯಾರ್ಥಿಗಳು ಎಂಬಿಬಿಎಸ್ ಸೀಟುಗಳನ್ನು ಪಡೆಯುತ್ತಾರೆ ಹಾಗೂ ಸ್ನಾತಕೋತ್ತರ ಎಂಬಿಬಿಎಸ್ ವ್ಯಾಸಂಗಕ್ಕೆ ಪ್ರತಿವರ್ಷ 1,000 ವಿದ್ಯಾರ್ಥಿಗಳು ಪ್ರವೇಶದ ಪ್ರಯೋಜನ ಪಡೆಯುತ್ತಾರೆ ಎಂದು ಸರ್ಕಾರ ವಿಶದಪಡಿಸಿತು.

2014 ರಲ್ಲಿ ದೇಶದಲ್ಲಿದ್ದ 54,348 ವೈದ್ಯಕೀಯ ಪದವಿ ಸೀಟುಗಳ ಸಂಖ್ಯೆಯು 2020 ರ ಹೊತ್ತಿಗೆ 84,649 ರಷ್ಟು ಹೆಚ್ಚಾಯಿತು ಮತ್ತು ಅದೇ ಅವಧಿಯಲ್ಲಿ ಸ್ನಾತಕೋತ್ತರ ಪದವಿ ಸೀಟುಗಳ ಸಂಖ್ಯೆಯು 30,191 ರಿಂದ 54,275 ಕ್ಕೆ ಏರಿದೆ ಎಂದು ಸರ್ಕಾರವು ತನ್ನ ಹೇಳಿಕೆಯಲ್ಲಿ ತಾನೇನೋ ದೊಡ್ಡ ಸಾಧನೆ ಮಾಡಿದ್ದಾಗಿ ಕೊಚ್ಚಿಕೊಂಡಿತು. ಆದರೆ ಆ ಹೇಳಿಕೆಯಲ್ಲಿ ಸರ್ಕಾರ ಹೇಳದೇ ಇದ್ದ ವಿಷಯವೇನೆಂದರೆ ಈ ಬಹುತೇಕ ಸೀಟುಗಳು ಈಗ ಖಾಸಗಿ ಕಾಲೇಜುಗಳಲ್ಲಿ ಇದ್ದು ಅಖಿಲ ಭಾರತ ಕೋಟಾ ವ್ಯಾಪ್ತಿಯ ಹೊರಗಿವೆ ಎಂಬ ವಾಸ್ತವ ಸತ್ಯವನ್ನು. ಇದರ ಫಲವಾಗಿ, ಅಖಿಲ ಭಾರತ ಕೋಟಾ ಕೇವಲ 5,500 ಎಂಬಿಬಿಎಸ್ ಸೀಟುಗಳು ಹಾಗೂ 2,000 ಸ್ನಾತಕೋತ್ತರ ಸೀಟುಗಳು ಮಾತ್ರವೇ ಇರುವುದು. ಕೇಂದ್ರದಲ್ಲಿ ಅಧಿಕಾರಕ್ಕೆ ಬಂದ ನಂತರದ ಎಲ್ಲಾ ಸರ್ಕಾರಗಳು ನಾಯಿ ಕೊಡೆಗಳಂತೆ ಖಾಸಗಿ ಕಾಲೇಜುಗಳು ಆರಂಭವಾಗುವುದಕ್ಕೆ ಉತ್ತೇಜನ ನೀಡಿದ್ದರಿಂದಾಗಿ, ಮೀಸಲಾತಿ ಅನ್ವಯವಾಗುವ ಸೀಟುಗಳ ಅನುಪಾತವು ಒಂದೇ ಸಮನಾಗಿ ಇಳಿಯುತ್ತಿದೆ.

ಆದರೆ ತಮ್ಮ ಸವಲತ್ತುಗಳನ್ನು ಹೇಗಾದರೂ ಉಳಿಸಿಕೊಳ್ಳಲೇಬೇಕೆಂದೇ ಸಂಕಲ್ಪ ಮಾಡಿಕೊಂಡಿರುವವರು ಹೀಗೆ ಕಡಿಮೆಯಾಗುತ್ತಿರುವ ಸೀಟುಗಳ ಪಾಲಿನ ಒಂದು ಸಣ್ಣ ಅಂಶ ಕೂಡ ಜಾತಿಯಾಧಾರದಲ್ಲಿ ಚಾರಿತ್ರಿಕವಾಗಿ ವಂಚಿತರಾದ ಹಾಗೂ ತಾರತಮ್ಯಕ್ಕೆ ಒಳಗಾದ ವಿಭಾಗಗಳಿಗೆ ಹೋಗುವುದನ್ನು ಒಪ್ಪದಿರುವವರು. ಆದಕಾರಣವೇ ಸರ್ಕಾರದ ಜುಲೈ 2021 ರ ಪ್ರಕಟಣೆಯನ್ನು ಸುಪ್ರೀಂ ಕೋರ್ಟಿನಲ್ಲಿ ಪ್ರಶ್ನೆಮಾಡಿರುವುದು. ಕೋರ್ಟು ತನ್ನ ಆದೇಶದಲ್ಲಿ 'ಯೋಗ್ಯತೆಗೆ ಎದುರಾಗಿ ಮೀಸಲಾತಿ' ಎಂಬ ಹುಸಿ ಚರ್ಚೆಯನ್ನು ನಿರ್ಣಾಯಕವಾಗಿ ಹೊಡೆದು ಹಾಕಿತು. ಆ ತೀರ್ಪಿನ ಸಂಬಂಧಪಟ್ಟ ಭಾಗವನ್ನು ಪುನರುಚ್ಚರಿಸಬೇಕಾಗುತ್ತದೆ. ಮಾಡಬೇಕಿದೆ. ಯೋಗ್ಯತೆ ಮತ್ತು ಮೀಸಲಾತಿ ಎಂಬ ದ್ವಂದ್ವವನ್ನು ಈ ಹಿಂದೆ ಸಮ್ಮತಿಸಿದ್ದನ್ನು ಒಪ್ಪಿಕೊಳ್ಳುತ್ತಾ, ಸುಪ್ರೀಂ ಕೋರ್ಟು ಹೀಗೆ ಹೇಳಿದೆ:

"ಒಂದು ಮುಕ್ತ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಎಲ್ಲರಿಗೂ ಭಾಗವಹಿಸುವ ಸಮಾನ ಅವಕಾಶವಿದ್ದಾಗ

ಪುಟ 10 ನೋಡಿ

"ಒಂದು ಮುಕ್ತ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಎಲ್ಲರಿಗೂ ಭಾಗವಹಿಸುವ ಸಮಾನ ಅವಕಾಶವಿದ್ದಾಗ ಅದು ತರ್ಕಸಮ್ಮತವಾದ ಸಮಾನತೆಯನ್ನು ಖಾತ್ರಿಪಡಿಸಬಹುದು ಆದರೆ, ಶೈಕ್ಷಣಿಕ ಸೌಲಭ್ಯಗಳ ಲಭ್ಯತೆ ಹಾಗೂ ಅವಕಾಶಗಳಲ್ಲಿ ವ್ಯಾಪಕ ಅಸಮಾನತೆಗಳು ಇರುವಾಗ ಅದು ಕೆಲವು ವರ್ಗಗಳ ಜನರಿಗೆ ಅವಕಾಶಗಳನ್ನು ಇಲ್ಲದಂತೆ ಮಾಡುವುದರಿಂದ ಅಂತಹ ವ್ಯವಸ್ಥೆಯಲ್ಲಿ ಅವರು ಪರಿಣಾಮಕಾರಿಯಾಗಿ ಸ್ಪರ್ಧೆಯಲ್ಲಿ ಭಾಗವಹಿಸಲು ಅಸಮರ್ಥರಾಗುತ್ತಾರೆ. ಆಗ ಅಂತಹ ವಂಚಿತ ವಿಭಾಗಗಳು ಮುಂದುವರಿದ ವರ್ಗಗಳೊಂದಿಗೆ ಸ್ಪರ್ಧೆ ಮಾಡುವಾಗ ಎದುರಿಸುವ ಅಡೆತಡೆಗಳನ್ನು ಪರಿಣಾಮಕಾರಿಯಾಗಿ ನಿವಾರಿಸಿಕೊಳ್ಳಲು (ಮೀಸಲಾತಿಯಂತಹ) ವಿಶೇಷ ವ್ಯವಸ್ಥೆಯು ವಾಸ್ತವಿಕ ಸಮಾನತೆಯನ್ನು ಖಾತ್ರಿಪಡಿಸುತ್ತದೆ."

-ಸುಪ್ರಿಂ ಕೋರ್ಟ್



ಬೆಂಕಿಯಿಂದ ಬಾಣಲೆಗೆ ...

ಈಗಿನ ಸನ್ನಿವೇಶದಲ್ಲಿ ಯಾವುದೇ ಧಾರ್ಮಿಕ ಮೂಲಭೂತವಾದದ ಹಿಡಿತಕ್ಕೆ ಸಿಲುಕದಂತೆ ಹೆಣ್ಣುಮಕ್ಕಳನ್ನು ಕಾಪಾಡುವ ಮತ್ತು ಅವರ ಶಿಕ್ಷಣದ ಹಕ್ಕು ಮತ್ತು ಆಯ್ಕೆಯ ಸ್ವಾತಂತ್ರ್ಯಕ್ಕೆ ಚ್ಯುತಿ ಬಾರದಂತೆ ಒಕ್ಕೊರಲಿನಿಂದ ಕೇಳಬೇಕಾಗಿದೆ. ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ನಡೆಯುತ್ತಿರುವ ಪ್ರಕರಣದಲ್ಲಿ ದೇಶದ ಬಹುದೊಡ್ಡ ಮಹಿಳಾ ಸಂಘಟನೆಯಾದ ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ ಸಾರ್ವಜನಿಕ ಹಿತಾಸಕ್ತಿಯ ಅರ್ಜಿಯ ಮೂಲಕ ಪ್ರವೇಶಿಸಿದೆ. ಮತ್ತು ಉಚ್ಚ ನ್ಯಾಯಾಲಯಕ್ಕೆ ಫೆಬ್ರುವರಿ 05 ರಂದು ಹೊರಡಿಸಿದ ಸರಕಾರದ ಆದೇಶವನ್ನು ರದ್ದು ಮಾಡಲು ಕೋರಿಕೊಳ್ಳುತ್ತಿದೆ.

ಕೆ.ಎಸ್. ವಿಮಲ

ಹೊಸತೊಂದು ವಿವಾದ:

ಬತ್ತಳಿಕೆಯ ಬಾಣ ಖಾಲಿಯಾಗುವುದೇ ಇಲ್ಲದಷ್ಟು. ವಿವಾದಗಳ ಬಾಣಗಳು ಬಂದು ಬಂದು ಜನರ ಮೇಲೆ ಎರಗುತ್ತಿವೆ. ಒಂದರ ಹಿಂದೊಂದರಂತೆ ಲವ್ ಜಿಹಾದ್, ಮತಾಂತರ, ಮರ್ಯಾದೆಯ ಹೆಸರಿನ ಹತ್ಯೆಗಳು ಈಗ ಶಿರವಸ್ತ್ರ. ಯಾಕೆ ಇದು ಹೀಗೆ ಎಂದು ಯಾರೂ ಅಚ್ಚರಿ ಪಡುವ ಪ್ರಮೇಯವೇ ಇಲ್ಲ. ಪ್ರಭುತ್ವದ ಗುಣವಿದು. ಜನರ ಸಮಸ್ಯೆಗಳನ್ನು ಪರಿಹರಿಸಲಾಗದಾಗ ಜನರನ್ನೇ ಇನ್ನೊಂದು ರೀತಿಯ ಸಮಸ್ಯೆ ಕಡೆ ದೂಡಿಬಿಡುವುದು. ಅದರಲ್ಲಿಯೂ ಧರ್ಮ ದೇವರು ಭಾಷೆ ಇತ್ಯಾದಿ ಜನರ ಮನಸ್ಸಿಗೆ ತಟ್ಟುವ ಅಥವಾ ಭಾವುಕ–ಭ್ರಾಮಕ ವಿಷಯಗಳನ್ನು ಮುಂದೆ ಮಾಡಿಟ್ಟು ಅದರಿಂದ ಉರಿಯುವ ಬೆಂಕಿಯಲ್ಲಿ ಪ್ರಭುತ್ವ ಚಳಿ ಕಾಯಿಸಿಕೊಳ್ಳುವುದು. ಈಗ ನಮ್ಮ ಸುತ್ತಮುತ್ತ ನಡೆಯುತ್ತಿರುವ ಶಿರವಸ್ತ್ರ ವಿದ್ಯಮಾನಗಳು ಮತ್ತು ಅವುಗಳು ತೆಗೆದುಕೊಳ್ಳುತ್ತಿರುವ ತಿರುವುಗಳು ಕಮಟು ರಾಜಕಾರಣದ ವಾಸನೆಯನ್ನು ಬೀರುತ್ತಿವೆ ಎಂದು ಹೇಳದೇ ಗತ್ಯಂತರವಿಲ್ಲ.

ಘಟನೆಯ ವಿವರಗಳು ಈಗಾಗಲೇ ಎಲ್ಲರಿಗೂ ಗೊತ್ತಿದೆ. ಉಡುಪಿಯ ಸರಕಾರೀ ಜ್ಯೂನಿಯರ್ ಕಾಲೇಜಿನಲ್ಲಿ ನಾಲ್ಕಾರು ವಿದ್ಯಾರ್ಥಿನಿಯರು ಹಿಜಾಬ್ ಧರಿಸಿಯೇ ಕುಳಿತುಕೊಳ್ಳಲು ಬೇಡಿಕೆ ಇಟ್ಟರು, ಅದು ಮಾನ್ಯವಾಗಲಿಲ್ಲ, ಅವರ ಜೊತೆ ಮಾರನೇ ದಿನ ಇನ್ನಷ್ಟು ವಿದ್ಯಾರ್ಥಿನಿಯರು ಸೇರಿಕೊಂಡರು, ನಂತರ ಕಾಲೇಜು ಆಡಳಿತ ಉಳಿದವರ ಮನ ಒಲಿಸಿತು. ಕೆಲವರು ಹಠ ಹಿಡಿದರು. ಹೊತ್ತಿದ್ದು ಸಣ್ಣ ಕಿಡಿ. ಅಲ್ಲಿಯೇ ನೀರು ಸಿಗದಿದ್ದರೆ ಪಕ್ಕದ ಮರದಿಂದ ನಾಲ್ಕಾರು ಹಸಿ ಸೊಪ್ಪು ಹಾಕಿದ್ದರೂ ಅಲ್ಲಿಯೇ ತಣ್ಣಗಾಗುತ್ತಿತ್ತು. ಆದರೆ ಕಿಡಿ ಹೊತ್ತಿಸಿದವರಿಗೆ ಅದರ ಬೆಂಕಿಯ ಶಾಖದಿಂದ ಮುಂದಿನ ಮತ್ತು ಬೆಂಕಿಗೆ ಪೆಟ್ರೋಲ್ ಸುರಿದವರಿಗೆ ಅದರ ಮುಂದಿನ ವರ್ಷದ್ದೂ ಸೇರಿದಂತೆ ಲಾಭ ಪಡೆಯಲಿತ್ತು. ಅದೀಗ ರಾಜ್ಯವ್ಯಾಪೀ ತನ್ನ ನೆಲೆ ಕಂಡುಕೊಳ್ಳುವತ್ತ ದಾಪುಗಾಲಿಟ್ಟಿದೆ.

ಮತಾಂಧರ ಕೈಗೆ ಸಿಕ್ಕ ಅಸ್ತ್ರ:

ಈ ಶಿರವಸ್ತ್ರ, ಬುರ್ಖಾಗಳಂಥಹ ಹೆಣ್ಣುಮಕ್ಕಳ ಉಡುಗೆಯನ್ನೇ ಗುರಿಯಾಗಿಸಿ ಆಗಾಗ ಇಂತಹ ಕಿರಿಕಿರಿ ಕರ್ನಾಟಕದಲ್ಲಿ ನಡೆಯುತ್ತಲೇ ಇವೆ. ಎಲ್ಲೆಲ್ಲಿ ತಮ್ಮ ನೆಲೆಯನ್ನು ವಿಸ್ತರಿಸಬೇಕೋ ಹಾಗೂ ಬೇರಿಳಿಸಬೇಕೋ ಅಲ್ಲೆಲ್ಲ ಆಗಾಗ ಇಂಥಹ ಸಣ್ಣ ವಿಷಯಗಳನ್ನೇ ದೊಡ್ಡದು ಮಾಡಿ ಗದ್ದಲ ಎಬ್ಬಿಸುವುದು 2010–11 ರಿಂದಲೇ ನಡೆಯುತ್ತಿದೆ. ಪಡ್ಡೆ ಹುಡುಗರ ತಲೆಗೆ ಕೋಮುವಿಷ ತುಂಬಲು ಒಂದು ಒಳ್ಳೆಯ ಅಸ್ತ್ರ ಕೇಸರಿ ಶಾಲು ಎಂಬಂತೆ ಈ ವಿಸ್ಯಮಾನಗಳು ನಡೆಯುತ್ತಿವೆ. ಚುನಾವಣೆಯ ಮೊದಲ ಮತದಾರರನ್ನು ತಮ್ಮತ್ತ ಸೆಳೆಯುವ ಮತ್ತು ಕೋಮುಧೃವೀಕರಣಕ್ಕೆ ಇದು ಒಂದು ತಂತ್ರವೂ ಹೌದು ಎಂಬುದು ಈಗಾಗಲೇ ಸ್ಪಷ್ಟವಾಗಿರುವ ಸಂಗತಿ. ಆದರೆ ಹೀಗೆ ಮೇಲ್ನೋಟಕ್ಕೆ ಕಾಣುವ ಸಂಗತಿಯಡಿ ಮಹಿಳೆಯರ ಅದರಲ್ಲಿಯೂ ಮುಸ್ಲಿಂ ಮಹಿಳೆಯರು ಮೂಲಭೂತವಾದೀ ಶಕ್ತಿಗಳ ಹಿಡಿತಕ್ಕೆ ಇನ್ನಷ್ಟು ಒಳಗಾಗುತ್ತಿರುವುದು ಸುಸ್ಪಷ್ಟ. ಯಾಕೆಂದರೆ ಈ ನೆಲದಲ್ಲಿ ಬೇಕಷ್ಟು ಜನ ಮುಸ್ಲಿಂ ಮಹಿಳೆಯರು ಸ್ತ್ರೀ ಸ್ವಾತಂತ್ರ್ಯದ ಪರವಾಗಿ, ಸಮಾನ ಅವಕಾಶ ನೀಡಿದ ಸಂವಿಧಾನದ ಅಡಿಯಲ್ಲಿ ಬದುಕುವ ತಮ್ಮ ಹಕ್ಕನ್ನು ಸ್ಥಾಪಿಸಿಕೊಳ್ಳುವ ನಿಟ್ಟಿನಲ್ಲಿ ಕೋಮಿನ ಮತೀಯ, ಮೂಲಭೂತವಾದಿಗಳಿಗೆ ಸವಾಲೊಡ್ಡಿ ಅಪಾರ ಕಷ್ಟಗಳನ್ನು ಮೂದಲಿಕೆಗಳನ್ನೂ ಎದುರಿಸಿ ನಿಂತವರಿದ್ದಾರೆ. ಆದರೆ ಆಂತರ್ಯದಲ್ಲಿ ಒಬ್ಬರಿಗೊಬ್ಬರು ಪೂರಕವಾಗಿಯೇ ನಡೆದುಕೊಳ್ಳುವ ಕೋಮುವಾದೀ ಮತ್ತು ಮೂಲಭೂತವಾದಿ ಶಕ್ತಿಗಳು ತಮ್ಮ ತಮ್ಮ ನೆಲೆಯನ್ನು ಭದ್ರಗೊಳಿಸಿಕೊಳ್ಳುವ ನಿಟ್ಟಿನಲ್ಲಿ ಇಂತಹ ಪ್ರಯತ್ನಗಳನ್ನು ಕೈ ಬಿಡದೆಯೇ ಮುಂದುವರೆಸುತ್ತಿದ್ದಾರೆ. ಇದರ ಭಾಗವಾಗಿಯೇ ಇಂದು ಶಿರವಸ್ತ್ರದ ಪ್ರಕರಣದಲ್ಲಿ ಮೇಲಿಂದ ಮೇಲೆ **ಅಗತ್ಯ ಧಾರ್ಮಿಕ ಆಚರಣೆ (ಎಸೆನ್ಸಿಯಲ್ ರಿಲಿಜಿಯಸ್ ಪ್ರಾಕ್ಟೀಸ್)** ಚರ್ಚೆ ಬಂದಾಗೆಲ್ಲ ಎದೆ ನಡುಗುತ್ತದೆ. ಈ ಕ್ಷಣದಲ್ಲಿ ಮಕ್ಕಳ ಶಿಕ್ಷಣದ ಕಾರಣಕ್ಕಾಗಿ ಉಚ್ಚನ್ಯಾಯಾಲಯಕ್ಕೆ ವಾದ ಮಂಡಿಸಿ ಆದೇಶ ಪಡೆಯುವ ಈ ಒತ್ತಡದಲ್ಲಿ ಇದು ಮುಂದೆ ಸೃಷ್ಟಿ ಮಾಡಬಹುದಾದ ಪರಿಣಾಮಗಳು ಸ್ವಲ್ಪ ಸಮಸ್ಯೆಯೇ. ಇದೇ ಸಂದರ್ಭದಲ್ಲಿ ಯುವತಿಯರು ಹಿಜಾಬ್ ತಮ್ಮ ಹಕ್ಕು ಎಂದು ವಾದಿಸುತ್ತಿರುವುದು ಮತ್ತು ಉಡುಪಿ ಕುಂದಾಪುರಗಳ ಘಟನೆಯ ನಂತರ ಕಾಳ್ಗಿಚ್ಚಿನಂತೆ ಹಬ್ಬುತ್ತಿರುವುದು ಒಂದು ವಿಪರೀತ ಸನ್ನಿವೇಶ ಮತ್ತು ಭವಿಷ್ಯದ ಸೂಚನೆಯಾಗಿದೆ. ಆಯ್ಕೆಯ ಹಕ್ಕನ್ನು ಪ್ರತಿಪಾದಿಸುತ್ತಲೇ ನಾನು ತೊಡುವ ಉಡುಪು, ನಾನು ತಿನ್ನುವ ಆಹಾರ ನಾನು ಬಯಸುವ ಬಾಳ ಸಂಗಾತಿ ಹೀಗೆ ಆಯ್ಕೆಯ ಸ್ವಾತಂತ್ರ್ಯವನ್ನು ಎಷ್ಟೋ ವರ್ಷಗಳಿಂದ ಪ್ರತಿಪಾದಿಸಿಕೊಂಡು ಬಂದ ಮಹಿಳಾಪರ ಮತ್ತು ಮಹಿಳಾ ಚಳುವಳಿ ಈ ನಿಟ್ಟಿನಲ್ಲಿ ಒಂದಿಷ್ಟು ಮುನ್ನಡೆಯನ್ನು ಸಾಧಿಸಿತ್ತು. ಮತ್ತು ಆ ವಾದಗಳ ಜೊತೆಯೇ ಮೂಲಭೂತ ಅಗತ್ಯವಾದ ಶಿಕ್ಷಣಕ್ಕೆ ವಸ್ತ್ರ ಎರವಾಗುವುದಾದಲ್ಲಿ ಅಲ್ಲಿ ವಸ್ತ್ರಧಾರಣೆಯ ಒತ್ತಡವನ್ನು ಪಾಲಿಸುತ್ತಲೇ ಶಿಕ್ಷಣ ಪಡೆಯಬೇಕು ಮತ್ತು ಆ ಶಿಕ್ಷಣವೇ ಮಾನವ ಸ್ವಾತಂತ್ರ್ಯದ ಹಕ್ಕುಗಳ ಪಾಲನೆಗೆ ಮೊದಲ ಮೆಟ್ಟಿಲಾಗಬೇಕು ಎಂದು. ಆದರೆ ಈಗಿನ ವಿದ್ಯಮಾನಗಳಿಂದ ಪ್ರಚೋದನೆಗೆ ಒಳಗಾಗಿರುವ ವಿದ್ಯಾರ್ಥಿನಿಯರು ಪ್ರತಿಕ್ರಿಯೆ ನೀಡುತ್ತಿರುವುದು ಅವರೊಳಗೆ ಹುಟ್ಟಿಸಿರುವ ಆಕ್ರೋಶದ ಕುರುಹೂ ಹೌದು. ಜೊತೆಗೇ ನಾಳೆಯ ತಮ್ಮ ಬದುಕು ಹೇಗೆ ನಿರಾಯಾಸವಾಗಿ ಮತೀಯ ಮೂಲಭೂತವಾದದ ಹಿಡಿತಕ್ಕೆ ಸಿಲುಕುತ್ತದೆ ಎಂಬ ಅರಿವಿಲ್ಲದೆಯೇ ಯಾರೋ ತೋಡಿರುವ ಖೆಡ್ಡಾದೊಳಗೆ ಬೀಳುತ್ತಿರುವುದೂ ಹೌದು. ಇದೊಂದು ಅತ್ತ ದರಿ ಇತ್ತ ಪುಲಿ ಎಂಬಂತೆ ನಡೆಯುತ್ತಿರುವ ಘಟನೆ. ಅತ್ತ ಅಲ್ಪಸಂಖ್ಯಾತ ಮೂಲಭೂತವಾದವೂ ಸ್ತ್ರೀ ಸ್ವಾತಂತ್ರ್ಯದ ಪರವಾಗಿಲ್ಲ ಇತ್ತ ನಸ್ತ್ರೀ ಸ್ವಾತಂತ್ರಮರ್ಹಸಿ ಎಂಬುದನ್ನು ಪ್ರತಿಪಾದಿಸುವ ಮನು ಪ್ರಣೀತ ಸಿದ್ಧಾಂತವನ್ನು ಒಪ್ಪುವವರು ಕೂಡ ಸ್ತ್ರೀ ಸ್ವಾತಂತ್ರದ ಪರವಾಗಿಲ್ಲ.

ಅಸ್ಪಷ್ಟ ಸರಕಾರೀ ಆದೇಶ:

ಉಡುಪಿಯ ಸರಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ನಡೆದ ಘಟನೆಯನ್ನು ಹೆಮ್ಮರ ಮಾಡದೇ ಅಲ್ಲಿಯೇ ತಣ್ಣಗೆ ಮಾಡದೇ ಹರಿ ಬಿಟ್ಟು ನಂತರ ಕಾನೂನಿನ ಮಾನ್ಯತೆಯಿಲ್ಲದ ಆದರೆ ಅಗತ್ಯಕ್ಕೆಂದು ಸರಕಾರದ ಆದೇಶದನ್ವಯ ಅವಕಾಶ ಕಲ್ಪಿಸಿಕೊಂಡ ಕಾಲೇಜು ಡೆವಲೆಪ್‌ಮೆಂಟ್ ಸಮಿತಿ ಎಂಬ ವ್ಯವಸ್ಥೆಯ ಅಧ್ಯಕ್ಷರಾಗಿರುವ ಸ್ಥಳೀಯ ಶಾಸಕರು ಮಧ್ಯ ಪ್ರವೇಶ ಮಾಡಿ ಅನುಕೂಲಕ್ಕಿಂತ ಹೆಚ್ಚು ಅನಾನುಕೂಲ ಮಾಡಿದ್ದು ಒಂದಾದರೆ ದಿನಾಂಕ 05–02–2022ರಂದು ಸರಕಾರ ಹೊರಡಿಸಿದ ಆದೇಶ ಇನ್ನಷ್ಟು ಗೊಂದಲವನ್ನು ಹುಟ್ಟಿ ಹಾಕಿದೆ. ಸರಕಾರವನ್ನು ನಡೆಸುತ್ತಿರುವ ಪಕ್ಷದ ಸಂಸದರು ಶಾಸಕರು ಕೊಡುತ್ತಿರುವ ಹೇಳಿಕೆಗಳಿಂದಲೇ ದೃಢ ಪಟ್ಟಿರುವುದು ಕೇಸರೀ ಶಾಲುಗಳನ್ನು ಒದಗಿಸಿ ವಿದ್ಯಾರ್ಥಿಗಳನ್ನು 'ಹಿಂದುತ್ವ' ವಾದದ ಪ್ರತಿನಿಧಿಗಳನ್ನಾಗಿ ತೋರಿಸಿ, ವಿಚಿತ್ರ ಉನ್ಮಾದದ ಸನ್ನಿವೇಶವನ್ನು ನಿರ್ಮಿಸಲಾಯಿತು. ಬಹುತೇಕರು ಅದರಲ್ಲಿ ಹಿಂದುಳಿದ ಸಮುದಾಯಗಳೆಂದು ವರ್ಗೀಕರಿಸಲ್ಪಟ್ಟ ಕುಟುಂಬಗಳ ಮಕ್ಕಳೆಂಬುದನ್ನು ಗಮನಸಲೇಬೇಕು. ನಂತರ ಆದೇಶ ಹೊರಡಿಸಿ ಸಾರ್ವಜನಿಕ ಸುವ್ಯವಸ್ಥೆಗೆ ಭಂಗ ಬರದಂತೆ ಇರುವ ಉಡುಪುಗಳನ್ನು ಧರಿಸಬೇಕೆಂದು ತಿಳಿಸಲಾಗಿದೆ. ಇದು ಉದ್ದೇಶಪೂರ್ವಕವಾಗಿ ಅಲ್ಪ ಸಂಖ್ಯಾತರ ಮತ್ತು ಆ ಸಮೂಹದ ಹೆಣ್ಣುಮಕ್ಕಳ ಶಿಕ್ಷಣಕ್ಕೆ ಎರವಾಗುವ ಕ್ರಿಯೆ ಎಂದು ಮೇಲ್ನೋಟಕ್ಕೇ ಗೊತ್ತಾಗುತ್ತದೆ. ಯಾಕೆಂದರೆ ಹೆಣ್ಣು ಮಗಳೊಬ್ಬಳ ಶಿಕ್ಷಣಕ್ಕಾಗಿ ಅನಿವಾರ್ಯ ಅಗತ್ಯವಾಗಿರಬಹುದಾದ ಅಥವಾ ಆಕೆಯ ಆಯ್ಕೆಯ ಮೇರೆಗೇ ಆಕೆಯ ತಲೆಯ ಮೇಲೆ ಧರಿಸಬಹುದಾದ ಹಿಜಾಬ್ ಅಥವಾ ಶಿರವಸ್ತ್ರ ಹೇಗೆ ಸಾರ್ವಜನಕ ಸುವ್ಯವಸ್ಥೆಗೆ ಭಂಗ ತರಬಹುದು? ಸಮವಸ್ತ್ರದ ಭಾಗವಾಗಿಯೇ ಅದೇ ಬಣ್ಣದ ಅಥವಾ ಸಿ.ಡಿ.ಸಿ/ಸರಕಾರ ಸೂಚಿಸಿದ ಸಮವಸ್ತ್ರದ ಭಾಗವಾಗಿ ಎಲ್ಲ ವಿದ್ಯಾರ್ಥಿನಿಯರೂ ಚೂಡಿದಾರ್/ಸಲ್ವಾರ ಕಮೀಜ್ ಮೇಲೊಂದು ಕುತ್ತಿಗೆಯ ವರೆಗೆ ಧರಿಸುವ ದುಪ್ಪಟ್ಟಾ ಇನ್ನೂಸ್ವಲ್ಪ ಮೇಲೇರಿ ಆಕೆಯ ಶಿರವಸ್ತ್ರವಾದರೆ ಯಾರಿಗೆ ಅದರಿಂದ ತೊಂದರೆಯಾದೀತು. ಆಥವಾ ಆಳುವ ಸರಕಾರದ ಆಡಳಿತ ಮತ್ತು ನೀತಿಚ್ಯುತಿಗಳಾದಗಲೆಲ್ಲ ಹೀಗೆ ವಿನಾಕಾರಣ ತಗಾದೆ ಎಬ್ಬಿಸಿ ವಿದ್ಯಾರ್ಥಿಗಳನ್ನು ದಾರಿ ತಪ್ಪಿಸುವುದೇಕೆ ಎಂದು ಅರಿಯದಷ್ಟು ಅಜ್ಞಾನಿಗಳೇ ಈ ನಾಡಿನ ಜನರು?

ಇತ್ತೀಚಿನ ವಿದ್ಯಮಾನಗಳು:


ಪ್ರಕರಣ ನ್ಯಾಯಾಲಯದ ಕಟಕಟೆಯಲ್ಲಿದೆ. ವಾದ ವಿವಾದಗಳು ನಡೆಯುತ್ತಿವೆ. ಮಧ್ಯಂತರ ಆದೇಶವೊಂದು ಬಂದಿದ್ದು ಅದರ ಪ್ರಕಾರ ಈಗಾಗಲೇ ಸಮವಸ್ತ್ರ ನೀತಿ ಇರುವ ಕಾಲೇಜುಗಳಿಗೆ ಅನ್ವಯವಾಗುವಂತೆ ಸೂಚಿಸಲಾಗಿದೆ. ಆದರೆ ಬೆರಳು ಕೊಟ್ಟರೆ ಹಸ್ತ ನುಂಗುವ ಜಾತಿಯ ಸರಕಾರ ಮತ್ತು ಆಡಳಿತ ಮಂಡಳಿಗಳ ಅನಗತ್ಯ ಬಿಗು ನಡೆಯಿಂದ ಇನ್ನಷ್ಟು ಮತ್ತಷ್ಟು ವಿದ್ಯಾ ಸಂಸ್ಥೆಗಳಲ್ಲಿ ಮುಸ್ಲಿಂ ಅಲ್ಪ ಸಂಖ್ಯಾತ ಸಮುದಾಯದ ಬಾಲಕಿಯರು ಆಕ್ರೋಶ ವ್ಯಕ್ತ ಪಡಿಸುತ್ತಿದ್ದಾರೆ. ಕಾಲೇಜಿನ ಗೇಟಿನಲ್ಲಿ ಪ್ರತಿಭಟನೆ ನಡೆಯುತ್ತಿದೆ. ಕೆಲವು ಕಡೆ ಅವರ ಮೇಲೆ ಪ್ರಕರಣ ದಾಖಲಾಗಿದೆ. ಇನ್ನು ಕೆಲವು ಕಡೆ ಅವರನ್ನು ಕಾಲೇಜಿನಿಂದ ಹೊರ ಹಾಕಲಾಗಿದೆ. ದುರಂತವೆಂದರೆ ಇಡೀ ಪ್ರಕರಣ ಪಿ.ಯು.ಕಾಲೇಜಿಗೆ ಸಂಬಂಧಿಸಿದ್ದಾಗಿದ್ದರೂ ಶಾಲೆಯ, ಇಂಜಿನಿಯರಿಂಗ್ ಕಾಲೇಜುಗಳ, ಅಲ್ಪ ಸಂಖ್ಯಾತ ಕಲ್ಯಾಣ ಸಮಿತಿಗಳು ನಡೆಸುತ್ತಿರುವ ವಿದ್ಯಾಸಂಸ್ಥೆಗಳ, ಕೇವಲ ಉರ್ದು ಹೆಣ್ಣು ಮಕ್ಕಳ ಶಾಲೆಯ ಮಕ್ಕಳಿಗೂ ಈ ಆದೇಶವನ್ನು ಲಾಗು ಮಾಡಿ ಇನ್ನಷ್ಟು ಹದಗೆಡಿಸುತ್ತಿರುವುದರ ಮರ್ಮವೇನೆಂದು ಯಾರಿಗೆ ಅರ್ಥವಾಗಬಹುದು?

ಮುಸ್ಲಿಂ ಹೆಣ್ಣುಮಕ್ಕಳು ಶಿಕ್ಷಣದ ಕಕ್ಷೆಗೆ ಒಳಪಡುತ್ತಿರುವುದೇ ಇತ್ತೀಚೆಗೆ ಮತ್ತು ಅದರಲ್ಲಿ ಕೂಡಾ ಏರಿಳಿತಗಳಾಗುತ್ತಿವೆ ಎಂಬುದನ್ನು ಇತ್ತೀಚಿನ ಎನ್.ಎಸ್.ಎಸ್. ಓ. ವರದಿ ಹೊರಗೆಡಹಿದೆ. ಯಾವುದೇ ಉನ್ನತ ಹುದ್ದೆಗಳಲ್ಲಿ ಇರಬಹುದಾದ ಪ್ರಮಾಣ ಕೂಡಾ ಇದನ್ನು ಸಾಬೀತು ಪಡಿಸುತ್ತದೆ. ಆದ್ದರಿಂದಲೇ ಈ ಸನ್ನಿವೇಶದಲ್ಲಿ ಯಾವುದೇ ಧಾರ್ಮಿಕ ಮೂಲಭೂತವಾದದ ಹಿಡಿತಕ್ಕೆ ಸಿಲುಕದಂತೆ ಹೆಣ್ಣುಮಕ್ಕಳನ್ನು ಕಾಪಾಡುವ ಮತ್ತು ಅವರ ಶಿಕ್ಷಣದ ಹಕ್ಕು ಮತ್ತು ಆಯ್ಕೆಯ ಸ್ವಾತಂತ್ರ್ಯಕ್ಕೆ ಚ್ಯುತಿ ಬಾರದಂತೆ ಒಕ್ಕೊರಲಿನಿಂದ ಕೇಳಬೇಕಾಗಿದೆ. ಮಕ್ಕಳ ಶಿಕ್ಷಣವನ್ನು ಪಣಕ್ಕಿಟ್ಟಾದರೂ ತಮ್ಮ ರಾಜಕಾರಣವನ್ನು ಬೆಳೆಸಿಕೊಳ್ಳಲು ಪ್ರಯತ್ನಿಸುವ ಯಾವುದೇ ರಾಜಕೀಯ ಪಕ್ಷದ ಕೆಲಸ ಒಪ್ಪುವಂತಹುದಲ್ಲ. ಸ್ವಾತಂತ್ರ ಹೋರಾಟದಲ್ಲಿ ವಿದ್ಯಾರ್ಥಿಗಳ ಪಾತ್ರ ಬಹಳ ದೊಡ್ಡದಿತ್ತು. ಆದರೆ ಅದು ದೇಶದ ಸ್ವಾತಂತ್ರ್ಯಕ್ಕಾಗಿ ಅಗತ್ಯವಾಗಿತ್ತು. ಆದರೀಗ ಶಿಕ್ಷಣದ ಕ್ಷೇತ್ರದಲ್ಲಿನ ಅನಾನುಕೂಲಗಳನ್ನು ಸರಿಪಡಿಸಲು ವಿದ್ಯಾರ್ಥಿಗಳು ಬೀದಿಗಿಳಿಯದಂತೆ ವಿದ್ಯಾರ್ಥಿ ಸಂಘಟನೆಗಳ ಚುನಾವಣೆಗಳನ್ನು ತೆಗೆದು ಹಾಕಿ ಅವರನ್ನು ರಾಜಕೀಯ ಶಕ್ತಿಗಳ ಆಟದ ದಾಳಗಳನ್ನಾಗಿ ಮಾಡಿಸಿಕೊಳ್ಳುತ್ತಿರುವುದು ಖಂಡನೀಯ.

ಹೆಣ್ಣು ಮಕ್ಕಳ ಆಯ್ಕೆ ಸ್ವಾತಂತ್ರ್ಯ ಮತ್ತು ಶಿಕ್ಷಣದ ಹಕ್ಕು ಕಾಪಾಡುವುದು ನಮ್ಮೆಲ್ಲರ ಜವಾಬ್ದಾರಿ. ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ನಡೆಯುತ್ತಿರುವ ಪ್ರಕರಣದಲ್ಲಿ ದೇಶದ ಬಹುದೊಡ್ಡ ಮಹಿಳಾ ಸಂಘಟನೆಯಾದ ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ ಸಾರ್ವಜನಿಕ ಹಿತಾಸಕ್ತಿಯ ಅರ್ಜಿಯ ಮೂಲಕ ಪ್ರವೇಶಿಸಿದೆ. ಮತ್ತು ಉಚ್ಚ ನ್ಯಾಯಾಲಯಕ್ಕೆ ಫೆಬ್ರುವರಿ 05–2022 ರಂದು ಹೊರಡಿಸಿದ ಸರಕಾರದ ಆದೇಶವನ್ನು ರದ್ದು ಮಾಡಲು ಕೋರಿಕೊಳ್ಳುತ್ತಿದೆ.



ವ್ಯಂಗ್ಯಚಿತ್ರ ಕೃಪೆ: ಪಿ. ಮಹಮ್ಮದ್



ಎಡಪಂಥೀಯರು ಕಿಸಾನ್ ಚಳುವಳಿಯನ್ನು ಬಡ ರೈತರ ಹಾಗೂ ಕೃಷಿ ಕೂಲಿಕಾರರ ಸಮಸ್ಯೆಗಳತ್ತ ತಿರುಗಿಸಬೇಕು –ಪ್ರಕಾಶ್ ಕಾರಟ್

ಬೆಂಗಳೂರಿನ ಫೌಂಡೇಷನ್ ಫಾರ್ ಅಗ್ರೇರಿಯನ್ ಸ್ಟಡೀಸ್ ಸಂಘಟಿಸಿದ್ದ ಆನ್ ಲೈನ್ ಬಹಿರಂಗ ಉಪನ್ಯಾಸದಲ್ಲಿ "2020–21 ರ ರೈತ ಚಳುವಳಿಯ ರಾಜಕೀಯ ಪರಿಣಾಮಗಳು" ಕುರಿತು ಸಿಪಿಐ(ಎಂ) ಪೋಲಿಟ್ ಬ್ಯೂರೋ ಸದಸ್ಯ ಕಾಂ.ಪ್ರಕಾಶ್ ಕಾರಟ್ ಮಾತನಾಡಿದರು. ಮೂರು ಕೃಷಿ ಕಾನೂನುಗಳ ವಿರುದ್ಧದ ಚಳುವಳಿಗಳು ಪಂಜಾಬ್, ಹರ್ಯಾಣಾ ಮತ್ತು ಪಶ್ಚಿಮ ಉತ್ತರ ಪ್ರದೇಶದಲ್ಲಿ ಪ್ರಾರಂಭವಾಯಿತು. ಆ ಪ್ರದೇಶಗಳು ಕಾರ್ಷಿಕವಾಗಿ ಅಭಿವೃದ್ಧಿಯಾಗಿವೆ ಮತ್ತು ಅಲ್ಲಿಯ ರೈತರು ಚಾರಿತ್ರಿಕವಾಗಿ ಸರ್ಕಾರದ ಬೆಂಬಲ ಪಡೆದಿದ್ದಾರೆ. ಎಪಿಎಂಸಿ ತಿದ್ದುಪಡಿ ಕಾಯಿದೆಯಿಂದ ನೇರವಾಗಿ ತೊಂದರೆಗೊಳಗಾದ ರೈತರು ಆ ಕೃಷಿ ಕಾನೂನುಗಳ ವಿರುದ್ಧ ತಿರುಗಿಬಿದ್ದರು. ಅದಲ್ಲದೇ ಕನಿಷ್ಠ ಬೆಂಬಲ ಬೆಲೆ (ಎಂಎಸ್‌ಪಿ) ಯನ್ನು ಕೊನೆಗಾಣಿಸುವ ಮೊದಲ ಹೆಜ್ಜೆ ಇದು ಎಂದು ಕಳವಳಕ್ಕೊಳಗಾದ ರೈತರು ಕೂಡ ಈ ಕೃಷಿ ಕಾನೂನುಗಳ ವಿರುದ್ಧ ಕಿಡಿ ಕಾರಿದರು. ಭಾರತದ ಇತರ ಪ್ರದೇಶಗಳ ರೈತರು ಕೂಡ ಎಂಎಸ್‌ಪಿಯನ್ನು ತಮ್ಮ ಆದಾಯದ ಕುಸಿತಕ್ಕೆ ಅತ್ಯಗತ್ಯವಾದ ರಕ್ಷಣೆ ಎಂದು ತಿಳಿದಿದ್ದಾರೆ.

ಕಳೆದ ಕೆಲವು ದಶಕಗಳಲ್ಲಿನ ಕಾರ್ಷಿಕ ಬಿಕ್ಕಟ್ಟು ಇನ್ನೂ ತೀವ್ರವಾಗುತ್ತಿರುವ ಕಾರಣ ಸ್ಥಳೀಯ ಮಟ್ಟದಲ್ಲಿ ಅದಾಗಲೇ ಹೋರಾಟಗಳು ನಡೆಯುತ್ತಿವೆ. ನವಂಬರ್ 2020 ರಲ್ಲಿ ಆರಂಭವಾದ ಐತಿಹಾಸಿಕ ಪ್ರತಿಭಟನೆಗಳಿಗೆ ಮುಂಚೆಯೇ ರಾಷ್ಟ್ರ ಮಟ್ಟದಲ್ಲಿ ಕಾರ್ಷಿಕ ಚಳುವಳಿಯನ್ನು ಆರಂಭಿಸಲು ಪ್ರಯತ್ನಗಳು ನಡೆದಿದ್ದವು ಎಂದು ಪ್ರಕಾಶ್ ಕಾರಟ್ ಗಮನ ಸೆಳೆದರು. ಈ ಆವೇಗ, ಮತ್ತು ಪಂಜಾಬ್, ಹರ್ಯಾಣಾ ಹಾಗೂ ಪಶ್ಚಿಮ ಉತ್ತರ ಪ್ರದೇಶ ರೈತರ ವಿವಿಧ ವಿಭಾಗಗಳು ಒಗ್ಗೂಡಿದ ಕಾರಣದಿಂದಾಗಿ ಹಿಂದೆಂದೂ ಕಾಣದ ಹಾಗೂ ದೀರ್ಘಕಾಲದ ಚಳುವಳಿಯಾಗಿ ಅದು ದೆಹಲಿಯ ಗಡಿಗಳಲ್ಲಿ ಕಾಣಿಸಿಕೊಂಡಿತು. ಈ ಚಳುವಳಿಯು ದೇಶಾದ್ಯಂತ ಎಲ್ಲಾ ಕಡೆಗಳಿಂದಲೂ ಸೌಹಾರ್ದ ಬೆಂಬಲ ಪಡೆಯಿತಾದರೂ ಅದರ ಪ್ರಭಾವ ಒಂದೇ ರೀತಿ ಇರಲಿಲ್ಲ. ಕಾರ್ಮಿಕ ಸಂಘಗಳ ಬೆಂಬಲದಿಂದಾಗಿ ಚಳುವಳಿಯ ಕಾವು ಇನ್ನೂ ಹೆಚ್ಚಾಯಿತು. ರೈತರ ಪ್ರತಿರೋಧವನ್ನು ಸುಸ್ಥಿರಗೊಳಿಸುವಲ್ಲಿ ಮತ್ತು ಕಾರ್ಮಿಕ ವರ್ಗ ಹಾಗೂ ರೈತ ಚಳುವಳಿಯನ್ನು ಒಗ್ಗೂಡಿಸುವಲ್ಲಿ ಎಡಪಂಥೀಯರು ಪ್ರಮುಖ ಪಾತ್ರ ವಹಿಸಿದರು. ರೈತರ ಕುಟುಂಬಗಳಿಂದ ಮಹಿಳೆಯರೂ ಗಮನಾರ್ಹ ಸಂಖ್ಯೆಯಲ್ಲಿ ಪಾಲ್ಗೊಂಡಿದ್ದರು. ಮೊಟ್ಟ ಮೊದಲ ಬಾರಿಗೆ ಮಹಿಳೆಯರನ್ನು ರೈತರನ್ನಾಗಿ ಪರಿಗಣಿಸಲಾಯಿತು. ಈ ಐಕ್ಯತೆಗೆ ಭಂಗ ತರಲು ಆಳುವ ವರ್ಗವು ಮಾಡಿದ ಎಲ್ಲಾ ನಿರಂತರ ಪ್ರಯತ್ನಗಳನ್ನು ಧೈರ್ಯದಿಂದ ಎದುರಿಸಿ ಹಿಮ್ಮೆಟ್ಟಿಸಿತು ಆ ರೈತ ಚಳುವಳಿ. ಆದರೆ ಇದನ್ನು ಸಾಧಿಸಲು ರೈತ ಬಂಧುಗಳು ದುಬಾರಿಯಾದ ತ್ಯಾಗ ಬಲಿದಾನಗಳನ್ನು ಮಾಡಬೇಕಾಯಿತು, 715 ರೈತರು ಹುತಾತ್ಮರಾದರು.

ಆ ನಂತರ ಪ್ರಕಾಶ್ ಕಾರಟ್ ಅವರು ಈ ಚಳುವಳಿಯ ಪ್ರಮುಖ ರಾಜಕೀಯ ಪರಿಣಾಮಗಳ ಬಗ್ಗೆ ಮಾತನಾಡಿದರು. ನವ–ಉದಾರವಾದ ಮತ್ತು ಭಾರತೀಯ ಆರ್ಥಿಕತೆಯನ್ನು ಕಾರ್ಪೊರೇಟ್‌ಗಳ ವಶಕ್ಕೆ ಒಪ್ಪಿಸುವ ಯತ್ನಗಳ ವಿರುದ್ಧ ಈ ಚಳುವಳಿಯು ಒಂದು ಐಕ್ಯ ಹೋರಾಟವನ್ನು ಕಟ್ಟುವಲ್ಲಿ ಯಶಸ್ವಿಯಾಯಿತು. ಹೆಚ್ಚಾಗುತ್ತಿರುವ ಆರ್ಥಿಕತೆಯ ಖಾಸಗೀಕರಣವನ್ನು ಬೆಂಬಲಿಸುತ್ತಿದ್ದ ಹಲವು ರಾಜಕೀಯ ಪಕ್ಷಗಳು ಅಥವಾ ಅಡ್ಡ ಗೋಡೆಯ ಮೇಲೆ ದೀಪ ಇಡುವ ಜನರು ಬೆಳೆಯುತ್ತಿರುವ ಚಳುವಳಿಯ ಕಾವಿನಿಂದಾಗಿ ತಮ್ಮ ನಿಲುವನ್ನು ಬದಲಾಯಿಸಬೇಕಾಯಿತು. ಈ ಚಳುವಳಿಯು ಬಹು ಮುಖ್ಯವಾಗಿ ಪಂಜಾಬ್ ಮತ್ತು ಪಶ್ಚಿಮ ಉತ್ತರ ಪ್ರದೇಶದ ಕೆಲವು ಭಾಗಗಳಲ್ಲಿ ಭಾರತೀಯ ಜನತಾ ಪಕ್ಷವನ್ನು ಮೂಲೆಗುಂಪು ಮಾಡುವಲ್ಲೂ ಯಶಸ್ವಿಯಾಯಿತು. ಪ್ರತಿಭಟನೆಯ ಭೌಗೋಳಿಕ ಪ್ರದೇಶ ಕೂಡ ರಾಜಕೀಯ ಮಹತ್ವವನ್ನು ಪಡೆಯಿತು. ರಾಜಧಾನಿಯ ಸುತ್ತ ಎದ್ದುಬಂದ ಭಾರಿ ಜನ ಸಮೂಹವನ್ನು ಕಡೆಗಣಿಸಲು ಕೇಂದ್ರದ ಆಡಳಿತ ಪಕ್ಷಕ್ಕೆ ಸಾಧ್ಯವಾಗಲಿಲ್ಲ. ಈ ಸಂಘರ್ಷವು ರೈತಾಪಿ ವರ್ಗ ಹಾಗೂ ಕಾರ್ಪೊರೇಟ್‌ಗಳ ನಡುವಿನ ತಿಕ್ಕಾಟವನ್ನು ಇನ್ನೂ ಹರಿತಗೊಳಿಸಿತು. ಮತ್ತು ಕಾರ್ಮಿಕರು ಹಾಗೂ ರೈತರ ನಡುವಿನ ವಿಶಾಲ ಐಕ್ಯತೆಯ ಸಾಧ್ಯತೆಯನ್ನು ಹೆಚ್ಚಿಸಿತು. ಬಹಳ ಮುಖ್ಯವಾಗಿ ಪಶ್ಚಿಮ ಉತ್ತರಪ್ರದೇಶದ ಕೆಲವು ಭಾಗಗಳಲ್ಲಿ 2013 ರ ಮುಜಾಫರ್‌ನಗರದ ಗಲಭೆಗಳ ನಂತರ ಆ ಪ್ರದೇಶದ ಹಳ್ಳಿಗಳಲ್ಲಿ ಬೆಳೆಯುತ್ತಿದ್ದ ಕೋಮುವಾದೀಕರಣವನ್ನು ಈ ಐಕ್ಯತೆಯು ಹಿಮ್ಮೆಟ್ಟಿಸಿತು. ಆದರೆ ಇಂತಹ ಐಕ್ಯತೆಯನ್ನು, ಆ ಪ್ರದೇಶಗಳಲ್ಲಿ ಹಿಂದುತ್ವ ಸಿದ್ಧಾಂತದ ತೀವ್ರತರದ ನುಸುಳುವಿಕೆಯಿಂದಾಗಿ ನಿಜವೆಂದು ನಂಬಲಾಗುವುದಿಲ್ಲ ಎಂದು ಎಚ್ಚರಿಸಿದರು. ಆದಕಾರಣ ನಿರಂತರ ರಾಜಕೀಯ ಹಾಗೂ ಸೈದ್ಧಾಂತಿಕ ಹೋರಾಟಗಳ ಅಗತ್ಯವಿದೆ ಎಂದು ಒತ್ತಿ ಹೇಳಿದರು. ಗ್ರಾಮೀಣ ಬಾರತದಲ್ಲಿನ ವರ್ಗ ರಾಜಕೀಯದ ಪ್ರಶ್ನೆಗಳ ಬಗ್ಗೆ ಮಾತನಾಡುತ್ತಾ ಈ ಚಳುವಳಿಯ ಯಶಸ್ಸು ಭಾರತೀಯ ಹಳ್ಳಿಗಳಲ್ಲಿನ ಉತ್ಪಾದನಾ ಸಂಬಂಧಗಳ ಸಂರಚನೆಯನ್ನು ಬದಲಿಸಿಲ್ಲ ಎಂದು ಸ್ಪಷ್ಟಪಡಿಸಿದರು.

ಸಂಘಟಿತ ಕಿಸಾನ್ ಚಳುವಳಿಯ ಬೆಳೆಯುತ್ತಿರುವ ಶಕ್ತಿಯ ಹೊರತಾಗಿಯೂ, ಅದು ಬಹುಪಾಲು ಜಮೀನು ಇರುವ ರೈತರ ಹಿತಾಸಕ್ತಿಗೆ ಸೀಮಿತವಾಗಿದೆ. ಆದ್ದರಿಂದ ಬಡ ರೈತರ ಹಾಗೂ ಕೃಷಿ ಕೂಲಿಕಾರರ ಪ್ರಶ್ನೆಗಳ ಆಧಾರದಲ್ಲಿ ಎಡಪಕ್ಷಗಳು ರೈತರ ಚಳುವಳಿಯನ್ನು ನಡೆಸಬೇಕಾದ ಅವಶ್ಯಕತೆ ಇದೆ ಎಂದು ಹೇಳಿದರು.

ಕಾರ್ಮಿಕ ಸಂಹಿತೆಗಳ ರದ್ಧತಿಗೆ ರಾಜ್ಯಸಭೆಯಲ್ಲಿ ಖಾಸಗಿ ಸದಸ್ಯರ ಮಸೂದೆ: ಸಿಪಿಐ(ಎಂ) ಸದಸ್ಯರಿಂದ ಮಂಡನೆ

ಫೆಬ್ರುವರಿ 4 ರಂದು ರಾಜ್ಯಸಭೆಯಲ್ಲಿ ಸಿಪಿಐ(ಎಂ)ನ ಸದನ ಮುಖಂಡರಾದ ಎಳಮಾರಂ ಕರೀಂ ನಾಲ್ಕು ಕಾರ್ಮಿಕ ಸಂಹಿತೆಗಳನ್ನು ರದ್ದು ಮಾಡುವ ಒಂದು ಖಾಸಗಿ ಮಸೂದೆಯನ್ನು ಮಂಡಿಸಿದರು. ಇದರ ಹೆಸರು 'ಕಾರ್ಮಿಕ ಸಂಹಿತೆಗಳು(ರದ್ಧತಿ) ಮಸೂದೆ. ಕೈಗಾರಿಕಾ ಸಂಬಂಧಗಳ ಸಂಹಿತೆ, ವೇತನಗಳನ್ನು ಕುರಿತ ಸಂಹಿತೆ, ಸಾಮಾಜಿಕ ಭದ್ರತೆ ಮತ್ತು ವೃತ್ತಿ ಸುರಕ್ಷಿತತೆ, ಆರೋಗ್ಯ ಮತ್ತು ಕೆಲಸದ ಷರತ್ತುಗಳನ್ನು ಕುರಿತ ಸಂಹಿತೆ ಇವುಗಳ ವಿರುದ್ಧ ದೇಶಾದ್ಯಂತ ಪ್ರತಿಭಟನೆಗಳು ನಡೆಯುತ್ತಿವೆ. ಕಾರ್ಮಿಕ ಸಂಘಟನೆಗಳು ಒಂದಾಗಿ ಇದನ್ನು ವಿರೋಧಿಸುತ್ತಿವೆಯಾದ್ದರಿಂದ ಇವನ್ನು ರದ್ದು ಮಾಡಬೇಕು ಎಂದು ಈ ಮಸೂದೆಯನ್ನು ಮಂಡಿಸಲಾಗಿದೆ ಎಂದು ಕರೀಂ ಹೇಳಿದ್ದಾರೆ.



ಈ ಸಂಹಿತೆಗಳು ಕಾನೂನುಗಳು ಕಾರ್ಮಿಕರಿಗೆ ಒದಗಿಸಿರುವ ಎಲ್ಲ ರಕ್ಷಣೆಗಳನ್ನು, ಸಾಮಾಜಿಕ ಭದ್ರತೆಯನ್ನು ಮತ್ತು ಕಲ್ಯಾಣ ಕ್ರಮಗಳನ್ನು ದುರ್ಬಲಗೊಳಿಸುತ್ತವೆ, ಈ ಸಂಹಿತೆಗಳನ್ನು ಕೇವಲ ಮಾಲಕರ ಹಿತಾಸಕ್ತಿಗಳನ್ನು ರಕ್ಷಿಸಲಿಕ್ಕಾಗಿಯೇ ರೂಪಿಸಲಾಗಿದೆ. ಈಗಿರುವ ಕಾರ್ಮಿಕ ಕಾನೂನುಗಳನ್ನು ಬಲಪಡಿಸುವುದು, ಅವನ್ನು ಹೆಚ್ಚು ಕಾರ್ಮಿಕ–ಪರ ಗೊಳಿಸುವುದು ಸರಕಾರದ ಕರ್ತವ್ಯ. ಆದರೆ ಸರಕಾರ ಇದನ್ನು ಮಾಡುತ್ತಿಲ್ಲ. ಆದ್ದರಿಂದ, ಕಾರ್ಮಿಕ ಸಂಹಿತೆಗಳ ವಿರುದ್ಧ ದೇಶವ್ಯಾಪಿ ಹೋರಾಟವನ್ನು ಬಲಗೊಳಿಸಲು ಈ ಮಸೂದೆಯನ್ನು ಮಂಡಿಸುತ್ತಿರುವದಾಗಿ ಕರೀಂ ಅವರು ಹೇಳಿದರು.

ಶಿಕ್ಷಣದಲ್ಲಿ ಮೀಸಲಾತಿ ನೀತಿ ಮತ್ತು ....

ಪುಟ 8 ರಿಂದ

ಅದು ತರ್ಕಸಮ್ಮತವಾದ ಸಮಾನತೆಯನ್ನು ಖಾತ್ರಿಪಡಿಸಬಹುದು ಆದರೆ, ಶೈಕ್ಷಣಿಕ ಸೌಲಭ್ಯಗಳ ಲಭ್ಯತೆ ಹಾಗೂ ಅವಕಾಶಗಳಲ್ಲಿ ವ್ಯಾಪಕ ಅಸಮಾನತೆಗಳು ಇರುವಾಗ ಅದು ಕೆಲವು ವರ್ಗಗಳ ಜನರಿಗೆ ಅವಕಾಶಗಳನ್ನು ಇಲ್ಲದಂತೆ ಮಾಡುವುದರಿಂದ ಅಂತಹ ವ್ಯವಸ್ಥೆಯಲ್ಲಿ ಅವರು ಪರಿಣಾಮಕಾರಿಯಾಗಿ ಸ್ಪರ್ಧೆಯಲ್ಲಿ ಭಾಗವಹಿಸಲು ಅಸಮರ್ಥರಾಗುತ್ತಾರೆ. ಆಗ ಅಂತಹ ವಂಚಿತ ವಿಭಾಗಗಳು ಮುಂದುವರಿದ ವರ್ಗಗಳೊಂದಿಗೆ ಸ್ಪರ್ಧೆ ಮಾಡುವಾಗ ಎದುರಿಸುವ ಅಡೆತಡೆಗಳನ್ನು ಪರಿಣಾಮಕಾರಿಯಾಗಿ ನಿವಾರಿಸಿಕೊಳ್ಳಲು (ಮೀಸಲಾತಿಯಂತಹ) ವಿಶೇಷ ವ್ಯವಸ್ಥೆಯು ವಾಸ್ತವಿಕ ಸಮಾನತೆಯನ್ನು ಖಾತ್ರಿಪಡಿಸುತ್ತದೆ. ಮುಂದುವರಿದ ವರ್ಗಗಳಿಗೆ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತಯಾರಾಗಲು ಗುಣಮಟ್ಟದ ಶಾಲಾಶಿಕ್ಷಣ, ಟ್ಯುಟೋರಿಯಲ್‌ಗಳು ಹಾಗೂ ಕೋಚಿಂಗ್ ಸೆಂಟರ್‌ಗಳಂತಹ ಸವಲತ್ತುಗಳಷ್ಟೇ ಅಲ್ಲ, ಅವರ ಕುಟುಂಬಗಳಿಂದ ಪರಂಪರಾಗತವಾಗಿ ಬಂದ ಸಾಮಾಜಿಕ ಸಂಪರ್ಕ ವ್ಯವಸ್ಥೆ ಹಾಗೂ ಸಾಂಸ್ಕೃತಿಕ ಬಂಡವಾಳ (ಸಂವಹನ ಕೌಶಲ್ಯ, ಉಚ್ಚಾರ, ಪುಸ್ತಕಗಳು ಅಥವಾ ಶೈಕ್ಷಣಿಕ ನೈಪುಣ್ಯತೆ) ಗಳೂ ಸಿಗುತ್ತವೆ. ಸಾಂಸ್ಕೃತಿಕ ಬಂಡವಾಳವು ಕೌಟುಂಬಿಕ ವಾತಾವರಣದ ಮೂಲಕ ಮಗುವು ಅಪ್ರಜ್ಞಾಪೂರ್ವಕವಾದ ತರಬೇತಿ ಪಡೆಯುವುದನ್ನು ಖಾತ್ರಿಪಡಿಸುತ್ತದೆ ಮತ್ತು ಕೌಟುಂಬಿಕ ಸ್ಥಾನಮಾನಕ್ಕೆ ತಕ್ಕಂತೆ ಉನ್ನತ ಶಿಕ್ಷಣ ಅಥವಾ ಉನ್ನತ ಹುದ್ದೆಗಳನ್ನು ಗಳಿಸಲು ಉತ್ತೇಜನ ನೀಡುತ್ತದೆ. ಮೊದಲ ಬಾರಿಗೆ ಶಿಕ್ಷಣ ಪಡೆದವರಿಗೆ ಮತ್ತು ಮುಕ್ತ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಉತ್ತಮವಾಗಿ ಎದುರಿಸಲು ಅಗತ್ಯವಾದ ನೈಪುಣ್ಯತೆಯನ್ನು ಅವರ ಪಾರಂಪರಿಕ ವೃತ್ತಿಗಳು ಕಲಿಸದಿದ್ದವರಿಗೆ ಅದು ಅನಾನುಕೂಲವಾಗಿ ಪರಿಣಮಿಸುತ್ತದೆ."

ಮೀಸಲಾತಿಗೆ ವಿರೋಧವಿರುವ ಮೇಲ್ಜಾತಿಯ ಜನರು ಅನೇಕ ವೇಳೆ ಎತ್ತುವ ಪ್ರಶ್ನೆಗೆ – ನಮ್ಮ ಹಿರಿಯರು ನಮ್ಮ ವಿರುದ್ಧ ತಾರತಮ್ಯ ಎಸಗಿದರು ಎಂಬುದನ್ನು ಒಪ್ಪೋಣ, ಆದರೆ ಈಗ ಇವತ್ತು ನಾವು ಅದಕ್ಕೆ ಬೆಲೆ ತೆರಬೇಕೆ? ಎಂಬ ಪ್ರಶ್ನೆಗೆ – ಈ ವಾದವು ಉತ್ತರ ನೀಡುತ್ತದೆ. ಈ ಕೋಟಾಗಳು ಅಥವಾ ತಪ್ಪನ್ನು ಸರಿಮಾಡುವ ಕ್ರಿಯೆಯು ಹಿಂದಿನವರು ಎಸಗಿದ ತಪ್ಪುಗಳಿಗೆ ಪ್ರತೀಕಾರ ಮಾಡುವ ಕ್ರಿಯೆಗಳಲ್ಲ. ಚಾರಿತ್ರಿಕ ಕಾರಣಗಳಿಂದಾಗಿ ತೀರಾ ಅಸಮಾನವಾಗಿದ್ದ ಸಾಮಾಜಿಕ ರಂಗವನ್ನು ಮಟ್ಟಸಗೊಳಿಸುವುದಾಗಿದೆ. ಕೋಟಾಗಳು, ನಿಸ್ಸಂದೇಹವಾಗಿ, ಅಸಮಾನತೆಯ ಸಮಸ್ಯೆಗೆ ಸೀಮಿತವಾದ ಪರಿಹಾರವಷ್ಟೆ, ಆದರೆ ಈ ಮಧ್ಯಂತರದಲ್ಲಿ ಅಸಮಾನತೆಯನ್ನು ಶಾಶ್ವತಗೊಳಿಸುವ ಮೂಲಭೂತ ಅಂಶಗಳನ್ನು ತೊಡೆದುಹಾಕಲು ಸಮಯವನ್ನು ಸದ್ವಿನಿಯೋಗ ಮಾಡಿಕೊಳ್ಳಲು ಸಹಾಯ ಮಾಡುತ್ತದೆ. ಅದನ್ನು ಮಾಡುವುದು ಬಿಟ್ಟು, ನವ–ಉದಾರವಾದಿ ಯುಗವು ಪ್ರಭುತ್ವವು ಮಧ್ಯಪ್ರವೇಶಿಸುವ ಸಾಮರ್ಥ್ಯವನ್ನು ಕುಂದಿಸುವ ನೀತಿಗಳನ್ನು ಆಕ್ರಮಣಕಾರಿಯಾಗಿ ಜಾರಿಮಾಡುವತ್ತ ಭಾರತದಲ್ಲಿನ ಸರ್ಕಾರಗಳನ್ನು ನೂಕಿದೆ.

ಆರ್ಥಿಕವಾಗಿ ದುರ್ಬಲರಾಗಿರುವ ವಿಭಾಗದ ಫಲಾನುಭವಿಗಳನ್ನು ನಿರ್ಧರಿಸಲು ವಾರ್ಷಿಕ ಆದಾಯವನ್ನು ಎಂಟು ಲಕ್ಷಗಳಿಗೆ ನಿಗದಿ ಮಾಡಿರುವ ಸರ್ಕಾರದ ಜುಲೈ 2021 ರ ಪ್ರಕಟಣೆಯು ಸ್ವೇಚ್ಛಾನುಸಾರವಾದುದು ಎಂದು ಸುಪ್ರೀಂ ಕೋರ್ಟಿನಲ್ಲಿ ಪ್ರಶ್ನೆಮಾಡಲಾಗಿದೆ. ಈ ಕುರಿತು ಕೋರ್ಟ್ ಇನ್ನೂ ತನ್ನ ತೀರ್ಪು ಪ್ರಕಟಿಸಬೇಕಾಗಿದೆ, ಆದರೆ ಒಬಿಸಿ ಕೋಟಾವನ್ನು ನಿರ್ಧರಿಸಲು ಬಳಸಿದ "ಕೆನೆ ಪದರ" ಎಂಬ ಸಾಮಾನ್ಯ ಸೂತ್ರದಡಿ ಹೊರತು ಪಡಿಸಲು ನಿಗದಿ ಮಾಡಿದ ಆದಾಯ ಮಿತಿಯನ್ನು ಈ ಆರ್ಥಿಕ ಮಾನದಂಡ ಬಳಸಿ ನೀಡುವ ಫಲಾನುಭವಿಗಳನ್ನು ಒಳಗೊಳ್ಳಲು ಸರ್ಕಾರ ನಿಗದಿ ಮಾಡಿರುವುದು ಸರಿಯೇ ಎನ್ನುವ ಪ್ರಶ್ನೆ ಇದಾಗಿದೆ. ವಾರ್ಷಿಕ ಕೇವಲ ಒಂದು ಲಕ್ಷ ರೂಪಾಯಿ ತಲಾದಾಯ ಹೊಂದಿರುವ ಈ ನಮ್ಮ ದೇಶದಲ್ಲಿ, ಸರಾಸರಿಗಿಂತ ಹೆಚ್ಚಾಗಿ ಗಳಿಸುವ ಕುಟುಂಬವನ್ನು "ಆರ್ಥಿಕವಾಗಿ ದುರ್ಬಲ" ಎಂದು ಪರಿಗಣಿಸಬಹುದೆ? ಈ ಮಿತಿಯನ್ನು ನಿಗದಿಪಡಿಸಿರುವುರ ಹಿಂದೆ ಒಂದು ಹಂಚಿಕೆ ಇರುವುದು ಸುಸ್ಪಷ್ಟ. ಇಡಬ್ಲ್ಯುಎಸ್ ಗುಂಪಿಗೆ ಶೇಕಡಾ 10 ರಷ್ಟು ಮೀಸಲಾತಿ ನಿಗದಿ ಮಾಡುವ ಹಿಂದೆ ಮೇಲ್ಜಾತಿಯರವನ್ನು ಓಲೈಸುವ ಮೋದಿ ಸರ್ಕಾರದ ತಂತ್ರವಿದೆ. ಒಬಿಸಿಗೆ ಅನ್ವಯವಾಗುವ ಅದೇ ಮಿತಿಯನ್ನು (ಅಲ್ಲಲ್ಲಿ ಸ್ವಲ್ಪ ಆದಾಯಗಳನ್ನು ಸೇರಿಸುವ ಅಥವಾ ಕಡಿಮೆ ಮಾಡುವಲ್ಲಿ ಕೆಲವು ವ್ಯತ್ಯಾಸಗಳಿವೆ) ಉಳಿಸಿಕೊಂಡಿರುವುದು ಅವರನ್ನು ಇವರ ಸಮಕ್ಕೆ ತರುವ ಮೋದಿಯವರ ಹಂಚಿಕೆ ಎಂಬುದು ಸ್ಪಷ್ಟ ಸಂಕೇತವಾಗಿದೆ. ಹಾಗಾಗಿ, ಅಖಿಲ ಭಾರತ ಕೋಟಾದಲ್ಲಿ ಒಬಿಸಿ ಮೀಸಲಾತಿ ತಂದಿರುವುದು "ಹಿಂದುಳಿದವರ ಪರ"ವಾಗಿರುವ ನೀತಿ (ಕೋರ್ಟುಗಳು ಮೋದಿ ಸರ್ಕಾರದ ಕೈ ಕಟ್ಟಿಹಾಕಿದ್ದರೂ ಸಹ) ಎಂದು ಪ್ರಚಾರ ಮಾಡುವಾಗಲೇ, ಸರ್ಕಾರವು ಮೇಲ್ಜಾತಿ ಜನರ ಹಿತಾಸಕ್ತಿಯನ್ನು ಕಾಪಾಡಲಾಗುತ್ತಿದೆ ಎಂದೂ ಸಮರ್ಥಿಸುತ್ತಿದೆ. ಸರ್ಕಾರದ ಈ ವಂಚಕತನ ಅದು ನಡೆದು ಬಂದ ದಾರಿಗೆ ತಕ್ಕುದಾಗಿಯೇ ಇದೆ.

28-29 ಮಾರ್ಚ್ 2022 ಅಖಿಲ ಭಾರತ ಸಾರ್ವತ್ರಿಕ ಮುಷ್ಕರದತ್ತ

ಬೆಲೆ ಏರಿಕೆಯನ್ನು ನಿಯಂತ್ರಿಸಿ! ಜನರಿಗೆ ಪರಿಹಾರ ಒದಗಿಸಿ!

ಕೊವಿಡ್ ಸಾಂಕ್ರಾಮಿಕ ಮತ್ತು ಮೋದಿ ನೇತೃತ್ವದ ಬಿಜೆಪಿ ಸರ್ಕಾರವು ಪೂರ್ವ ಸಿದ್ಧತೆಗಳಿಲ್ಲದೆ ಹೇರಿದ ಹಠಾತ್ ಲಾಕ್‌ಡೌನ್ ಜನರಿಗೆ ಬಹುವಿಧದ ಸಂಕಷ್ಟಗಳನ್ನು ಉಂಟುಮಾಡಿದೆ. ಲಕ್ಷಾಂತರ ಕಾರ್ಮಿಕರು ಕೆಲಸ ಕಳೆದುಕೊಂಡಿದ್ದಾರೆ. ದುಡಿಯುವ ಜನರ ಆದಾಯ ಗಣನೀಯವಾಗಿ ಕುಸಿದಿದೆ. ನಮ್ಮ ದೇಶದ ಸಂಪತ್ತನ್ನು ಉತ್ಪಾದಿಸುವ ಕೋಟಿಗಟ್ಟಲೆ ಕಾರ್ಮಿಕರು ಹಸಿವಿನ ಜಾಲಕ್ಕೆ ತಳ್ಳಲ್ಪಟ್ಟಿದ್ದಾರೆ. ಇದರ ಮೇಲೆ ಅಗತ್ಯ ವಸ್ತುಗಳ ಬೆಲೆಗಳು ಗಗನ ಮುಟ್ಟುವ ಧಾವಂತದಲ್ಲಿವೆ. ಇದು ಸರ್ಕಾರ ಅನುಸರಿಸುತ್ತಿರುವ ನೀತಿಗಳ ಪರಿಣಾಮವಾಗಿದೆ.

ಸಗಟು ಮಾರಾಟ ಬೆಲೆ ಸೂಚ್ಯಂಕವು ದೇಶದಾದ್ಯಂತ ಮೂವತ್ತು ವರ್ಷಗಳ ದಾಖಲೆಯನ್ನು ಮುರಿಯುತ್ತ, ನವೆಂಬರ್ 2021 ರಲ್ಲಿ ಹೊಸ ದಾಖಲೆಯ ಶೇಕಡಾ 14.23 ನ್ನು ತಲುಪಿದೆ. ಆಹಾರ, ಇಂಧನ ಮತ್ತು ಸರಕುಗಳ ಏರುತ್ತಿರುವ ಬೆಲೆಗಳು ಮತ್ತು ಪೂರೈಕೆಯ ಬದಿಯ ಅಡಚಣೆಗಳು ಚಿಲ್ಲರೆ ಮತ್ತು ಸಗಟು ಎರಡೂ ಮಟ್ಟಗಳಲ್ಲಿ ಹಣದುಬ್ಬರ ದರಗಳಲ್ಲಿ ಪ್ರತಿಫಲಿಸುತ್ತಿವೆ. ಅಗತ್ಯ ಆಹಾರ ಪದಾರ್ಥಗಳಾದ ಅಕ್ಕಿ, ಖಾದ್ಯ-ತೈಲಗಳು, ಬೇಳೆಕಾಳುಗಳು, ತರಕಾರಿಗಳು, ಮೊಟ್ಟೆಗಳು ಇತ್ಯಾದಿಗಳ ಬೆಲೆಗಳು ಗಗನಕ್ಕೇರಿವೆ. ಖಾದ್ಯ ತೈಲವು 60 ಪ್ರತಿಶತದಷ್ಟು ತೀವ್ರ ಹೆಚ್ಚಳವನ್ನು ಕಂಡಿದೆ. ರೈತರು ತಮ್ಮ ಪಂಪ್‌ಸೆಟ್‌ಗಳು ಮತ್ತು ಟ್ರ್ಯಾಕ್ಟರ್‌ಗಳಿಗೆ ಬಳಸುವ ಡೀಸೆಲ್‌ನ ಬೆಲೆ ಏರಿಕೆಯಿಂದ ತೀವ್ರವಾಗಿ ತೊಂದರೆಗೀಡಾಗಿದ್ದಾರೆ.

ಸಹಾಯಧನವನ್ನು (ಸಬ್ಸಿಡಿಯನ್ನು) ತೀವ್ರವಾಗಿ ಕಡಿತಗೊಳಿಸಿರುವುದರಿಂದ ಅಡುಗೆ ಅನಿಲದ ಬೆಲೆ ಏರಿಕೆಯಾಗಿದೆ. 2019-20 ರಲ್ಲಿ ಅಡುಗೆ ಅನಿಲದ ಒಟ್ಟು ನೇರ ನಗದು ಸಬ್ಸಿಡಿ ರೂ 22,635 ಕೋಟಿ ಆಗಿತ್ತು. ಇದು ಈಗ ರೂ 3,559 ಕೋಟಿಗೆ ಇಳಿದಿದೆ (ಫೆಬ್ರವರಿ 2021 ರಲ್ಲಿ). ಈ ರೀತಿ ಸಂಪೂರ್ಣ ಹೊರೆಯನ್ನು ಗ್ರಾಹಕರ ಮೇಲೆ ಹೇರಲಾಗಿದೆ.

ಪೆಟ್ರೋಲಿಯಂ ಉತ್ಪನ್ನಗಳ ಮೇಲಿನ ಕೇಂದ್ರ ಅಬಕಾರಿ ಸುಂಕಗಳು ಮತ್ತು ಇತರ ತೆರಿಗೆಗಳ ಭಾರಿ ಹೊರೆ ಈ ಬೆಲೆ ಏರಿಕೆಗೆ ಕಾರಣವಾಗಿದೆ.

ಅಬಕಾರಿ ಸುಂಕವನ್ನು ಹೆಚ್ಚಿಸುವ ಮೂಲಕ ಮೋದಿ ಸರ್ಕಾರವು ಸಾಮಾನ್ಯ ಜನರನ್ನು ಸುಲಿಗೆ ಮಾಡುವ ಕ್ರೂರ ಕಥೆಯು ರಾಜ್ಯಸಭೆಯಲ್ಲಿ ಪ್ರಶ್ನೆಯೊಂದಕ್ಕೆ ಕೆಂದ್ರ ಹಣಕಾಸು ಮಂತ್ರಿಗಳೇ ನೀಡಿದ ಲಿಖಿತ ಉತ್ತರದಲ್ಲಿ ಬಯಲುಗೊಂಡಿದೆ..

ಕಳೆದ ಮೂರು ವರ್ಷಗಳಲ್ಲಿ, ಅಂದರೆ **2018 ರಿಂದ, ಮೋದಿ ನೇತೃತ್ವದ ಬಿಜೆಪಿ ಸರ್ಕಾರವು ಇಂಧನ ತೆರಿಗೆಯ ಮೂಲಕ 8 ಲಕ್ಷ ಕೋಟಿ ರೂಪಾಯಿಗಳನ್ನು ಭಾರೀ ಮೊತ್ತವನ್ನು ಗಳಿಸಿದೆ ಎಂದು ಅದು ಹೇಳುತ್ತದೆ. ಇದರಲ್ಲಿ, ಜನರು ಉದ್ಯೋಗ ಮತ್ತು ಆದಾಯದ ದೊಡ್ಡ ನಷ್ಟವನ್ನು ಎದುರಿಸಿದ 2020-21ರಲ್ಲೇ 3.71 ಲಕ್ಷ ಕೋಟಿ ರೂಪಾಯಿಗಳನ್ನು ಗಳಿಸಲಾಗಿದೆ,**

ಕೇಂದ್ರ ಹಣಕಾಸು ಸಚಿವಾಲಯದ ಕಂಟ್ರೋಲರ್ ಜನರಲ್ ಆಫ್ ಅಕೌಂಟ್ಸ್ (ಅಉಂ) ಯಿಂದ ಲಭ್ಯವಿರುವ ಮಾಹಿತಿಯು 2021 ರ ಏಪ್ರಿಲ್-ಸೆಪ್ಟೆಂಬರ್ ಅವಧಿಯುಲ್ಲಿ ಅಬಕಾರಿ ಸುಂಕ ಸಂಗ್ರಹಣೆಗಳು ಹಿಂದಿನ ಹಣಕಾಸು ವರ್ಷದ ಇದೇ ಅವಧಿಯಲ್ಲಿ ಸಂಗ್ರಹಿಸಲಾದ 1.28 ಲಕ್ಷ ಕೋಟಿ ರೂ.ಯಿಂದ, 1.71 ಲಕ್ಷ ಕೋಟಿ ರೂ.ಗೆ ಏರಿಕೆಯಾಗಿದೆ ಎಂದು ತೋರಿಸಿದೆ, ಈ ತೆರಿಗೆಗಳು ಪೆಟ್ರೋಲ್ ಮತ್ತು ಡೀಸೆಲ್ ಬೆಲೆಯ ಶೇಕಡಾ 55 ರಿಂದ 58 ರಷ್ಟಿವೆ. ಇದರ ಪರಿಣಾಮವಾಗಿ, 2014-15 ರಿಂದ ಪೆಟ್ರೋಲಿಯಂ ಉತ್ಪನ್ನಗಳಿಂದ ಆದಾಯದಲ್ಲಿ 138% ನಷ್ಟು ಹೆಚ್ಚಳವಾಗಿದೆ.

ಪೆಟ್ರೋಲ್ ಮತ್ತು ಡೀಸೆಲ್‌ನ ಸುರುಳಿ-ಸುರುಳಿಯಾಗಿ ಏರುತ್ತಿರುವ ಬೆಲೆಗಳು ಸಾರಿಗೆ ವೆಚ್ಚವನ್ನು ಹೆಚ್ಚಿಸುವ ಮೂಲಕ ಮತ್ತು ವಿವಿಧ ಲಾಗವಾಡುಗಳ ಬೆಲೆಗಳ ಏರಿಕೆಯ ಮೂಲಕ ಅಗತ್ಯ ವಸ್ತುಗಳ ಬೆಲೆಗಳು ಆಕಾಶಕ್ಕೆ ನೆಗೆಯುವಂತೆ ಮಾಡುತ್ತಿವೆ. ಕೇಂದ್ರೀಯ ಅಬಕಾರಿ ಸುಂಕ ಒಂದೇ ಪ್ರತಿ ಲೀಟರ್ ಪೆಟ್ರೋಲ್‌ಗೆ 33 ರೂ ಮತ್ತು ಡೀಸೆಲ್‌ಗೆ 32 ರೂ.ರಷ್ಟಿದೆ ಹಲವಾರು ರಾಜ್ಯಗಳ ಚುನಾವಣೆಗಳಲ್ಲಿ ಬಿಜೆಪಿ ಅನುಭವಿಸಿದ ಹಿನ್ನಡೆ ಮತ್ತು ನರಂತರ ಬೆಲೆ ಏರಿಕೆಯಿಂದ ಜನರಲ್ಲಿ ಹೆಚ್ಚುತ್ತಿರುವ ಕೋಪದ ಕಾರಣ ಮೋದಿ ಸರ್ಕಾರವು ಕೇಂದ್ರೀಯ ಅಬಕಾರಿ ಸುಂಕದಲ್ಲಿ ಒಂದು ಲೀಟರ್ಗೆ ಪೆಟ್ರೋಲಿಗೆ 5 ರೂ. ಮತ್ತು ಡೀಸೆಲ್ಗೆ 10 ರೂ.ಗಳ ನಾಮಮಾತ್ರ ಕಡಿತವನ್ನು ಘೋಷಿಸಿತು. ಆದರೆ ಇದು ಕೇವಲ ಸಾಂಕೇತಿಕ ಕಡಿತವಾಗಿದ್ದು, ಜನರಿಗೆ ಹೆಚ್ಚಿನ ಪರಿಹಾರವನ್ನು ನೀಡುವುದಿಲ್ಲ.

ಸರ್ಕಾರದ ಕಲ್ಯಾಣ ಯೋಜನೆಗಳು ಮತ್ತು ಲಸಿಕೆ ಕಾರ್ಯಕ್ರಮಗಳಿಗೆ ಹಣದ ಅಗತ್ಯವಿರುವುದರಿಂದ ಪೆಟ್ರೋಲ್ ಮತ್ತು ಡೀಸೆಲ್ ಮೇಲಿನ ತೆರಿಗೆಯನ್ನು ಕಡಿಮೆ ಮಾಡಲು ಸಾಧ್ಯವಿಲ್ಲ ಎಂದು ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವರು ಮಂಡಿಸಿದ ವಾದವು ಹುಸಿಯಾಗಿದೆ ಮತ್ತು ನಿರ್ಲಜ್ಜತನದ್ದೂ ಆಗಿದೆ.

ಕಾರ್ಪೊರೇಟ್ ತೆರಿಗೆಗಳನ್ನು ಕಡಿತಗೊಳಿಸಿದ್ದು ಮತ್ತು ಜೊತೆಗೆ, ಹಲವಾರು ಇತರ ತೆರಿಗೆ ವಿನಾಯಿತಿಗಳು ಮತ್ತು ರಿಯಾಯಿತಿಗಳ. ಕಾರಣ ಮೋದಿ ಸರ್ಕಾರವು ಸ್ವತಃ 1.45 ಲಕ್ಷ ಕೋಟಿ ಆದಾಯದ ನಷ್ಟವನ್ನು ಭರಿಸಿದೆ.. ಕಾರ್ಪೊರೇಟ್ ತೆರಿಗೆ ದರವನ್ನು 2019 ರ ಹಿಂದಿನ ಮಟ್ಟಕ್ಕೆ ಮರುಸ್ಥಾಪಿಸುವ ಮೂಲಕ, ಕೇಂದ್ರೀಯ ಅಬಕಾರಿ ಸುಂಕಗಳನ್ನು ಕಡಿತಗೊಳಿಸಿದ ಕಾರಣ ಆಗುವ ಆದಾಯದ ನಷ್ಟವನ್ನು ಮರುಪಡೆಯಬಹುದು. ಅತಿ ಶ್ರೀಮಂತರ ಮೇಲೆ ಸಣ್ಣ ಪ್ರಮಾಣದ ಸಂಪತ್ತಿನ ತೆರಿಗೆಯನ್ನು ವಿಧಿಸುವ ಮೂಲಕ ಸಾಕಷ್ಟು ಆದಾಯವನ್ನು ಗಳಿಸಬಹುದು. ಆದರೆ ಮೋದಿ ಸರ್ಕಾರವು ಅಂತಹ ಯಾವುದೇ ಕೆಲಸವನ್ನು ಮಾಡಲು ಸಿದ್ಧವಿಲ್ಲ. ಏಕೆಂದರೆ ಅದು ಬೆರಳೆಣಿಕೆಯ ದೇಶೀಯ ಮತ್ತು ವಿದೇಶಿ ದೊಡ್ಡ ಕಾರ್ಪೊರೇಟ್ಗಳನ್ನು ಅಸಮಾಧಾನಗೊಳಿಸಲಾರದು. ಬದಲಾಗಿ ನಾಚಿಕೆಯಿಲ್ಲದೆ ಕೋಟಿಗಟ್ಟಲೆ ಜನಸಾಮಾನ್ಯರನ್ನು ಹೀನಾಯವಾಗಿ ನರಳುವಂತೆ ಮಾಡುತ್ತಿದೆ.

ಮೋದಿ ಸರಕಾರವೂ ಬೆಲೆ ಏರಿಕೆ ಮೇಲೆ ನಿಯಂತ್ರಣವನ್ನು ಜಾರಿಗೊಳಿಸಲು ನಿರಾಕರಿಸುತ್ತಿದೆ.. ಬದಲಿಗೆ, ಖಾದ್ಯ ತೈಲಗಳು ಸೇರಿದಂತೆ ಅಗತ್ಯ ವಸ್ತುಗಳ ಶ್ರೇಣಿಯ ಮೇಲಿನ ನಿಯಂತ್ರಣಗಳನ್ನು ತೆಗೆದುಹಾಕಲು ಮತ್ತು ದೊಡ್ಡ ವ್ಯಾಪಾರಿಗಳಿಗೆ ಖಾದ್ಯ ತೈಲಗಳ ಸಂಗ್ರಹಣೆ ಮತ್ತು ಸಟ್ಟಾ ವ್ಯಾಪಾರಕ್ಕೆ ಅವಕಾಶ ನೀಡಲು ಅಗತ್ಯ ಸರಕುಗಳ ಕಾಯಿದೆಯನ್ನು ದುರ್ಬಲಗೊಳಿಸಲು ಕ್ರಮಗಳನ್ನು ತೆಗೆದುಕೊಂಡಿತು. ಇದು ಸಾಮಾನ್ಯ ಜನರನ್ನು ಹೆಚ್ಚಿನ ಬೆಲೆಗಳಿಂದ ಸುಲಿಗೆ ಮಾಡುತ್ತ ಸೂಪರ್ ಲಾಭಗಳನ್ನು ಮಾಡಿಕೊಳ್ಳಲು ಕಾರ್ಪೊರೇಟಗಳಿಗೆ ಅನುವು ಮಾಡಿಕೊಡುತ್ತದೆ. ಈ ಕಾಯಿದೆಯು ನಮ್ಮ ದೇಶದ ರೈತರು ತಮ್ಮ ಒಂದು ವರ್ಷಕ್ಕೂ ಹೆಚ್ಚು ಸುದೀರ್ಘ ಐತಿಹಾಸಿಕ ಐಕ್ಯ ಹೋರಾಟದಲ್ಲಿ ರದ್ದುಗೊಳಿಸುವಂತೆ ಸರ್ಕಾರವನ್ನು ಒತ್ತಾಯಿಸಲಾಗಿದ್ದ ಮೂರು ಕಾನೂನುಗಳಲ್ಲಿ ಒಂದಾಗಿತ್ತು.

ಒಂದೆಡೆ ಸರ್ಕಾರವೇ ಬೆಲೆ ಏರಿಕೆಗೆ ಅನುಕೂಲವಾಗುವ ನೀತಿಗಳನ್ನು ಅಳವಡಿಸಿಕೊಳ್ಳುತ್ತಿದೆ. ಮತ್ತೊಂದೆಡೆ, ಸಾಂಕ್ರಾಮಿಕ ಸಮಯದಲ್ಲಿ ಉದ್ಯೋಗ ಮತ್ತು ಆದಾಯವನ್ನು ಕಳೆದುಕೊಂಡಿರುವ ಕಾರ್ಮಿಕರು ಮತ್ತು ಇತರ ದುಡಿಯುವ ವರ್ಗದ ಜನರಿಗೆ ಯಾವುದೇ ಪರಿಹಾರವನ್ನು ನೀಡಲು ನಿರಾಕರಿಸುತ್ತಿದೆ.

ಲಾಕ್ಡೌನಿನಿಂದಾಗಿ ಕೋಟ್ಯಂತರ ಕಾರ್ಮಿಕರು ತಮ್ಮ ಉದ್ಯೋಗವನ್ನು ಕಳೆದುಕೊಂಡಿದ್ದಾರೆ ಮತ್ತು ಉದ್ಯೋಗವನ್ನು ಮರು ಪಡೆಯಲು ಸಾಧ್ಯವಾದವರು ಕಡಿಮೆ ವೇತನಕ್ಕೆ ಕೆಲಸ ಮಾಡಬೇಕಾದ ಪರಿಸ್ಥಿತಿಗೆ ತಳ್ಳಲ್ಪಟ್ಟಿದ್ದಾರೆ. ಸಾಂಕ್ರಾಮಿಕ ಅವಧಿಯಲ್ಲಿ ದೊಡ್ಡ ವಿಭಾಗದ ಕಾರ್ಮಿಕರ ನೈಜ ಆದಾಯವು ತೀವ್ರವಾಗಿ ಕಡಿಮೆಯಾಗಿದೆ. ಇದರ ಪರಿಣಾಮವಾಗಿ, ನಮ್ಮ ದೇಶದ ಸಂಪತ್ತನ್ನು ಸೃಷ್ಟಿಸುವ ಕೋಟಿಗಟ್ಟಲೆ ಕಾರ್ಮಿಕರು ಮತ್ತು ಶ್ರಮಜೀವಿಗಳು ಇಂದು ಹಸಿವು ಮತ್ತು ನಿರ್ಗತಿಕ ಸ್ಥಿತಿಗೆ ತಳ್ಳಲ್ಪಟ್ಟಿದ್ದಾರೆ.

ಭಾರತವು 2020 ರಲ್ಲಿ ಜಾಗತಿಕ ಹಸಿವಿನ ಸೂಚ್ಯಂಕದಲ್ಲಿದ್ದ 94 ನೇ ಸ್ಥಾನದಿಂದ 2021 ರಲ್ಲಿ 101 ನೇ ಸ್ಥಾನಕ್ಕೆ ಕುಸಿದಿದೆ. ಅದೀಗ ನೆರೆಯ ರಾಷ್ಟ್ರಗಳಾದ ಪಾಕಿಸ್ತಾನ, ನೇಪಾಳ ಮತ್ತು ಬಾಂಗ್ಲಾದೇಶಕ್ಕಿಂತ ಕೆಳಗಿದೆ.

ಹಸಿವು ಹೆಚ್ಚಿದ್ದು ದೇಶದಲ್ಲಿ ಸಾಕಷ್ಟು ಆಹಾರ ಲಭ್ಯವಿರದ ಕಾರಣದಿಂದಲ್ಲ. ಬದಲಾಗಿ, ಜಾಗತಿಕ ಹಸಿವಿನ ಸೂಚ್ಯಂಕದಲ್ಲಿ ಭಾರತವು ಕುಸಿದುಬೀಳುತ್ತಿರುವಾಗ, ದೇಶವು ಅಗತ್ಯಕ್ಕಿಂತ ಹೆಚ್ಚು ಆಹಾರಧಾನ್ಯ ದಾಸ್ತಾನುಗಳನ್ನು ಹೊಂದಿತ್ತು.

1 ಸೆಪ್ಟೆಂಬರ್ 2021 ರಂದು, 26.2 ಮಿಲಿಯನ್ ಟನ್ಗಳ ಅಗತ್ಯದ ಮಾನದಂಡದ ಎದುರು ಎಫ್.ಸಿ.ಐ. 50.2 ಮಿಲಿಯನ್ ಟನ್ ಆಹಾರಧಾನ್ಯ ದಾಸ್ತಾನುಗಳನ್ನು ಹೊಂದಿತ್ತು. ಸಾಂಕ್ರಾಮಿಕ ಸಮಯದಲ್ಲಿ ಪ್ರತಿ ವ್ಯಕ್ತಿಗೆ ತಿಂಗಳಿಗೆ 10 ಕೆಜಿಯಷ್ಟು ಉಚಿತ ವಿತರಣೆಗಾಗಿ ಈ ದಾಸ್ತಾನುಗಳನ್ನು ಬಿಡುಗಡೆ ಮಾಡುವುದರಿಂದ ನಿರ್ಗತಿಕರಿಗೆ ಆಹಾರದ ಅಗತ್ಯವನ್ನು ಪೂರೈಸಬಹುದು ಮತ್ತು ಬೆಲೆಗಳು ಕಡಿಮೆಮಾಡಬಹುದು. ಆದರೆ, ಟ್ರೇಡ್ ಯೂನಿಯನ್ ಚಳವಳಿಯ ನರಂತರ ಬೇಡಿಕೆ ಮತ್ತು ಖ್ಯಾತ ಅರ್ಥಶಾಸ್ತ್ರಜ್ಞರ ಶಿಫಾರಸುಗಳ ಹೊರತಾಗಿಯೂ, ಬಿಜೆಪಿ ಸರ್ಕಾರ ಇದನ್ನು ಮಾಡಲು ನಿರಾಕರಿಸಿತು. ಬದಲಾಗಿ, ಎಥೆನಾಲ್ ಉತ್ಪಾದನೆಗೆ ಧಾನ್ಯಗಳು ಮತ್ತು ಕಬ್ಬನ್ನು ವಿನಿಯೋಗಿಸಲು ಯೋಜಿಸಿದೆ!

ಒಂದು ಕಡೆ, ಆಹಾರ ಧಾನ್ಯಗಳು ಮತ್ತು ಇತರ ಕೃಷಿ ಉತ್ಪನ್ನಗಳ ಉತ್ಪಾದಕರಾದ ರೈತರು ತಮ್ಮ ಉತ್ಪನ್ನಗಳಿಗೆ ಲಾಭದಾಯಕ ಬೆಲೆಗಳನ್ನು ಪಡೆಯದಿರುವುದು, ಮತ್ತೊಂದೆಡೆ, ಸಾಮಾನ್ಯ ಜನರು - ಕಾರ್ಮಿಕರು ಮತ್ತು ರೈತರ ದೊಡ್ಡ ಭಾಗವು ಮಾರುಕಟ್ಟೆಯಿಂದ ಹೆಚ್ಚಿನ ಬೆಲೆಗೆ ಅದೇ ಉತ್ಪನ್ನಗಳನ್ನು ಖರೀದಿಸಬೇಕಾಗುತ್ತಿರುವುದು ಒಂದು ವಿರೋಧಾಭಾಸವಾಗಿದೆ..

ಇಷ್ಟು ದುಬಾರಿ ಬೆಲೆಯ ಮೂಲಕ ಸಂಗ್ರಹಿಸಿದ ಹಣ ಎಲ್ಲಿಗೆ ಹೋಗುತ್ತದೆ? ನಿಜವಾದ ಉತ್ಪಾದಕರಿಗೆ, ರೈತರಿಗೆ ಅಲ್ಲ, ಬದಲಾಗಿ ಕಾರ್ಪೊರೇಟ್-ದೊಡ್ಡ ಭೂಮಾಲೀಕ ವರ್ಗದ ಪ್ರಾಬಲ್ಯ ಹೊಂದಿರುವ ದೊಡ್ಡ ವ್ಯಾಪಾರಿಗಳಿಗೆ-ಹಣ-ಸಾಲದಾತರಿಗೆ. ಈ ವರ್ಗದವರು ಸಣ್ಣ ರೈತರಿಂದ ಅಗ್ಗದ ದರದಲ್ಲಿ ಉತ್ಪನ್ನಗಳನ್ನು ಖರೀದಿಸಿ ಹೆಚ್ಚಿನ ದರಕ್ಕೆ ಮಾರಾಟ ಮಾಡುತ್ತಾರೆ. ಅವರು ಮಾರುಕಟ್ಟೆ ಮತ್ತು ಉತ್ಪನ್ನಗಳನ್ನು ನಿಯಂತ್ರಿಸುತ್ತಾರೆ ಮತ್ತು ಜೂಜುಕೋರ-ಭವಿಷ್ಯದ ವ್ಯಾಪಾರದಲ್ಲಿ ತೊಡಗುತ್ತಾರೆ, ಇದು ಬೆಲೆಗಳ ಏರಿಕೆಗೆ ಮತ್ತೊಂದು ಪ್ರಮುಖ ಅಂಶವಾಗಿದೆ. ಸರ್ಕಾರವು ಜೂಜುಕೋರ-ಭವಿಷ್ಯದ ವ್ಯಾಪಾರವನ್ನು ನಿಯಂತ್ರಿಸಲು ನಿರಾಕರಿಸುತ್ತದೆ ಏಕೆಂದರೆ ಅದು ದೊಡ್ಡ ವ್ಯಾಪಾರಿಗಳನ್ನು ವಿರೋಧಿಸಲು ಬಯಸುವುದಿಲ್ಲ ಮತ್ತು ಸಾಮಾನ್ಯ ಜನರಿಗೆ ಬೆಲೆ ಏರಿಕೆಯಿಂದ ಉಂಟಾಗುವ ಸಂಕಷ್ಟದ ಬಗ್ಗೆ ಕಾಳಜಿ ವಹಿಸುತ್ತಿಲ್ಲ.

ಬೆಲೆ ಏರಿಕೆಯ ಮೂಲಕ ಜನರ ಮೇಲೆ ಹೇರಲಾದ ಹೊರೆಯನ್ನು ಇನ್ನುಸಹಿಸಲು ಸಾಧ್ಯವಿಲ್ಲ. ದೈನಂದಿನ ಅಗತ್ಯ ವಸ್ತುಗಳ ಬೆಲೆಗಳು ಸ್ವಯಂಚಾಲಿತವಾಗಿ ಏರುವುದಿಲ್ಲ; ಸಾಮಾನ್ಯ ಜನರ ವೆಚ್ಚದಲ್ಲಿ ದೊಡ್ಡ-ಉದ್ಯಮ-ದೊಡ್ಡ ಭೂಮಾಲೀಕ ವರ್ಗದ ಲಾಭದ ಹಸಿವನ್ನು ನೀಗಿಸಲು ಸರ್ಕಾರದಿಂದ ಅವುಗಳನ್ನು ಮೇಲಕ್ಕೇರಿಸಲಾಗುತ್ತದೆ. ಇದೇ ನವ ಉದಾರವಾದಿ ಬಂಡವಾಳಶಾಹಿ ವ್ಯವಸ್ಥೆ ಮತ್ತು ಆಡಳಿತದಲ್ಲಿ 'ಕಾರ್ಪೊರೇಟ್- ಸೇವಕರ ನಿಜವಾದ ಮುಖವಾಗಿದೆ.

ಸಿಐಟಿಯು ಮತ್ತು ಇತರ ಕೇಂದ್ರ ಕಾರ್ಮಿಕ ಸಂಘಟನೆಗಳು ಬೆಲೆ ಇಳಿಸಲು ಮತ್ತು ಜನರಿಗೆ ಪರಿಹಾರಕ್ಕಾಗಿ ಆಗ್ರಹಿಸಿ ನರಂತರ ಹೋರಾಟ ನಡೆಸುತ್ತಿವೆ. ಹೀಗಾಗಿ ಕೆಳಗೆ ನಮೂದಿಸಿದ ಬೇಡಿಕೆಗಳನ್ನು ಇಟ್ಟಿವೆ:

- **ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ಸಾರ್ವತ್ರಿಕಗೊಳಿಸಿ. ಮತ್ತು ಅದರ ಅಡಿಯಲ್ಲಿ ದೈನಂದಿನ ಬಳಕೆಯ 14 ಅಗತ್ಯ ಸರಕುಗಳನ್ನು ವಿತರಿಸಬೇಕು.**
- **ಆಹಾರ ಧಾನ್ಯಗಳ ವಾಯಿದಾ ವ್ಯಾಪಾರದ ಮೇಲೆ ನಿಷೇಧ ಹೇರಬೇಕು.**
- **ಪೆಟ್ರೋಲ್ ಮತ್ತು ಡೀಸೆಲ್ ಮೇಲಿನ ತೆರಿಗೆಗಳಲ್ಲಿ ಕಡಿತ ಮಾಡಿ ಪೆಟ್ರೋಲ್, ಡೀಸೆಲ್ ಮತ್ತು ಅಡುಗೆ ಅನಲದ ಬೆಲೆಗಳಲ್ಲಿ ತಕ್ಷಣದ ಮತ್ತು ಗಣನೀಯ ಕಡಿತಮಾಡಬೇಕು. ಆಮದು ಸಮಾನತೆಯ ಮೇಲೆ ಬೆಲೆಯನ್ನು ನಿಗದಿಪಡಿಸುವುದನ್ನು ಕೈಬಿಟ್ಟು ,ವಾಸ್ತವಿಕ ವೆಚ್ಚವನ್ನು ಲೆಕ್ಕಕ್ಕೆ ತೆಗೆದುಕೊಂಡು, ಸಮಂಜಸವಾದ ಆದಾಯ ಭಾಗವನ್ನು ಸೇರಿಸಿ ಪೆಟ್ರೋಲಿಯಂ ಉತ್ಪನ್ನದ ಬೆಲೆ ನಿಗದಿಮಾಡಬೇಕು.**
- **ಶಿಕ್ಷಣ ಮತ್ತು ಆರೋಗ್ಯದ ಮೇಲಿನ ಸರ್ಕಾರದ ವೆಚ್ಚವನ್ನು ಹೆಚ್ಚಿಸಿ; ಸರ್ಕಾರಿ ಸಂಸ್ಥೆಗಳ ಮೂಲಕ ಎಲ್ಲಾ ನಿರ್ಗತಿಕರಿಗೆ ಉಚಿತ ಶಿಕ್ಷಣ ಮತ್ತು ಆರೋಗ್ಯ ಸೇವೆಗಳನ್ನು ಒದಗಿಸಬೇಕು.**
- **ಆದಾಯ ತೆರಿಗೆ ವ್ಯಾಪ್ತಿಯ ಹೊರಗಿರುವ ಕುಟುಂಬಗಳಿಗೆ ಆಹಾರ ಮತ್ತು ತಿಂಗಳಿಗೆ ರೂ 7500 ಆದಾಯ ಬೆಂಬಲ ನೀಡಬೇಕು.**

ಆದರೆ, ಕಾರ್ಪೊರೇಟರ್‌ಗಳ ಲೂಟಿ ಮತ್ತು ಲೂಟಿಗೆ ಅವಕಾಶ ನೀಡುವ ನವ ಉದಾರೀಕರಣದ ಕಾರ್ಯಸೂಚಿಗೆ ಬದ್ಧವಾಗಿರುವ ಮೋದಿ ಸರ್ಕಾರ ಇದನ್ನು ಮಾಡಲು ಸಿದ್ಧವಾಗಿಲ್ಲ. ಎಲ್ಲಾ ದುಡಿಯುವ ಜನರ ಬೃಹತ್ ಜಂಟಿ ಕ್ರಮಗಳು ಮಾತ್ರ ಜನರ ಬೇಡಿಕೆಗಳಿಗೆ ಮನ್ನಣೆ ನೀಡುವಂತೆ ಸರ್ಕಾರವನ್ನು ಒತ್ತಾಯಿಸಬಹುದು. ಮೂರು ರೈತ ವಿರೋಧಿ ಕಾನೂನುಗಳನ್ನು ಹಿಂಪಡೆಯಲು ಬಿಜೆಪಿ ಸರ್ಕಾರವನ್ನು ಒತ್ತಾಯಿಸಿದ ರೈತರ ಐತಿಹಾಸಿಕ ಹೋರಾಟದ ವಿಜಯದಿಂದ ನಾವು ಕಲಿಯುವ ಪಾಠವಿದು.

28-29, ಮಾರ್ಚ್ 2022 ರ ಎರಡು ದಿನಗಳ ಅಖಿಲ ಭಾರತ ಸಾರ್ವತ್ರಿಕ ಮುಷ್ಕರವು ಮೋದಿ ಸರ್ಕಾರವು ತನ್ನ ಕಾರ್ಪೊರೇಟ್-ಪರ ನೀತಿಗಳನ್ನು ಕೈಬಿಡಲು, ಎಲ್ಲಾ ಅಗತ್ಯ ವಸ್ತುಗಳ ಬೆಲೆಗಳನ್ನು ನಿಯಂತ್ರಿಸಲು ಮತ್ತು ಸಾಮಾನ್ಯ ಜನರಿಗೆ ಪರಿಹಾರವನ್ನು ನೀಡಲು ಪರಿಣಾಮಕಾರಿ ಕ್ರಮಗಳನ್ನು ತೆಗೆದುಕೊಳ್ಳುವಂತೆ ಒತ್ತಾಯಿಸುವ ಈ ಹೋರಾಟದ ಭಾಗವಾಗಿದೆ.

0.1% ಮಂದಿಗಾಗಿ ಕಾರ್ಯನಿರ್ವಹಿಸುವ ಅನಾಹುತಕಾರಿ ಆಳ್ವಿಕೆಯ ವಿರುದ್ಧ
99.9% ಜನರಿಗೆ ಪ್ರಯೋಜನಕಾರಿ ನೀತಿಗಳ ಜಾರಿಗಾಗಿ

ಎಲ್‌ಐಸಿ ಐಪಿಓ ಸದ್ಯಕ್ಕೆ ನಿಲ್ಲಿಸುವಂತೆ 'ಜನತಾ ಆಯೋಗ'ದ ಆಗ್ರಹ

ಸಾರ್ವಜನಿಕ ವಲಯದ ಬೃಹತ್ ಸಂಸ್ಥೆ ಭಾರತೀಯ ಜೀವ ವಿಮಾ ನಿಗಮ(ಎಲ್‌ಐಸಿ) ದಲ್ಲಿನ ತನ್ನ ಪಾಲನ್ನು ಸ್ಟಾಕ್ ಎಕ್ಸ್‌ಚೇಂಜ್‌ಗಳಲ್ಲಿ ಪಟ್ಟಿ ಮಾಡಿ ಕೇಂದ್ರ ಸರಕಾರ ತನ್ನ ಪಾಲನ್ನು ದುರ್ಬಲಗೊಳಿಸಲು ತರಾತುರಿಯ ಪ್ರಯತ್ನಗಳನ್ನು ನಡೆಸಿದೆ ಎಂದು ನಾಗರಿಕ ಸಮಾಜ ರಚಿಸಿರುವ 'ಜನತಾ ಆಯೋಗ' ಕಳವಳ ವ್ಯಕ್ತಪಡಿಸಿದೆ. ಅದು ಫೆಬ್ರವರಿ 14 ರಂದು ಭಾರತ ಸರಕಾರದ ಸಂಪುಟ ಕಾರ್ಯದರ್ಶಿ ರಾಜೀವ್ ಗೌಹಾ ಅವರಿಗೆ ಪತ್ರ ಬರೆದಿದೆ. ವಿಮಾ ನಿಯಂತ್ರಣ ಅಭಿವೃದ್ಧಿ ಪ್ರಾಧಿಕಾರ(ಐ.ಆರ್‌ಡಿ.ಎ.)ಗೆ ಹೊಸ ಅಧ್ಯಕ್ಷರನ್ನು ನೇಮಿಸುವವರೆಗೆ ಈ ವಿಳಯದಲ್ಲಿ ಕಲಾಪಗಳಲ್ಲಿ ತರಾತುರಿ ಮಾಡದೆ ಅದನ್ನು ನಿಲ್ಲಿಸುವಂತೆ ಅದು ಹಣಕಾಸು ಸಚಿವಾಲಯವನ್ನು ಕೇಳಿದೆ.

ಸಾರ್ವಜನಿಕ ವಲಯದ ಉದ್ದಿಮೆಯೊಂದರ ಶೇರನ್ನು ಆರಂಭದ ಮಾರಾಟಕ್ಕೆ ಇಡುವಾಗ (ಐ.ಪಿ.ಒ.) ಐ.ಆರ್‌ಡಿ.ಎ. ಮತ್ತು ಭಾರತದ ಶೇರು ವಿನಿಮಯ ಮಂಡಳಿ(ಸೆಬಿ)ಯ ಮಂಜೂರಾತಿ ಅಗತ್ಯವಾಗಿದೆ. ಅವಿಲ್ಲದೆಯೇ 'ಹೂಡಿಕೆ ಮತ್ತು ಸಾರ್ವಜನಿಕ ಆಸ್ತಿ ನಿರ್ವಹಣೆ ಇಲಾಖೆ'(ಡಿಐಪಿಎಎಂ) ಐಪಿಒ ನೀಡುತ್ತಿರುವುದು ಹೇಗೆ ಸಾಧ್ಯ ಎಂದು ಜನತಾ ಆಯೋಗದ ಸದಸ್ಯರೂ, ಭಾರತ ಸರಕಾರದಲ್ಲಿ ಸೇವೆ ಸಲ್ಲಿಸಿರುವ ನಿವೃತ್ತ ಹಿರಿಯ ಐಎಎಸ್ ಅಧಿಕಾರಿಯೂ ಆಗಿದ್ದ ಇ.ಎ.ಎಸ್. ಶರ್ಮ ಈ ಪತ್ರದಲ್ಲಿ ಕೇಳಿದ್ದಾರೆ. ಐಆರ್‌ಡಿಎ ಅಧ್ಯಕ್ಷರಾಗಿದ್ದ ಎಸ್..ಸಿ.ಖುಂಟಿಯಾ ಮೇ 6, 2021 ರಂದು ನಿವೃತ್ತರಾದರು. ಅಂದಿನಿಂದ, ಈ ಸ್ಥಾನವು ಎಂಟು ತಿಂಗಳಿಗಿಂತ ಹೆಚ್ಚು ಕಾಲ ಖಾಲಿಯಿದೆ. ಆದಾಗ್ಯೂ ಖುಂಟಿಯಾ ಅವರ ನಿವೃತ್ತಿಯ ಬಹಳ ಮುಂಚೆಯೇ ಎಲ್‌ಐಸಿಯ ಐಪಿಒ ನ್ನು ಯೋಜಿಸಲಾಗಿತ್ತಾದರೂ, ಈ ಹುದ್ದೆ ಖಾಲಿಯಾಗಿಯೇ ಇದೆ.

ಅಂದರೆ, ಸರಕಾರ ತ್ವರಿತ ಪ್ರಕ್ರಿಯೆಗೆ ಅವಕಾಶ ನೀಡಲಿಕ್ಕಾಗಿ ಈ ಪ್ರಸ್ತಾಪದ ಮೇಲೆ ನಿಯಂತ್ರಕ ಮೇಲ್ವಿಚಾರಣೆಯನ್ನು ದುರ್ಬಲಗೊಳಿಸಲು ಪ್ರಯತ್ನಿಸುತ್ತಿದೆ ಎಂದು ಇದು ಸೂಚಿಸುತ್ತದೆ ಎಂದು ಆಯೋಗ ಹೇಳಿದೆ. ಅಂತೆಯೇ, ದೇಶದಲ್ಲಿನ ಕೌಟುಂಬಿಕ ಉಳಿತಾಯದ ಅಗಾಧವಾದ ಸಂಪತ್ತಿನ ಮೇಲೆ ಸಾರ್ವಜನಕ ನಿಯಂತ್ರಣವನ್ನು ದುರ್ಬಲಗೊಳಿಸಲು ಮತ್ತು ಹಂತಹಂತವಾಗಿ ಅದನ್ನು ಬೆರಳೆಣಿಕೆಯಷ್ಟಿರುವ ಉಚ್ಚ ವರ್ಗದವರ ಕೈಗಳಿಗೆ ವರ್ಗಾಯಿಸಲು ಈ ಐಪಿಒ ಪ್ರಯತ್ನಿಸುತ್ತದೆ.

"ಡಿಐಪಿಎಎಂ ಈ ಪ್ರಕ್ರಿಯೆಯನ್ನು ಬಹಳ ಆತುರದಿಂದ ನಡೆಸಲು ಪ್ರಯತ್ನಿಸುತ್ತಿದೆ, ಮಾರ್ಚ್, 2022 ರ ಅಂತ್ಯದ ಮೊದಲು ಐ.ಪಿ.ಒ.ಅನ್ನು ಅಂತಿಮಗೊಳಿಸಲು ಸಾಧ್ಯವಾಗಬೇಕೆಂಬ ಪ್ರಯತ್ನ ನಡೆಸಿದೆ. ಈ ವಿಳಯದ ಕಲಾಪಗಳಲ್ಲಿ ಡಿಐಪಿಎಎಂ, ಈ ಪ್ರಸ್ತಾವನೆಯ ದೀರ್ಘಕಾಲೀನ ಸಾಮಾಜಿಕ ಪರಿಣಾಮಗಳ ಗೊಡವೆಯೇ ಇಲ್ಲದೆ ಅನುಸರಿಸುತ್ತಿರುವ ಆತುರದ ವಿಧಾನದ ಬಗ್ಗೆ ನಮಗೆ ಆತಂಕವಾಗುತ್ತಿದೆ" ಎಂದು ಶರ್ಮ ಪತ್ರದಲ್ಲಿ ಹೇಳಿದ್ದಾರೆ.

ಎಲ್‌ಐಸಿಯು ಭಾರತದಲ್ಲಿ ಸಮಾಜದ ಹಿಂದುಳಿದ ವರ್ಗಗಳಿಗೆ ಸಾಮಾಜಿಕ ಭದ್ರತೆ ಒದಗಿಸುವ ಏಕೈಕ ಅತಿದೊಡ್ಡ ಸಂಸ್ಥೆಯಾಗಿದೆ. ಕಳೆದ ಹಲವಾರು ದಶಕಗಳಲ್ಲಿ ಎಲ್‌ಐಸಿ ಯ ಬೆಳವಣಿಗೆಗೆ ಅಪಾರ ಕೊಡುಗೆ ನೀಡುವಲ್ಲಿ ಅದರ ಸಣ್ಣ ಪಾಲಿಸಿದಾರರು ವಿಶೇಷವಾಗಿ ಪ್ರಮುಖ ಪಾತ್ರವನ್ನು ವಹಿಸಿದ್ದಾರೆ. ಸರ್ಕಾರದಿಂದ ಯಾವುದೇ ಮಹತ್ವದ ಹಣಕಾಸಿನ ಬೆಂಬಲವನ್ನು ಪಡೆಯದೆ ಮತ್ತು ನಿಗಮದ ವ್ಯವಹಾರಗಳಲ್ಲಿ ಕಾನೂನುಬದ್ಧ ಪಾಲನ್ನು ಹೊಂದದೆಯೇ ಪಾಲಿಸಿದಾರರು ಎಲ್‌ಐಸಿಗೆ ಹಣಕಾಸು ಬೆಂಬಲ ನೀಡಲು ಏಕಾಂಗಿಯಾಗಿ ಕೊಡುಗೆ ನೀಡಿದ್ದಾರೆ . ಆದ್ದರಿಂದ ಅವರಿಗೆ ನಿಗಮದ ವ್ಯವಹಾರಗಳಲ್ಲಿ ನ್ಯಾಯಬದ್ಧ ಪಾತ್ರದ ಹಕ್ಕು ಇದೆ ಎಂದು ಜನತಾ ಆಯೋಗ ವಾದಿಸಿದೆ.

"ಎಲ್‌ಐಸಿಯ ಪಾಲಿಸಿದಾರರಿಗೆ ಸರ್ಕಾರವು ಒದಗಿಸಿದ ಸಾರ್ವಭೌಮ ಖಾತರಿಯನ್ನು ಸಾಂಕೇತಿಕಾಗಿ ಮೌಲ್ಯೀಕರಿಸಬಹುದು ಮತ್ತು ಈಕ್ವಿಟಿ ಬಂಡವಾಳದ ಭಾಗ ಎಂದಾದರೂ ಪರಿಗಣಿಸಬಹುದು" ಎಂದಿರುವ ಅದು ಎಲ್‌ಐಸಿಯ ಈಕ್ವಿಟಿ ಬಂಡವಾಳ ನೆಲೆಯಲ್ಲಿ ಇದು ಸೂಕ್ತವಾಗಿ ಪ್ರತಿಫಲಿಸಬೇಕು ಎಂದು ಎಚ್ಚರಿಸಿದೆ. ಇಲ್ಲದಿದ್ದರೆ, ಖಾಸಗಿ ಹೂಡಿಕೆದಾರರು ಎಲ್‌ಐಸಿ ವ್ಯವಹಾರಗಳ ಮೇಲೆ ಅನಗತ್ಯ ನಿಯಂತ್ರಣವನ್ನು ಪಡೆಯುತ್ತಾರೆ, ಇದು ಪಾಲಿಸಿದಾರರಿಗೆ ಹಾನಿಕಾರಕವಾಗುತ್ತದೆ, ಅವರಲ್ಲಿ ಹೆಚ್ಚಿನವರು ಸಣ್ಣ ಮಟ್ಟದ ಹೂಡಿಕೆದಾರರು, ಈಗಾಗಲೇ ತಮ್ಮ ಕೌಟುಂಬಿಕ ಉಳಿತಾಯಗಳನ್ನು ಹೂಡಿರುವವರು ಎಂದು ಜನತಾ ಆಯೋಗ ಸರಕಾರಕ್ಕೆ ನೆನಪಿಸಿದೆ.

"ಮುಖ್ಯಸ್ಥನೇ ಇಲ್ಲದ ಐಆರ್‌ಡಿಎ ಎಲ್‌ಐಸಿಯ ಕರಡು ಐಪಿಒ ಪ್ರಸ್ತಾವನೆಯನ್ನು ಪರಿಶೀಲಿಸುತ್ತದೆ ಎಂಬ ಅಂಶವು ಈ ಕಸರತ್ತಿನ ವಿಶ್ವಾಸಾರ್ಹತೆಯನ್ನು ನಾಶಪಡಿಸುತ್ತದೆ. ಸಂಪೂರ್ಣವಾಗಿ ರಚಿತವಾಗಿರುವ ಐಆರ್‌ಡಿಎ ಇದ್ದಿದ್ದರೆ ಅದು ಬಹುಮಟ್ಟಿಗೆ, ಪಾಲಿಸಿದಾರರಿಗೆ ನ್ಯಾಯಸಮ್ಮತವಾಗಿ ಸಿಗಬೇಕಾದದ್ದನ್ನು ಕಸಿದುಕೊಳ್ಳುವ ಈ ಕರಡು ಐಪಿಒ ಪ್ರಸ್ತಾವನೆಯನ್ನು ತಿರಸ್ಕರಿಸುತ್ತಿತ್ತು" ಎಂದು ಶರ್ಮಾ ತಮ್ಮ ಪತ್ರದಲ್ಲಿ ಹೇಳಿದ್ದಾರೆ. ದೇಶೀಯ ಮತ್ತು ವಿದೇಶಿ ಹೂಡಿಕೆದಾರರಿಗೆ ಎಲ್‌ಐಸಿಯ ಈಕ್ವಿಟಿಯನ್ನು ಖರೀದಿಸಲು, ಮೊದಲ ಹಂತದಲ್ಲಿ ಸೀಮಿತವಾಗಿಯಾದರೂ, ಅವಕಾಶ ನೀಡುವ ಕೇಂದ್ರ ಸರಕಾರದ ಪ್ರಸ್ತಾವನೆ ಎಲ್‌ಐಸಿಯ ಈಕ್ವಿಟಿ ನೆಲೆಯಲ್ಲಿ ತಮ್ಮ ಕಾನೂನುಬದ್ಧ ಪಾಲಿನಿಂದ ಪಾಲಿಸಿದಾರರನ್ನು ವಂಚಿಸುವ ಅನ್ಯಾಯದ ಪ್ರಕ್ರಿಯೆಯನ್ನು ಪ್ರಾರಂಭಿಸುತ್ತಿದೆ ಎಂಬ ಆತಂಕವನ್ನು ಅವರು ವ್ಯಕ್ತಪಡಿಸಿದ್ದಾರೆ.. ಇದು ಸಾಮಾಜಿಕ ಭದ್ರತೆ ಒದಗಿಸಲು ನಿರ್ಮಿಸಿದ ಭಾರತದ ಅತಿದೊಡ್ಡ ಸಂಸ್ಥೆಯಾದ ಎಲ್‌ಐಸಿಯ ಧ್ಯೇಯೋದ್ದೇಶಗಳನ್ನು ಬದಲಾಯಿಸುತ್ತದೆ.

ಇದಲ್ಲದೆ, ಪಾಲಿಸಿದಾರರಿಗೆ ಎಲ್‌ಐಸಿಯ ಕೇವಲ 10% ಪಾಲನ್ನು ತೆರೆದಿಡುವ ಪ್ರಸ್ತಾವ ಅವರನ್ನು 'ದಾರಿ ತಪ್ಪಿಸಿ ಮೌನವಾಗಿಸುವ' ಸರ್ಕಾರದ ನಡೆ ಎಂದು ಶರ್ಮ ತಮ್ಮ ಪತ್ರದಲ್ಲಿ ಖಂಡಿಸಿದ್ದಾರೆ. ಎಲ್‌ಐಸಿಯ ಬೆಳವಣಿಗೆಯಲ್ಲಿ ಅತಿದೊಡ್ಡ ಪಾಲುದಾರರೆಂಬ ಜನರ ನ್ಯಾಯಬದ್ಧ ಸ್ಥಾನಮಾನಕ್ಕೂ ಈ ಈ 10% ಪಾಲಿಗೂ ಏನೇನೂ ಸಂಬಂಧವಿಲ್ಲ ಎಂದು ವಾದಿಸಿರುವ ಅವರು "ಎಲ್‌ಐಸಿಯಲ್ಲಿ ಅತಿದೊಡ್ಡ ಪಾಲುದಾರರಾಗಿರುವ ಪಾಲಿಸಿದಾರರನ್ನು ಅನ್ಯಾಯದ ಅನನುಕೂಲತೆಗೆ ಒಳಪಡಿಸುತ್ತದೆ. ಶೇರು ಮಾರುಕಟ್ಟೆಯ ಒಂದು ಸಣ್ಣ ಉಚ್ಚ ವರ್ಗದ ಹೂಡಿಕೆದಾರರ ವಿಭಾಗಕ್ಕೆ ಎದುರಾಗಿ ಅನ್ಯಾಯಪೂರ್ಣ ಅನನುಕೂಲತೆಗೆ ಒಡ್ಡುವ ಇಂತಹ ಪ್ರಸ್ತಾಪವು ಮೇಲ್ನೋಟಕ್ಕೇ ನೈಸರ್ಗಿಕ ನ್ಯಾಯದ ತತ್ವಗಳನ್ನು ಉಲ್ಲಂಘಿಸುತ್ತದೆ ಯಾದ್ದರಿಂದ ಅದು ಖಂಡಿತಾ ಕಾನೂನುಬಾಹಿರವಾಗಿದೆ" ಎಂದಿದ್ದಾರೆ.

ಐಆರ್‌ಡಿಎಗೆ ಸಂಬಂಧಿಸಿದಂತೆ, ವಿಮಾ ಪಾಲಿಸಿದಾರರ ಹಿತಾಸಕ್ತಿಗಳನ್ನು ಕಾಪಾಡಲೆಂದೇ ಸಂಸತ್ತು 1999 ರಲ್ಲಿ ಐಆರ್‌ಡಿಎ ಕಾಯಿದೆಯನ್ನು ವಿಶೇಷವಾಗಿ ಜಾರಿಗೆ ತಂದಿದೆ ಎಂದು ಜನತಾ ಆಯೋಗ ನೆನಪಿಸಿದೆ. ಅಂತೆಯೇ,ಆ ಕಾಯ್ದೆಯ ಮುನ್ನುಡಿಯು ಹೀಗೆ ಹೇಳುತ್ತದೆ, "ವಿಮಾ ಪಾಲಿಸಿಗಳನ್ನು ಹೊಂದಿರುವವರ ಹಿತಾಸಕ್ತಿಗಳನ್ನು ರಕ್ಷಿಸಲು, ವಿಮಾ ಉದ್ಯಮದ ಕ್ರಮಬದ್ಧ ಬೆಳವಣಿಗೆಯನ್ನು ನಿಯಂತ್ರಿಸಲು, ಉತ್ತೇಜಿಸಲು ಮತ್ತು ಖಚಿತಪಡಿಸಿಕೊಳ್ಳಲು ಮತ್ತು ಅದಕ್ಕೆ ಸಂಬಂಧಿಸಿದ ವಿಷಯಗಳಿಗೆ ಮತ್ತು ಮುಂದೆ ವಿಮಾ ಕಾಯಿದೆ, 1938, ಜೀವ ವಿಮಾ ನಿಗಮ ಕಾಯಿದೆ, 1956 ಮತ್ತು ಸಾಮಾನ್ಯ ವಿಮಾ ವ್ಯವಹಾರ (ರಾಷ್ಟ್ರೀಕರಣ) ಕಾಯಿದೆ, 1972ಯನ್ನು ತಿದ್ದುಪಡಿ ಮಾಡಲು ಒಂದು ಪ್ರಾಧಿಕಾರದ ಸ್ಥಾಪನೆಗೆ ಅವಕಾಶ ಮಾಡಿಕೊಡಲು" ಎಂದು ಹೇಳುತ್ತದೆ.

ಇದರರ್ಥ ಎಲ್‌ಐಸಿ ಪಾಲಿಸಿದಾರರ ಹಿತಾಸಕ್ತಿಗಳನ್ನು ರಕ್ಷಿಸುವುದು ಐಆರ್‌ಡಿಎ ಯ ನಿಯಂತ್ರಣದ ಪ್ರಾಥಮಿಕ ಉದ್ದೇಶವಾಗಿದೆ. ಈ ಕಾರಣಕ್ಕಾಗಿ, ಸರ್ಕಾರದ ಪ್ರಸ್ತಾವನೆಯನ್ನು ಅತ್ಯಂತ ಶ್ರದ್ಧೆಯಿಂದ ಪರೀಕ್ಷಿಸಬೇಕು ಎಂದು ಈ ಸ್ವತಂತ್ರ ಶಾಸನಬದ್ಧ ಪ್ರಾಧಿಕಾರವನ್ನು ಜನತಾ ಆಯೋಗ ಒತ್ತಾಯಿಸಿದೆ.ಒಟ್ಟಾರೆಯಾಗಿ ಸಾರ್ವಜನಕರ ಮತ್ತು ವಿಶೇಷವಾಗಿ ಎಲ್‌ಐಸಿಯ ಪ್ರಧಾನ ಪಾಲುದಾರರಾಗಿರುವ ಪಾಲಿಸಿದಾರರ ಹಿತಾಸಕ್ತಿಗಳನ್ನು ರಕ್ಷಿಸಲು ಐಆರ್‌ಡಿಎ ಯ ಕರ್ತವ್ಯಬದ್ಧವಾಗಿದೆ ಎಂದು ಹಣಕಾಸು ಸಚಿವಾಲಯಕ್ಕೆ ಜನತಾ ಆಯೋಗದ ಪರವಾಗಿ ಬರೆದಿರುವ ಈ ಪತ್ರ ನೆನಪಿಸಿದೆ.

ಸಿಎಎ ಪ್ರತಿಭಟನಕಾರರಿಂದ ನಷ್ಟ ವಸೂಲಿಯ ಪ್ರಕರಣ: ಸುಪ್ರೀಂ ಕೋರ್ಟ್‌ನಿಂದ ಯೋಗಿ ಸರ್ಕಾರಕ್ಕೆ ತರಾಟೆ:

ಕೊನೆಗೂ ನೋಟೀಸುಗಳನ್ನು ವಾಪಾಸ್ ಪಡೆದ ಮೇಲೆ ವಸೂಲು ಮಾಡಿದ ಹಣವನ್ನು ಹಿಂದಿರುಗಿಸುವಂತೆ ಆದೇಶ

ಪೌರತ್ವ ತಿದ್ದುಪಡಿ ಕಾಯ್ದೆ (ಸಿಎಎ) ವಿರೋಧಿ ಪ್ರತಿಭಟನಾಕಾರರಿಂದ ಸಾರ್ವಜನಿಕ ಆಸ್ತಿ ನಷ್ಟಕ್ಕೆ ಪರಿಹಾರವಾಗಿ ವಸೂಲು ಮಾಡಿದ್ದ ಕೋಟ್ಯಂತರ ರೂಪಾಯಿ ಹಿಂದಿರುಗಿಸಬೇಕು ಎಂದು ಸುಪ್ರೀಂ ಕೋರ್ಟ್ ಉತ್ತರ ಪ್ರದೇಶ ಸರ್ಕಾರಕ್ಕೆ ಆದೇಶ ನೀಡಿದೆ.

ಆರೋಪಿಗಳ ಆಸ್ತಿಯನ್ನು ಮುಟ್ಟುಗೋಲು ಹಾಕಿಕೊಳ್ಳುವ ಪ್ರಕ್ರಿಯೆ ನಡೆಸುವಲ್ಲಿ ಉತ್ತರ ಪ್ರದೇಶ ಸರ್ಕಾರ "ದೂರುದಾರ, ತೀರ್ಪುಗಾರ ಮತ್ತು ಫಿರ್ಯಾದಿ" ಯಂತೆ ವರ್ತಿಸಿದೆ ಎಂದು ನ್ಯಾಯಮೂರ್ತಿಗಳಾದ ಡಿವೈ ಚಂದ್ರಚೂಡ್ ಮತ್ತು ಸೂರ್ಯಕಾಂತ್ ಅವರ ಪೀಠ ಹೇಳಿದೆ.

2019ರ ಪ್ರತಿಭಟನೆಗೆ ಸಂಬಂಧಿಸಿ ಆಸ್ತಿ ನಷ್ಟ ಭರಿಸಲು ಸಿಎಎ ವಿರೋಧಿ ಹೋರಾಟಗಾರರ ವಿರುದ್ಧದ ಕ್ರಮವು ಕಾನೂನಿಗೆ ವಿರುದ್ಧವಾದುದು ಎಂದು ಸುಪ್ರೀಂ ಕೋರ್ಟ್ ಫೆಬ್ರವರಿ 11ರಂದು ಅಭಿಪ್ರಾಯಪಟ್ಟಿದ್ದು, ತನಿಖೆಯನ್ನು ಕೈಬಿಡಬೇಕು ಎಂದು ತಾಕೀತು ಮಾಡಿತ್ತು.

"ಈ ಪ್ರಕ್ರಿಯೆಗಳನ್ನು ಹಿಂತೆಗೆದುಕೊಳ್ಳಿ ಅಥವಾ ಈ ನ್ಯಾಯಾಲಯವು ನಿಗದಿಪಡಿಸಿದ ಕಾನೂನನ್ನು ಉಲ್ಲಂಘಿಸಿದ್ದಕ್ಕಾಗಿ ನಾವು ಅದನ್ನು ರದ್ದುಗೊಳಿಸುತ್ತೇವೆ. ನೀವು ಕಾನೂನಿನ ಅಡಿಯಲ್ಲಿ ಸರಿಯಾದ ಪ್ರಕ್ರಿಯೆಯನ್ನು ಅನುಸರಿಸಬೇಕು" ಎಂದು ಅಂದು ನ್ಯಾಯಾಲಯ ಹೇಳಿತ್ತು.


ಫೆಬ್ರುವರಿ 18 ರಂದು ವಿಚಾರಣೆ ವೇಳೆ ಉತ್ತರ ಪ್ರದೇಶ ಸರ್ಕಾರವು, 'ಸಿಎಎ ವಿರೋಧಿ ಹೋರಾಟಗಾರರಿಗೆ ಆಸ್ತಿ ನಷ್ಟದ ವಸೂಲಿ ಕುರಿತಂತೆ ನೀಡಲಾಗಿದ್ದ ಒಟ್ಟು 274 ನೋಟಿಸ್‌ಗಳನ್ನು ಹಿಂಪಡೆಯಲಾಗಿದೆ' ಎಂದು ನ್ಯಾಯಪೀಠಕ್ಕೆ ತಿಳಿಸಿತು. ವಸೂಲಾಗಿರುವ ಹಣದ ವಾಪಸಾತಿ ಬದಲಿಗೆ, ಕ್ಲೇಮು ನ್ಯಾಯಮಂಡಳಿಗೆ ಅರ್ಜಿ ಸಲ್ಲಿಸಲು ಪ್ರತಿಭಟನಕಾರರಿಗೆ ತಿಳಿಸಬಹುದು ಎಂದು ಸರ್ಕಾರವನ್ನು ಪ್ರತಿನಿಧಿಸಿದ್ದ ಹೆಚ್ಚುವರಿ ಅಡ್ವೋಕೇಟ್ ಜನರಲ್ ಗರಿಮಾ ಪ್ರಸಾದ್ ಸಲಹೆ ಮಾಡಿದರು.

ಆದರೆ, ವಸೂಲಿ ಮಾಡಿದ್ದ ಹಣವನ್ನು ಹಿಂದಿರುಗಿಸುವ ಆದೇಶ ನೀಡಿರುವುದು ನೋಟೀಸುಗಳನ್ನು ಹಿಂದಕ್ಕೆ ಪಡೆದಿರುವ ಹಿನ್ನೆಲೆಯಲ್ಲಿ. ಆದ್ದರಿಂದ ನೋಟೀಸು ಹಿಂಪಡೆದುದರ ನೇರ ಪರಿಣಾಮಗಳು ನಡೆಯಬೇಕು ಎಂದು ಸಪಷ್ಟವಾಗಿ ಹೇಳಿದ ನ್ಯಾಯಮೂರ್ತಿಗಳಾದ ಡಿ.ವೈ.ಚಂದ್ರಚೂಡ್ ಮತ್ತು ಸೂರ್ಯಕಾಂತ್ ಅವರಿದ್ದ ಪೀಠವು ನೀವು ನಿಮ್ಮ ಹೊಸ ಕಾಯ್ದೆ ಪ್ರಕಾರ ಮುಂದುವರೆಯಬಹುದು.. ನಾವು ನಮ್ಮದೇ ಸಂವಿಧಾನಿಕ ನ್ಯಾಯಶಾಸ್ತ್ರದ ಅಳತೆಗೋಲುಗಳ ಪ್ರಕಾರ ನಡೆಯಬೇಕಾಗುತ್ತದೆ" ಎಂದು ಹೇಳಿತು.

ಆಸ್ತಿ ನಷ್ಟಕ್ಕೆ ಸಂಬಂಧಿಸಿದಂತೆ ಪರಿಹಾರ ವಸೂಲಿ ಕುರಿತು ಜಿಲ್ಲಾಡಳಿತವು ನೀಡಿದ್ದ ನೋಟಿಸ್‌ಗಳನ್ನು ರದ್ದುಪಡಿಸಬೇಕು ಎಂದು ಮನವಿ ಮಾಡಿ ಪರ್ವೇಜ್ ಆರೀಫ್ ಟಿಟು ಅವರು ಅರ್ಜಿ ಸಲ್ಲಿಸಿದ್ದರು. ನೋಟಿಸ್‌ಗಳನ್ನು ನೀಡಿರುವುದಕ್ಕೆ ಸಂಬಂಧಿಸಿದಂತೆ ನ್ಯಾಯಾಲಯಕ್ಕೆ ಸಲ್ಲಿಸಿದ ಮನವಿಯಲ್ಲಿ ಆರು ವರ್ಷಗಳ ಹಿಂದೆ 94 ನೇ ವಯಸ್ಸಿನಲ್ಲಿ ಸಾವನ್ನಪ್ಪಿದ ವ್ಯಕ್ತಿಗೆ ಮತ್ತು 90 ವರ್ಷಕ್ಕಿಂತ ಮೇಲ್ಪಟ್ಟ ಇಬ್ಬರು ಸೇರಿದಂತೆ ಇತರ ಹಲವರಿಗೆ ನೋಟಿಸ್ ಕಳುಹಿಸಿರುವ ನಿದರ್ಶನಗಳನ್ನು ಉಲ್ಲೇಖಿಸಲಾಗಿದೆ.

833 'ಗಲಭೆಕೋರ'ರ ವಿರುದ್ಧ 106 ಎಫ್‌ಐಆರ್‌ಗಳನ್ನು ದಾಖಲಿಸಲಾಗಿದ್ದು, 274 ವಸೂಲಿ ನೋಟಿಸ್‌ಗಳನ್ನು ನೀಡಲಾಗಿದೆ ಎಂದು ರಾಜ್ಯ ಸರ್ಕಾರದ ಪರ ವಕೀಲ ಗರಿಮಾ ಪ್ರಸಾದ್ ಹೇಳಿದರು. "274 ನೋಟಿಸ್‌ಗಳಲ್ಲಿ 236 ರಲ್ಲಿ ವಸೂಲಾತಿ ಆದೇಶಗಳನ್ನು ರವಾನಿಸಲಾಗಿದೆ ಮತ್ತು 38 ಪ್ರಕರಣಗಳನ್ನು ಮುಕ್ತಾಯಗೊಳಿಸಲಾಗಿದೆ" ಎಂದು ಯುಪಿ ಸರ್ಕಾರದ ವಕೀಲರು ಹೇಳಿದ್ದರು.

ಅತ್ತ ಪ್ರಧಾನ ಮಂತ್ರಿಗಳು ವಿಧಾನಸಭಾ ಚುನಾವಣಾ ಪ್ರಚಾರದಲ್ಲಿ ಯೋಗಿ ಸರಕಾರದ ಕಾನೂನು–ವ್ಯವಸ್ಥೆಯ ನಿರ್ವಹಣೆಯನ್ನು ಹಾಡಿ ಹೊಗಳುತ್ತಿದ್ದಾರೆ. ಸ್ವತಃ ಮುಖ್ಯಮಂತ್ರಿಗಳು ಉತ್ತರಪ್ರದೇಶದಲ್ಲಿ ಬಿಜೆಪಿ ಅಧಿಕಾರಕ್ಕೆ ಬರದಿದ್ದರೆ ರಾಜ್ಯ ಕೇರಳ, ಜಮ್ಮು–ಕಾಶ್ಮೀರ ಥವ ಪಶ್ಚಿಮ ಬಂಗಾಲದಂತಾಗುತ್ತದೆ ಎಂದು ಮತದಾರರನ್ನು ಬೆದರಿಸುವ ಪ್ರಯತ್ನವನ್ನೂ ಮಾಡಿದ್ದಾರೆ! ಅದಾದ ನಂತರ, ಉತ್ತರಾಖಂಡದಲ್ಲಿ ಬಿಜೆಪಿ ಸರಕಾರ ಬರದಿದ್ದರೆ, ಉತ್ತರಪ್ರದೇಶದಿಂದ ಓಡಿಸಿದ ಕ್ರಿನಿಲ್‌ಗಳೆಲ್ಲ ಅಲ್ಲಿ ಆಶ್ರಯ ಪಡೆದು ಉಪಟಳ ಆರಂಭಿಸುತ್ತಾರೆ ಎಂದು ಹೆದರಿಸಿದ್ದಾರಂತೆ!




ಕಾಶ್ಮೀರ! ಬಂಗಾಳ! ಕೇರಳ!! ಯುಪಿ!
ವ್ಯಂಗ್ಯಚಿತ್ರ: ಸತೀಶ ಆಚಾರ್ಯ

ಜಾಗರೂಕತೆಯಿಂದ ಮತ ಹಾಕು ಇಲ್ಲವಾದರೆ ನೀನು ಅವನಂತಾಗುತ್ತೀಯಾ
ವ್ಯಂಗ್ಯಚಿತ್ರ: ಸಂದೀಪ ಅಧ್ವರ್ಯು, ಟೈಂಸ್ ಆಫ್ ಇಂಡಿಯ



ಬಂಡವಾಳಶಾಹಿ ಸರ್ಕಾರಗಳು ನಿರುದ್ಯೋಗಕ್ಕಿಂತ ಹಣದುಬ್ಬರದ ಬಗ್ಗೆಯೇ ಏಕೆ ತಲೆಕೆಡಿಸಿಕೊಳ್ಳುತ್ತವೆ?



ಉತ್ಪಾದನೆಯಲ್ಲಿ ಸೃಷ್ಟಿಯಾಗುವ ಹೆಚ್ಚುವರಿ ಮೌಲ್ಯದ ಹೊರತಾಗಿಯೂ, ಶ್ರೀಮಂತ ಕುಳಗಳಿಗೆ ಅಧಿಕವಾಗಿ ಬರುವ ಆದಾಯದ ಮೂಲವೆಂದರೆ, ಬಂಡವಾಳದ ಆದಿಮ ಸಂಗ್ರಹಣೆಯೇ. ಆದ್ದರಿಂದ, ಈ ಶ್ರೀಮಂತ ಕುಳಗಳ ದೃಷ್ಟಿಯಲ್ಲಿ ಹಣದುಬ್ಬರಕ್ಕಿಂತಲೂ ನಿರುದ್ಯೋಗವೇ ಕಡಿಮೆ ಮಹತ್ವ ಪಡೆದಿದೆ. ಸರ್ಕಾರವೂ ಅದನ್ನೇ ಅನುಮೋದಿಸುತ್ತದೆ. ಹಣದುಬ್ಬರವನ್ನು ನಿಯಂತ್ರಿಸುವ ಸಲುವಾಗಿ ನಿರುದ್ಯೋಗವನ್ನು ಹೆಚ್ಚಿಸುವ ನೀತಿಯು, ಅಧಿನಾಯಕ ವರ್ಗದ ಹಿತಾಸಕ್ತಿಗಳಿಗೆ ಬಂಡವಾಳಶಾಹಿ ಸರ್ಕಾರಗಳ ಲಜ್ಜೆಗೆಟ್ಟ ಅಧೀನತೆಯನ್ನು ಸ್ಪಷ್ಟವಾಗಿ ತೋರಿಸುತ್ತದೆ. ಹಾಗಾಗಿ, ಅವಕ್ಕೆ ನಿರುದ್ಯೋಗ ಸಮಸ್ಯೆಗಿಂತಲೂ ಹಣದುಬ್ಬರವೇ ಹೆಚ್ಚಿನ ಆದ್ಯತೆಯ ವಿಷಯ.

ಪ್ರೊ. ಪ್ರಭಾತ್ ಪಟ್ನಾಯಕ್
ಅನು: ಕೆ.ಎಂ. ನಾಗರಾಜ್

ನಿರುದ್ಯೋಗ ಹೆಚ್ಚಿದರೂ ಅಡ್ಡಿಯಿಲ್ಲ, ಹಣದುಬ್ಬರ ಮಾತ್ರ ನಿಯಂತ್ರಣದಲ್ಲಿರಲೇಬೇಕು ಎಂಬ ನಿಲುವನ್ನು ಎಲ್ಲ ಬಂಡವಾಳಶಾಹಿ ಸರ್ಕಾರಗಳೂ ತಳೆಯುತ್ತವೆ. ಸರ್ಕಾರಗಳ ಈ ನಿಲುವಿಗೂ ಮತ್ತು ನಿರುದ್ಯೋಗ – ಹಣದುಬ್ಬರ ಇವುಗಳ ನಡುವೆ ಒಂದು ಸಮತೋಲನವಿರಬೇಕು ಎಂಬ ತಿಳುವಳಿಕೆಗೂ ಸಂಬಂಧವೇ ಇಲ್ಲ. ಹಣದ ಅತಿಯಾದ ಪೂರೈಕೆಯಿಂದಾಗಿ ("ಅತಿ ಹೆಚ್ಚು ಹಣವು ಅತಿ ಕಡಿಮೆ ಸರಕುಗಳ ಹಿಂದೆ ಬೀಳುವ ಪರಿಸ್ಥಿತಿ") ಹಣದುಬ್ಬರ ಉಂಟಾಗುತ್ತದೆ ಎಂದು ಭಾವಿಸುವವರು, ಖರ್ಚುಗಳನ್ನು ಕಡಿತಗೊಳಿಸುವ ಮೂಲಕ ಹಣದುಬ್ಬರವನ್ನು ನಿಯಂತ್ರಿಸಬಹುದು ಎಂದು ಭಾವಿಸುತ್ತಾರೆ. ಒಟ್ಟಾರೆ ಖರ್ಚುಗಳನ್ನು ಕಡಿತಗೊಳಿಸಿದಾಗ ನಿರುದ್ಯೋಗ ಹೆಚ್ಚುತ್ತದೆ ಎಂಬುದು ಗೊತ್ತಿದ್ದರೂ ಸಹ, ಈ ಎಲ್ಲರೂ, ನಿರುದ್ಯೋಗ ಹೆಚ್ಚಿದರೂ ಸರಿಯೇ, ಹಣದುಬ್ಬರವನ್ನು ಮಾತ್ರ ಅಂಕೆಯಲ್ಲಿಡುವ ನಿಲುವನ್ನೇ ತಳೆಯುತ್ತಾರೆ.

ಈ ನಿಲುವು ಅನೇಕ ಪ್ರಶ್ನೆಗಳನ್ನು ಹುಟ್ಟುಹಾಕುತ್ತದೆ. ಇವರೆಲ್ಲರೂ ಈ ನಿಲುವನ್ನೇ ಏಕೆ ತಳೆಯುತ್ತಾರೆ ಎಂಬುದು ಮೊದಲನೆಯ ಪ್ರಶ್ನೆ. ಹಣದುಬ್ಬರವನ್ನು ಅಂಕೆಯಲ್ಲಿಡಲು ಸರ್ಕಾರಗಳು ಬೆಲೆನಿಯಂತ್ರಣ ಮತ್ತು ಅದರ ಜೊತೆಯಲ್ಲಿ ಪಡಿತರದಂತಹ ನೇರ ಕ್ರಮಗಳನ್ನು ಕೈಗೊಳ್ಳುವ ಮೂಲಕ ಉದ್ಯೋಗಗಳು ಉನ್ನತ ಮಟ್ಟದಲ್ಲೇ ಉಳಿಯುವಂತೆ ಏಕೆ ನೋಡಿಕೊಳ್ಳುವುದಿಲ್ಲ? ಉತ್ತರ ಬಹಳ ಸ್ಪಷ್ಟವಿದೆ: ಅರ್ಥವ್ಯವಸ್ಥೆಯಲ್ಲಿ ಸರ್ಕಾರವು ನೇರ ಹಸ್ತಕ್ಷೇಪ ಮಾಡುವುದನ್ನು ಬಂಡವಾಳಗಾರರು ಇಷ್ಟಪಡುವುದಿಲ್ಲ. ಏಕೆಂದರೆ, ಈ ಹಸ್ತಕ್ಷೇಪವು ಜನರ ಮನಸ್ಸಿನಲ್ಲಿ ಬಂಡವಾಳಶಾಹಿ ವ್ಯವಸ್ಥೆಯ ಸಾಮಾಜಿಕ ಔಚಿತ್ಯದ ಮೂಲಭೂತ ಪ್ರಶ್ನೆಯನ್ನೇ ಎತ್ತುತ್ತದೆ: ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಅದರ ಹುಳುಕುಗಳನ್ನು ಮುಚ್ಚಲು ಸರ್ಕಾರದ ನೇರ ಹಸ್ತಕ್ಷೇಪ ಅನಿವಾರ್ಯ ಎಂದಾದರೆ, ಅಂತಹ ಒಂದು ವ್ಯವಸ್ಥೆಯಿಂದ ಆಗುವ ಪ್ರಯೋಜನವಾದರೂ ಏನು?

ಎರಡನೆಯ ಪ್ರಶ್ನೆ ಎಂದರೆ, ಕಾರ್ಮಿಕರು ಕಡಿಮೆ ಸಂಖ್ಯೆಯಲ್ಲಿ ಉದ್ಯೋಗದಲ್ಲಿದ್ದಾಗ, ಸೃಷ್ಟಿಯಾಗುವ ಹೆಚ್ಚುವರಿ ಮೌಲ್ಯದ ಪ್ರಮಾಣವೂ ಸಣ್ಣದೇ ಇದ್ದರೂ ಸಹ, ಹಣದುಬ್ಬರವನ್ನು ಅಂಕೆಯಲ್ಲಿಡುವ ಸಲುವಾಗಿ ಕೈಗೊಳ್ಳುವ ಕ್ರಮಗಳಿಂದಾಗಿ ನಿರುದ್ಯೋಗ ಹೆಚ್ಚುವ ಒಂದು ವ್ಯತಿರಿಕ್ತ ಪರಿಸ್ಥಿತಿ ಬಂಡವಾಳಗಾರರಿಗೆ ಎದುರಾಗುತ್ತದೆಯಾದರೂ, ಬಂಡವಾಳಶಾಹಿ ಸರ್ಕಾರಗಳು ಹಣದುಬ್ಬರದ ಬಗ್ಗೆಯೇ ಹೆಚ್ಚಿನ ಕಾಳಜಿಯನ್ನು ಏಕೆ ತೋರಿಸುತ್ತವೆ? ಹಣದುಬ್ಬರವನ್ನು ನಿಯಂತ್ರಿಸುವ ಸಲುವಾಗಿ ಬಳಸುವ ನಿರುದ್ಯೋಗದ ಆಯುಧವನ್ನು ಹಣದುಬ್ಬರವು ಅತಿ ಹೆಚ್ಚಿನ ಮಟ್ಟದಲ್ಲಿದ್ದಾಗ ಮಾತ್ರ ಬಳಸಲಾಗುತ್ತದೆ ಎಂದೇನೂ ಅಲ್ಲ. ಕೆಳ ಅಥವಾ ಮಧ್ಯಮ ಮಟ್ಟದ ಹಣದುಬ್ಬರವಿದ್ದಾಗಲೂ ನಿರುದ್ಯೋಗದ ಆಯುಧವನ್ನೇ ಬಳಸಲಾಗುತ್ತದೆ. ಒಂದು ಉದಾಹರಣೆಯಾಗಿ ಹೇಳುವುದಾದರೆ, ಕೊರೊನಾ ಅಪ್ಪಳಿಸುವ ಮೊದಲಿನ ಪರಿಸ್ಥಿತಿಗೆ ಹೋಲಿಸಿದರೆ, ಅಮೆರಿಕಾದಲ್ಲಿ ಲಕ್ಷಾಂತರ ಜನರು ಇನ್ನೂ ನಿರುದ್ಯೋಗಿಗಳಾಗಿ ಉಳಿದಿದ್ದರೂ ಸಹ, ಹಣದುಬ್ಬರ ದರವು 2021ರ ಡಿಸೆಂಬರ್‌ನಲ್ಲಿ ಶೇಕಡಾ 7ರ ಮಟ್ಟ ತಲುಪಿತು ಎಂಬ ಒಂದೇ ಒಂದು ಕಾರಣದ ಮೇಲೆ ಬಡ್ಡಿ ದರಗಳನ್ನು ಏರಿಸಲಾಗುತ್ತಿದೆ. ಇದು 1982ರ ನಂತರದ ಅವಧಿಯಲ್ಲಿ ಕಂಡ ಅತಿ ಹೆಚ್ಚಿನದು ಎಂಬ ಅಂಶವು, ಕಳೆದ 40 ವರ್ಷಗಳಲ್ಲಿ ಅಧಿಕಾರಕ್ಕೆ ಬಂದ ಅಮೆರಿಕಾದ ಎಲ್ಲ ಸರ್ಕಾರಗಳ ಆದ್ಯತೆಯೂ ಹಣದುಬ್ಬರವನ್ನು ನಿಯಂತ್ರಿಸುವುದೇ ಆಗಿತ್ತು ಎಂಬುದನ್ನು ತಿಳಿಸುತ್ತದೆ.

ಹಣದುಬ್ಬರದ ಸಂದರ್ಭದಲ್ಲಿ, ಬ್ರಿಟನ್ನಿನ ಪ್ರಧಾನ ಮಂತ್ರಿಯಾಗಿದ್ದ ಲೇಬರ್ ಪಕ್ಷದ ಟೋನಿ ಬ್ಲೇರ್ ಅವರು ಒಮ್ಮೆ ಹೀಗೆ ಹೇಳಿದ್ದರು: ಹಣದುಬ್ಬರವನ್ನು "ಶೇ.2.5ಕ್ಕಿಂತ ಕಡಿಮೆ" ಮಟ್ಟದಲ್ಲಿರುವಂತೆ ನೋಡಿಕೊಳ್ಳುವ ಟೋರಿಗಳ (ಅಂದರೆ, ಕನ್ಸರ್‌ವೇಟಿವ್ ಪಕ್ಷದ) ಗುರಿಯು ಅಸಮರ್ಪಕವಾಗಿತ್ತು. ಟೋನಿ ಬ್ಲೇರ್ ಅವರ ಈ ಮಾತುಗಳಲ್ಲಿದ್ದ ಸೂಚ್ಯಾರ್ಥವೇನೆಂದರೆ, ನಿರುದ್ಯೋಗವು ಎಷ್ಟೇ ಹೆಚ್ಚಿನ ಮಟ್ಟದಲ್ಲಿದ್ದರೂ ಸರಿಯೇ, ಯಾವ ಬೆಲೆಯನ್ನು ತೆತ್ತಾದರೂ ಸರಿಯೇ, ದೇಶವು ಶೂನ್ಯ ಹಣದುಬ್ಬರ ಮಟ್ಟವನ್ನು ಸಾಧಿಸಲೇಬೇಕು ಎಂಬುದು. ಬ್ಲೇರ್ ಅವರ ಈ ನಿಲುವು, ಲೇಬರ್ ಪಕ್ಷವು ಹಿಂದೆ ಹೊಂದಿದ್ದ ಪೂರ್ಣ ಉದ್ಯೋಗ ಸಾಧಿಸುವ ಗುರಿಗೆ ತದ್ವಿರುದ್ಧವಾಗಿತ್ತು.

ಹಣದುಬ್ಬರವು ಎಷ್ಟೇ ಕೆಳ ಮಟ್ಟದಲ್ಲಿರಲಿ, ಅದರಲ್ಲಿ ಕೊಂಚ ಏರಿಕೆಯಾದರೂ ಸರ್ಕಾರಗಳು ಥರಗುಟ್ಟುತ್ತವೆ ಮತ್ತು ಅದನ್ನು ತಗ್ಗಿಸಲು ನಿರುದ್ಯೋಗ ಹೆಚ್ಚುವಂತಹ ಕ್ರಮಗಳನ್ನು ಕೈಗೊಳ್ಳುತ್ತವೆ. ಅಂದರೆ, ಅವರು ನಿರುದ್ಯೋಗಕ್ಕಿಂತಲೂ ಹೆಚ್ಚಾಗಿ ಹಣದುಬ್ಬರದ ಬಗ್ಗೆಯೇ ಹೆಚ್ಚು ಕಾಳಜಿ ವಹಿಸುತ್ತಾರೆ. ಹೀಗೇಕೆ?

ಈ ಬಗ್ಗೆ, ಟೋನಿ ಬ್ಲೇರ್ ಮತ್ತು ಬಲಪಂಥೀಯ ಅರ್ಥಶಾಸ್ತ್ರಜ್ಞರು ಹೇಳುವುದೇನೆಂದರೆ, ಹಣದುಬ್ಬರವು ಕೆಳ ಮಟ್ಟದಲ್ಲಿದ್ದಾಗ, ಆರ್ಥಿಕ ಬೆಳವಣಿಗೆಯು ವೇಗ ಪಡೆಯುತ್ತದೆ ಮತ್ತು ಅದರಿಂದಾಗಿ ದೀರ್ಘಾವಧಿಯಲ್ಲಿ ಸ್ಥಿರ ಉದ್ಯೋಗಗಳು ಲಭಿಸುತ್ತವೆ ಎಂಬುದು. ಆದರೆ, ಇದು ಕೇಳಲಿಕ್ಕೆ ಹಿತವಷ್ಟೇ. ವಾಸ್ತವವಾಗಿ ಆಗುವುದೇ ಬೇರೆ. ಹಣಕಾಸು ನೀತಿ ಮತ್ತು ವಿತ್ತ ನೀತಿಗಳನ್ನು ಬಿಗಿ ಕಟ್ಟುಪಾಡುಗಳೊಂದಿಗೆ ಬಳಸಿದಾಗ ನಿರುದ್ಯೋಗ ಹೆಚ್ಚುತ್ತದೆ. ಇದು ಸ್ಥಾಪಿತ ಸಾಮರ್ಥ್ಯವು ಪೂರ್ಣವಾಗಿ ಬಳಕೆಯಾಗದೆ ಉಳಿಯಲು ಕಾರಣವಾಗುತ್ತದೆ. ಈ ಪರಿಸ್ಥಿತಿಯು, ಖಾಸಗಿ ಹೂಡಿಕೆಯನ್ನು ನಿರುತ್ಸಾಹಗೊಳಿಸುತ್ತದೆ. ಪರಿಣಾಮವಾಗಿ ಉದ್ಯೋಗಾವಕಾಶಗಳು ಕುಗ್ಗುತ್ತವೆ. ಹಾಗೆ ನೋಡಿದರೆ, ಬ್ಲೇರ್ ಅವರ ಈ ಹೇಳಿಕೆಗೂ ಮತ್ತು ಬಂಡವಾಳಶಾಹಿಗಳಿಗೆ ತೆರಿಗೆ ರಿಯಾಯಿತಿಗಳನ್ನು ನೀಡುವ ಮೂಲಕ ದೀರ್ಘಾವಧಿಯಲ್ಲಿ ಉದ್ಯೋಗಗಳು ಹೆಚ್ಚುತ್ತವೆ ಎಂಬ ವಾದಕ್ಕೂ ವ್ಯತ್ಯಾಸವೇನಿಲ್ಲ. ಬಂಡವಾಳಶಾಹಿಗಳಿಗೆ ತೆರಿಗೆ ರಿಯಾಯಿತಿಗಳನ್ನು ನೀಡಿದಾಗ ಉಂಟಾಗುವ ವಿತ್ತೀಯ ಕೊರತೆಯನ್ನು ನೀಗಿಕೊಳ್ಳಲು ಕಾರ್ಮಿಕರ ಮೇಲೆ ತೆರಿಗೆ ವಿಧಿಸಲಾಗುತ್ತದೆ ಮತ್ತು ಈ ಕ್ರಮದ ಒಟ್ಟು ಪರಿಣಾಮವೆಂದರೆ, ಬಂಡವಾಳಗಾರರು ಹೆಚ್ಚು ಹೆಚ್ಚು ಲಾಭವನ್ನು ಜೇಬಿಗಿಳಿಸಿಕೊಳ್ಳುತ್ತಾರೆ. ಹಾಗಾಗಿ, ಈ ಸಿದ್ಧಾಂತದ ವಿಚಾರಶೂನ್ಯವಾಗಿದೆಯಷ್ಟೇ ಅಲ್ಲ, ಈ ಎರಡೂ ಪ್ರತಿಪಾದನೆಗಳನ್ನು ಬೆಂಬಲಿಸುವ ಪುರಾವೆಗಳೇ ಇಲ್ಲ.

ದುಡಿಮೆಗಾರರು ಟಿರುದ್ಯೋಗದ ಪರಿಸ್ಥಿತಿಯಲ್ಲೇ ಹೆಚ್ಚು ನೆಮ್ಮದಿಯಲ್ಲಿರುತ್ತಾರೆ ಎಂಬ ಅವರ ಇನ್ನೊಂದು ಹೇಳಿಕೆಯು ಕಾರ್ಮಿಕ ವರ್ಗದ ಕಲ್ಯಾಣಕ್ಕೆ ಸಂಬಂಧಿಸುತ್ತದೆ. ವಿಷಯವೆಂದರೆ, ಬಂಡವಾಳಶಾಹಿ ಸರ್ಕಾರಗಳು ಕಾರ್ಮಿಕರ ಕಲ್ಯಾಣದ ಬಗ್ಗೆ ತಲೆಕೆಡಿಸಿಕೊಳ್ಳುವುದೇ ಇಲ್ಲ. ಅದೂ ಅಲ್ಲದೆ, ದುಡಿಮೆಗಾರರು ನಿರುದ್ಯೋಗಕ್ಕಿಂತಲೂ ಹೆಚ್ಚು ಕಾಳಜಿಯನ್ನು ಹಣದುಬ್ಬರದ ಬಗ್ಗೆ ವಹಿಸುತ್ತಾರೆ ಎಂಬುದು ನಂಬಲರ್ಹವಲ್ಲ. ಏಕೆಂದರೆ, ನಿರುದ್ಯೋಗದ ಬಗ್ಗೆ ಅವರು ಹೊಂದಿರುವ ಭಯ–ಭೀತಿಗಳು ಅವರ ತಲೆಯ ಮೇಲೆ ನೇತಾಡುವ ಕತ್ತಿಯಂತೆ ಅವರನ್ನು ಸದಾ ಕಾಡುತ್ತವೆ. ಹಾಗಾಗಿ, ದುಡಿಮೆಗಾರರನ್ನು ಕಾಡುವ ಅಪಾರ ಅಭದ್ರತೆಯನ್ನು ಕೀಳಂದಾಜು ಮಾಡಲಾಗದು.

ಆದಾಗ್ಯೂ, ಈ ವಾದವನ್ನು ಕೆಲವು ಉದಾರವಾದಿ ಅರ್ಥಶಾಸ್ತ್ರಜ್ಞರು ಮಂಡಿಸಿದ್ದಾರೆ. ಬಂಡವಾಳಶಾಹಿ ಸರ್ಕಾರಗಳು ನಿರುದ್ಯೋಗದ ಇಳಿಕೆಗಿಂತಲೂ ಹೆಚ್ಚಿನ ಪ್ರಾಮುಖ್ಯತೆಯನ್ನು ಹಣದುಬ್ಬರವನ್ನು ನಿಯಂತ್ರಿಸಲು ಕೊಡುತ್ತವೆ ಮತ್ತು ಜನ ಸಾಮಾನ್ಯರ ಆದ್ಯತೆಯೂ ಅದೇ ಆಗಿರುತ್ತದೆ ಎಂಬುದನ್ನು ಬ್ರಿಟನ್ನಿನ ಮಾರ್ಗರೆಟ್ ಥ್ಯಾಚರ್ ಅವರ ಸರ್ಕಾರದ ಉದಾಹರಣೆಯ ಮೂಲಕ ವಿವರಿಸಲು ಜಾನ್ ಹಿಕ್ಸ್ ಎಂಬ ಒಬ್ಬ ಪ್ರಸಿದ್ಧ ಅರ್ಥಶಾಸ್ತ್ರಜ್ಞರು ಪ್ರಯತ್ನಿಸಿದ್ದಾರೆ. ಆದರೆ, ಅವರ ವಿವರಣೆಗಳು ಮತ್ತು ಸೈದ್ಧಾಂತಿಕ ಪರಿಕಲ್ಪನೆಗಳೂ ಸಹ, ಮನಗಾಣಿಸುವಂತಿಲ್ಲ.


ಬಂಡವಾಳಶಾಹಿ ಸರ್ಕಾರಗಳು ನಿರುದ್ಯೋಗಕ್ಕಿಂತಲೂ ಹೆಚ್ಚಾಗಿ ಹಣದುಬ್ಬರದ ಬಗ್ಗೆ ಹೆಚ್ಚು ಕಾಳಜಿ ಹೊಂದಿರುವುದು, ವಾಸ್ತವವಾಗಿ, ಸಮಕಾಲೀನ ಬಂಡವಾಳಶಾಹಿಯ ಮೇಲೆ ಹಣಕಾಸು ಬಂಡವಾಳವು ಹೊಂದಿರುವ ಪ್ರಾಬಲ್ಯವನ್ನು ಪ್ರತಿಬಿಂಬಿಸುತ್ತದೆ. ಬಂಡವಾಳಶಾಹಿ ಅರ್ಥವ್ಯವಸ್ಥೆಗಳಲ್ಲಿ ಇತ್ತೀಚಿನ ದಿನಗಳಲ್ಲಿ ಸಂಪತ್ತನ್ನು ಅಗಾಧ ಪ್ರಮಾಣದಲ್ಲಿ ಆರ್ಥಿಕ ಸ್ವತ್ತುಗಳ ರೂಪದಲ್ಲಿ ಇಟ್ಟುಕೊಳ್ಳಲಾಗುತ್ತಿದೆ. ಈ ಆರ್ಥಿಕ ಸ್ವತ್ತುಗಳು ಭೌತಿಕ ಸ್ವತ್ತುಗಳ ಮೇಲಿನ ಹಕ್ಕುಗಳ ಪ್ರತೀಕವಾಗಿದ್ದರೂ ಸಹ, ಆರ್ಥಿಕ ಸ್ವತ್ತುಗಳ ಬೆಲೆಗಳ ಏರಿಳಿತಗಳಿಗೂ ಮತ್ತು ಹಣದುಬ್ಬರ ಕಾರಣದಿಂದ ಏರಿಕೆಯಾಗುವ ಸರಕು–ಸೇವೆಗಳ ಬೆಲೆಗಳಿಗೂ ಸಂಬಂಧವಿಲ್ಲ ಮತ್ತು ಅವುಗಳ ನಡುವೆ ತಾಳ–ಮೇಳವೂ ಇಲ್ಲ. ಹಾಗಾಗಿ, ಸರಕುಗಳ ಬೆಲೆ ಏರಿಕೆಯು (ಹಣದುಬ್ಬರವು) ತಕ್ಷಣವೇ, ಆರ್ಥಿಕ ಸ್ವತ್ತುಗಳ ನಿಜ ಮೌಲ್ಯವನ್ನು ತಗ್ಗಿಸುತ್ತದೆ. ಆರ್ಥಿಕ ಸ್ವತ್ತುಗಳ ಬೆಲೆ ಹೆಚ್ಚಳದ ದರವು ಕಾಲಾನಂತರದಲ್ಲಿ ಸರಕು–ಸೇವೆಗಳ ಬೆಲೆ ಏರಿಕೆಯ ದರವನ್ನು ಮೀರಿದಾಗಲೂ ಆರ್ಥಿಕ ಸ್ವತ್ತುಗಳ ನಿಜ ಮೌಲ್ಯ ತಗ್ಗುತ್ತದೆ. ಹಾಗಾಗಿ, ಹಣಕಾಸು ಬಂಡವಾಳವು ಸರಕು–ಸೇವೆಗಳ ಹಣದುಬ್ಬರವನ್ನು(ಬೆಲೆ ಏರಿಕೆಯನ್ನು) ವಿರೋಧಿಸುತ್ತದೆ ಮತ್ತು ಅಂತಹ ಹಣದುಬ್ಬರವನ್ನು ಕಟ್ಟುನಿಟ್ಟಾದ ಕ್ರಮಗಳ ಮೂಲಕ ಅಂಕೆಯಲ್ಲಿಡಬಯಸುತ್ತದೆ. ಬಂಡವಾಳಶಾಹಿ ಸರ್ಕಾರಗಳು ಸಾಧಿಸಲು ಬಯಸುವುದು ಇದನ್ನೇ.

ಹಣದುಬ್ಬರವನ್ನು ನಿಯಂತ್ರಿಸುವ ಸಲುವಾಗಿ ನಿರುದ್ಯೋಗವನ್ನು ಹೆಚ್ಚಿಸುವ ನೀತಿಯು, ಅಧಿನಾಯಕ ವರ್ಗದ ಹಿತಾಸಕ್ತಿಗಳಿಗೆ ಬಂಡವಾಳಶಾಹಿ ಸರ್ಕಾರಗಳ ಲಜ್ಜೆಗೆಟ್ಟ ಅಧೀನತೆಯನ್ನು ಸ್ಪಷ್ಟವಾಗಿ ತೋರಿಸುತ್ತದೆ. ಮತ್ತು, ಮಾರ್ಗರೆಟ್ ಥ್ಯಾಚರ್ ಅವರಿಂದ ಹಿಡಿದು ಟೋನಿ ಬ್ಲೇರ್ ಅವರ ವರೆಗೆ ಅಧಿಕಾರಕ್ಕೆ ಬಂದ ಎಲ್ಲ ಬ್ರಿಟಿಷ್ ಸರ್ಕಾರಗಳೂ ಲಂಡನ್ ನಗರವನ್ನು ಯುರೋಪಿನ ಹಣಕಾಸು ರಾಜಧಾನಿಯಾಗಿ ಉಳಿಸಿಕೊಳ್ಳುವ ಬ್ರಿಟನ್ನಿನ ಮಹತ್ವಾಕಾಂಕ್ಷೆಯಿಂದಾಗಿ, ಹಣದುಬ್ಬರವನ್ನು ಎಷ್ಟುಸಾಧ್ಯವೋ ಅಷ್ಟು ಕೆಳ ಮಟ್ಟದಲ್ಲಿಡುವ ಬಗ್ಗೆ ಮುಚ್ಚುಮರೆ ಇಲ್ಲದೆ ಮಾತನಾಡುತ್ತಿದ್ದುದು ಆಶ್ಚರ್ಯಕರವಲ್ಲ.

ನಿರುದ್ಯೋಗವನ್ನು ಹೆಚ್ಚಿಸುವ ಹಣಕಾಸು ಬಂಡವಾಳದ ಈ ನೀತಿಯ ಬಗ್ಗೆ ಹೀಗೊಂದು ಪ್ರಶ್ನೆಯನ್ನು ಕೇಳಬಹುದು: ಹೆಚ್ಚಿನ ಮಟ್ಟದ ನಿರುದ್ಯೋಗದಿಂದಾಗಿ ಅರ್ಥವ್ಯವಸ್ಥೆಯಲ್ಲಿ ಸೃಷ್ಟಿಯಾಗುವ ಹೆಚ್ಚುವರಿ ಮೌಲ್ಯದ ಪ್ರಮಾಣವೂ ಸಣ್ಣದೇ ಇರುವಾಗ, ಅರ್ಥವ್ಯವಸ್ಥೆಯಲ್ಲಿ ಬಂಡವಾಳದ ಎಲ್ಲಾ ವಿಭಾಗಗಳಿಂದ ಸೃಷ್ಟಿಯಾದ ಹೆಚ್ಚುವರಿ ಮೌಲ್ಯದ ಮೊತ್ತದ ಇಳಿಕೆಯು ಹಣಕಾಸು ಬಂಡವಾಳದ ಆದಾಯವನ್ನು ಕಡಿಮೆ ಮಾಡುತ್ತದೆ. ಆದ್ದರಿಂದ, ಹಣಕಾಸು ಬಂಡವಾಳವು, ಹಣದುಬ್ಬರದ ಬಗ್ಗೆ ತೋರುವಷ್ಟೇ ಕಾಳಜಿಯನ್ನು ನಿರುದ್ಯೋಗದ ಬಗ್ಗೆಯೂ ಏಕೆ ತೋರಬಾರದು?

ಹಣಕಾಸು ಬಂಡವಾಳವು ಪ್ರಾಬಲ್ಯ ಹೊಂದಿರುವ ಇಂದಿನ ಯುಗದಲ್ಲಿ, ಬಂಡವಾಳಶಾಹಿ ಅರ್ಥವ್ಯವಸ್ಥೆಗಳಲ್ಲಿ, ಸರಕು–ಸೇವಾ ವಲಯಗಳ ಮತ್ತು ಹಣಕಾಸು ವಲಯಗಳ ನಡುವಿನ ಬೇರ್ಪಡಿಕೆಯನ್ನು ಒಂದು ಅಭೂತಪೂರ್ವ ಮಟ್ಟಕ್ಕೆ ಕೊಂಡೊಯ್ಯಲಾಗಿದೆ ಎಂಬ ಅಂಶದಲ್ಲಿ, ನಿರುದ್ಯೋಗದ ಬಗ್ಗೆ ಏಕೆ ಕಾಳಜಿ ತೋರುತ್ತಿಲ್ಲ ಎಂಬ ಪ್ರಶ್ನೆಗೆ ಉತ್ತರವಿದೆ. ಅಮೆರಿಕಾದಲ್ಲಿ ವಸತಿ ಗುಳ್ಳೆಯ ಕುಸಿತದ ನಂತರ, ಎಲ್ಲೆಡೆ ತಯಾರಿಕಾ–ಉತ್ಪಾದನಾ ವಲಯಗಳು ಸ್ಥಗಿತತೆಗೆ ಒಳಗಾಗಿರುವಾಗ ಮತ್ತು ಎಲ್ಲೆಡೆ ಸಾಮೂಹಿಕ ನಿರುದ್ಯೋಗವಿರುವಾಗ, ವಿಶ್ವಾದ್ಯಂತ ಶೇರು ಮಾರುಕಟ್ಟೆಗಳು ನಾಗಾಲೋಟದಲ್ಲಿ

ಪುಟ 14 ನೋಡಿ



ಶೇರು ಮಾರುಕಟ್ಟೆಯು ಉದ್ಯಮಗಳ ತಾಣವಲ್ಲ. ಜೂಜುಕೋರತನವು ಹುಲುಸಾಗಿ ಬೆಳೆಯುವ ಒಂದು ತಾಣ. ಈ ತಾಣದ ಉದ್ದೇಶವು ಉದ್ಯಮಗಳು ಸೃಷ್ಟಿಸುವ ಹೆಚ್ಚುವರಿ ಮೌಲ್ಯದ ಆದಾಯವಲ್ಲ. ಇಂದು ಕೊಂಡ ಒಂದು ಆರ್ಥಿಕ ಆಸ್ತಿಯನ್ನು ನಾಳೆ ಹೆಚ್ಚಿನ ಬೆಲೆಯಲ್ಲಿ ಮಾರಾಟ ಮಾಡಿ ಲಾಭಗಳಿಸುವ ಒಂದು ತಾಣ. ಈ ಜೂಜುಕೋರ ಮಾರಾಟಗಳ ಉದ್ದನೆಯ ಸಾಲಿನಲ್ಲಿ ಅನೇಕರು ಪಡೆದ ಲಾಭದ ಅಪಾರ ಮೊತ್ತವನ್ನು, ಅಂತಿಮವಾಗಿ, ಕೆಲವರು ಕಳೆದುಕೊಂಡಿರುತ್ತಾರೆ. ಶೇರು ಮಾರುಕಟ್ಟೆ ಕುಸಿದಾಗ ಸಿಕ್ಕಿಹಾಕಿಕೊಳ್ಳುವವರ ನಷ್ಟಗಳನ್ನು ಶೇರು ಮಾರುಕಟ್ಟೆಯಲ್ಲಿ ಭಾಗವಹಿಸುವವರು ಮಾತ್ರ ಹೊರುವುದಿಲ್ಲ. ಈ ನಷ್ಟವನ್ನು ಕನಿಷ್ಟ ಮೂರು ಮಾರ್ಗದಲ್ಲಿ ಸಮಾಜದ ಮೇಲೆ ಹೊರಿಸಲಾಗುತ್ತದೆ.

.......ನಿರುದ್ಯೋಗಕ್ಕಿಂತ ಹಣದುಬ್ಬರದ ಬಗ್ಗೆಯೇ ಏಕೆ ತಲೆಕೆಡಿಸಿಕೊಳ್ಳುತ್ತವೆ?

ಪುಟ 13 ರಿಂದ

ಸಾಗುತ್ತಿರುವ ವಿದ್ಯಮಾನವು ಈ ಬೇರ್ಪಡಿಕೆಯನ್ನು ಪ್ರತಿಬಿಂಬಿಸುತ್ತದೆ. ಮತ್ತು, ಹಣಕಾಸು ಬಂಡವಾಳವು ಹೆಚ್ಚುವರಿ ಮೌಲ್ಯಕ್ಕೆ ಮಾತ್ರ ಸೀಮಿತಗೊಂಡಿಲ್ಲ ಎಂಬುದೂ ಸಹ ಸ್ಪಷ್ಟವಾಗುತ್ತದೆ.

ಶೇರು ಮಾರುಕಟ್ಟೆಯು ಉದ್ಯಮಗಳ ತಾಣವಲ್ಲ. ಜೂಜುಕೋರತನವು ಹುಲುಸಾಗಿ ಬೆಳೆಯುವ ಒಂದು ತಾಣ. ಈ ತಾಣದ ಉದ್ದೇಶವು ಉದ್ಯಮಗಳು ಸೃಷ್ಟಿಸುವ ಹೆಚ್ಚುವರಿ ಮೌಲ್ಯದ ಆದಾಯವಲ್ಲ. ಆದರೆ, ಇಂದು ಕೊಂಡ ಒಂದು ಆರ್ಥಿಕ ಆಸ್ತಿಯನ್ನು ನಾಳೆ ಹೆಚ್ಚಿನ ಬೆಲೆಯಲ್ಲಿ ಮಾರಾಟಮಾಡಿ ಲಾಭಗಳಿಸುವ (capital gains) ಒಂದು ತಾಣ. ಇಲ್ಲೊಂದು ಪ್ರಶ್ನೆ ಉದ್ಭವವಾಗುತ್ತದೆ: ಆರ್ಥಿಕ ಆಸ್ತಿಯನ್ನು ಹೆಚ್ಚಿನ ಬೆಲೆಯಲ್ಲಿ ಮಾರಾಟ ಮಾಡಿದಾಗ ದೊರಕುವ ಲಾಭವು ಎಲ್ಲಿಂದ ಬರುತ್ತದೆ? ಆ ಲಾಭವು ಉತ್ಪಾದನೆಯ ಮೂಲಕ ಸೃಷ್ಟಿಯಾದ ಹೆಚ್ಚುವರಿ ಮೌಲ್ಯವಲ್ಲದಿದ್ದರೆ, ಅದು ಒಂದು ಕಲ್ಪನೆಯ ವ್ಯವಹಾರವಾಗುತ್ತದೆ. ಅಂತಹ ಸಂದರ್ಭದಲ್ಲಿ, ಒಬ್ಬ ಪಡೆದ ಲಾಭವು ಮತ್ತೊಬ್ಬನ ನಷ್ಟವೇ ಆಗಿರುತ್ತದೆ. ಹಾಗಾಗಿ, ಈ ಜೂಜುಕೋರ ಮಾರಾಟಗಳ ಉದ್ದನೆಯ ಸಾಲಿನಲ್ಲಿ ಅನೇಕರು ಪಡೆದ ಲಾಭದ ಅಪಾರ ಮೊತ್ತವನ್ನು, ಅಂತಿಮವಾಗಿ, ಕೆಲವರು ಕಳೆದುಕೊಂಡಿರುತ್ತಾರೆ.

ಶೇರು ಮಾರುಕಟ್ಟೆ ಕುಸಿದಾಗ ಸಿಕ್ಕಿಹಾಕಿಕೊಳ್ಳುವವರ ನಷ್ಟಗಳನ್ನು ಶೇರು ಮಾರುಕಟ್ಟೆಯಲ್ಲಿ ಭಾಗವಹಿಸುವವರು ಮಾತ್ರ ಹೊರುವುದಿಲ್ಲ. ಈ ನಷ್ಟವನ್ನು ಕನಿಷ್ಟ ಮೂರು ಮಾರ್ಗದಲ್ಲಿ ಸಮಾಜದ ಮೇಲೆ ಹೊರಿಸಲಾಗುತ್ತದೆ. ಮತ್ತು, ಅಂತಹ ಸಂದರ್ಭದಲ್ಲಿ ಮಾರುಕಟ್ಟೆಯಲ್ಲಿ ಭಾಗವಹಿಸುವ ಎಲ್ಲರೂ ಅದರ ಸಂಪೂರ್ಣ ಲಾಭಪಡೆಯುತ್ತಾರೆ. ಮೊದಲನೆಯದು, ಆರ್ಥಿಕ ಆಸ್ತಿಯು ಖರೀದಿಗಾಗಿ ಖರೀದಿದಾರನು ತನ್ನ ಜೇಬಿನಿಂದಲೇ ಹಣ ಹೊಂದಿಸಿಕೊಳ್ಳಬೇಕಾಗಿಲ್ಲ. ಹಣವನ್ನು ಸಾಲದ ಮೂಲಕ ಹೊಂದಿಸಿಕೊಳ್ಳಬಹುದು. ಆದರೆ, ಮಾರುಕಟ್ಟೆಯು ಕುಸಿದಾಗ, ಶೇರು ಖರೀದಿಗೆ ಹಣ ಒದಗಿಗಿಸಿದ ಸಾಲದಾತರು ಮೋಸಕ್ಕೊಳಗಾಗುತ್ತಾರೆ. ಎರಡನೆಯದು, ಅಂತಹ ಸಾಲಗಳನ್ನು ಒದಗಿಸಿದ ಹಣಕಾಸು ಸಂಸ್ಥೆಗಳ ರಕ್ಷಣೆಗಾಗಿ ತೆರಿಗೆದಾರರ ಹಣದ ಬಳಕೆಯಾಗುತ್ತದೆ. ಅಂದರೆ, ಈ ಪರಿಸ್ಥಿತಿಯಲ್ಲಿ ಮಾರುಕಟ್ಟೆಯು ಕುಸಿದಾಗ ಆರ್ಥಿಕ ಸ್ವತ್ತುಗಳನ್ನು ಹೊಂದಿರುವವರ ನಷ್ಟವನ್ನು ಸಾಮಾನ್ಯ ತೆರಿಗೆ ಪಾವತಿದಾರರೇ ಭರಿಸುತ್ತಾರೆ. ಮೂರನೆಯದು, ಸರ್ಕಾರದ ಇಂತಹ ಬೆಂಬಲವು ತೆರಿಗೆ ಆದಾಯದಿಂದಲ್ಲ, ಸರ್ಕಾರಿ ಸ್ವತ್ತುಗಳ ಮಾರಾಟದಿಂದ ಬರುತ್ತದೆ ಎಂಬುದು. ಅಂದರೆ, ಹೊಸ ಸ್ವತ್ತುಗಳ ಸೇರ್ಪಡೆಯ ಮೂಲಕ ಮಾರುಕಟ್ಟೆಯನ್ನು ಉಳಿಸಿಕೊಳ್ಳಲಾಗುತ್ತದೆ.

ಈ ಎಲ್ಲ ವಿದ್ಯಮಾನಗಳೂ ಮಾರ್ಕ್ಸ್ ಅವರು ಹೇಳಿದ್ದ ಬಂಡವಾಳದ ಆದಿಮ ಸಂಚಯದ ಉದಾಹರಣೆಗಳೇ. ಮೊದಲ ಎರಡು ಉದಾಹರಣಾ ಪ್ರಸಂಗಗಳಲ್ಲಿ ಪ್ರಯೋಜನ ದೊರಕಿಸುವ ಮೂಲವೆಂದರೆ, ಆಳುವ ವರ್ಗವನ್ನು ಶ್ರೀಮಂತಗೊಳಿಸುವ ಆದಿಮ ಸಂಗ್ರಹಣೆಗಾಗಿ ಜನರ ಹಿಂಡುವಿಕೆಯೇ ಮತ್ತು ಮೂರನೆಯ ಪ್ರಸಂಗದಲ್ಲಿ ಸಂಪತ್ತನ್ನು ಖಾಸಗಿಯವರ ಕೈಯಲ್ಲಿಡುವ ಇಡುವ ಹೊಸ ಸ್ವತ್ತುಗಳ ಉದಯವೇ.

ಈ ಅಂಶವನ್ನು ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ಸೃಷ್ಟಿಯಾಗುವ ಹೆಚ್ಚುವರಿ ಮೌಲ್ಯದ ಹೊರತಾಗಿಯೂ, ಶ್ರೀಮಂತ ಕುಳಗಳಿಗೆ ಅಧಿಕವಾಗಿ ಬರುವ ಆದಾಯದ ಮೂಲವೆಂದರೆ, ಬಂಡವಾಳದ ಆದಿಮ ಸಂಗ್ರಹಣೆಯೇ. ಆದ್ದರಿಂದ, ಈ ಶ್ರೀಮಂತ ಕುಳಗಳ ದೃಷ್ಟಿಯಲ್ಲಿ ಹಣದುಬ್ಬರಕ್ಕಿಂತಲೂ ನಿರುದ್ಯೋಗವೇ ಕಡಿಮೆ ಮಹತ್ವ ಪಡೆದಿದೆ. ಸರ್ಕಾರವೂ ಅದನ್ನೇ ಅನುಮೋದಿಸುತ್ತದೆ. ಹಾಗಾಗಿ, ನಿರುದ್ಯೋಗ ಸಮಸ್ಯೆಗಿಂತಲೂ ಹೆಚ್ಚಿನ ಆದ್ಯತೆಯನ್ನು ಹಣದುಬ್ಬರ ಪಡೆಯುತ್ತದೆ.

ಹರ್ಯಾಣ ಬಿಜೆಪಿ ಸರ್ಕಾರದಿಂದ ಆಶಾ ಕಾರ್ಯಕರ್ತೆಯರ ಮೇಲೆ ದಬ್ಬಾಳಿಕೆ, ಎಸ್ಮಾ ಪ್ರಯೋಗ, ಸಾಮೂಹಿಕ ಬಂಧನ: ಸಿಐಟಿಯು ಖಂಡನೆ

ಸಾಂಕ್ರಾಮಿಕ ನಿರ್ವಹಣೆಯಲ್ಲಿ ಶ್ರದ್ಧೆಯಿಂದ, ತಮ್ಮ ಜೀವ ಮತ್ತು ಸುರಕ್ಷತೆಯನ್ನು ಪಣಕ್ಕಿಟ್ಟು ಸೇವೆ ಮಾಡಿರುವ ಹರ್ಯಾಣದ ಆಶಾ ಕಾರ್ಯಕರ್ತೆಯರು ತಮ್ಮ ವೇತನ ಹೆಚ್ಚಳದ ಕುರಿತು ಸರ್ಕಾರ ಈಗಾಗಲೇ ಒಪ್ಪಿಕೊಂಡಿರುವ ಅಂಶಗಳ ಅನುಷ್ಠಾನ ಸೇರಿದಂತೆ ತಮ್ಮ ನ್ಯಾಯಯುತ ಬೇಡಿಕೆಗಳ ಮೇಲೆ ಕಳೆದ ಡಿಸೆಂಬರ್ ನಿಂದ ಹೋರಾಟದಲ್ಲಿದ್ದಾರೆ. ಸರಕಾರದ ದುರಹಂಕಾರೀ ಧೋರಣೆಯಿಂದ ಬೇಸತ್ತ ಅವರ ಸಂಘಟನೆ 17ನೇ ಫೆಬ್ರವರಿ 2022 ರಂದು ಒಂದು ದಿನದ ಮುಷ್ಕರಕ್ಕೆ ಕರೆ ನೀಡಿತ್ತು.



ತನ್ನ ಭರವಸೆಯನ್ನು ಕಾರ್ಯಗತಗೊಳಿಸುವ ಬದಲು, ಹರಿಯಾಣ ಸರ್ಕಾರವು 15 ಫೆಬ್ರವರಿ ಸಂಜೆ ಎಸ್ಮಾವನ್ನು ಅನ್ವಯಿಸಿತು. 16 ರ ಸಂಜೆಯಿಂದ ಹಲವಾರು ಜಿಲ್ಲೆಗಳಲ್ಲಿ ಸಿಐಟಿಯು ಮತ್ತು ಆಶಾ ಕಾರ್ಯಕರ್ತೆಯರ ಒಕ್ಕೂಟದ ನಾಯಕರ ಗೃಹಬಂಧನವನ್ನು ಪ್ರಾರಂಭಿಸಿತು. ಸಿಐಟಿಯು ರಾಜ್ಯಾಧ್ಯಕ್ಷೆ ಮತ್ತು ಆಶಾ ವರ್ಕರ್ಸ್ ಯೂನಿಯನ್ ಹರಿಯಾಣದ ಅಧ್ಯಕ್ಷೆ ಸುರೇಖಾ, ಆಶಾ ವರ್ಕರ್ಸ್ ಯೂನಿಯನ್ ಹರಿಯಾಣದ ಪ್ರಧಾನ ಕಾರ್ಯದರ್ಶಿ ಸುನೀತಾ, ಎಐಡಿಡಬ್ಲ್ಯುಎ ರಾಜ್ಯ ಪ್ರಧಾನ ಕಾರ್ಯದರ್ಶಿ ಸವಿತಾ ಮತ್ತು ಇತರ ನಾಯಕರನ್ನು ಫೆಬ್ರವರಿ 17 ರಂದು ಬೆಳಿಗ್ಗೆ ಕುರುಕ್ಷೇತ್ರದಲ್ಲಿ ಅಂಬಾಲಾಗೆ ಹೋಗುವ ಮಾರ್ಗದಲ್ಲಿ ಬಂಧಿಸಲಾಯಿತು, ಇದನ್ನು ಸಿಐಟಿಯು ಬಲವಾಗಿ ಖಂಡಿಸಿದೆ.

ಭಿವಾನಿ ಸೇರಿದಂತೆ ಹಲವು ಜಿಲ್ಲೆಗಳಲ್ಲಿ ಹಲವಾರು ಸಿಐಟಿಯು, ಎಸ್‌ಕೆಎಸ್ ಮತ್ತು ಆಶಾ ಯೂನಿಯನ್ ಮುಖಂಡರನ್ನು ಬಂಧಿಸಲಾಯಿತು. ವಾಹನಗಳನ್ನು ನಿಲ್ಲಿಸಲಾಯಿತು, ಆಶಾ ಕಾರ್ಯಕರ್ತೆಯರಿಗೆ ಕಿರುಕುಳ ನೀಡಲಾಯಿತು, ವಾಹನಗಳ ಚಾಲಕರನ್ನೂ ಸಹ ಬಿಡಲಿಲ್ಲ, ಅವರನ್ನು ಅಮಾನುಷವಾಗಿ ಥಳಿಸಲಾಗಿದೆ. ಕಾರ್ಮಿಕರು ಎಲ್ಲಿ ನಿಲ್ಲಿಸಿದರೂ ರಸ್ತೆಯಲ್ಲೇ ಕುಳಿತು ಪ್ರತಿಭಟನೆ ಆರಂಭಿಸಿದರು. ಎಲ್ಲಾ ಹಲ್ಲೆಗಳು, ಬಂಧನಗಳು, ಬೆದರಿಕೆಗಳನ್ನು ಎದುರಿಸುತ್ತಿರುವ ವೀರ ಆಶಾ ಕಾರ್ಯಕರ್ತರು ಬಿಜೆಪಿ ರಾಜ್ಯ ಸರ್ಕಾರದ ಸರ್ವಾಧಿಕಾರಿ ತಂತ್ರದ ವಿರುದ್ಧ ತಮ್ಮ ಪ್ರತಿಭಟನೆಯನ್ನು ಗುರುತಿಸಲು ಪ್ರತಿ ಜಿಲ್ಲೆಯಲ್ಲೂ ಹೆಚ್ಚಿನ ಸಂಖ್ಯೆಯಲ್ಲಿ ಬೀದಿಗಿಳಿದಿದ್ದಾರೆ ಎಂದು ಸಿಐಟಿಯು ಹೇಳಿದೆ.

ಕೇಂದ್ರ ಸರ್ಕಾರದ ವೇತನ ಹೆಚ್ಚಳ ಮತ್ತು 2018 ರಲ್ಲಿ ಮುಖ್ಯಮಂತ್ರಿಗಳು ವಿಧಾನಸಭೆಯಲ್ಲಿ ಮಾಡಿದ ವೇತನ ಹೆಚ್ಚಳದ ಘೋಷಣೆಯ ಅನುಷ್ಠಾನಕ್ಕಾಗಿ 2022 ರ ಡಿಸೆಂಬರ್ 8 ರಿಂದ ಸಂಘಗಳ ಜಂಟಿ ಸಮನ್ವಯ ಸಮಿತಿ ಅಡಿಯಲ್ಲಿ ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕರು ಹೋರಾಟ ನಡೆಸುತ್ತಿದ್ದಾರೆ.

ಸಿಐಟಿಯು ಇಂತಹ ದಮನ ಕ್ರಮಗಳನ್ನು ಖಂಡಿಸುತ್ತ ಹರ್ಯಾಣ ಸರ್ಕಾರವು ಬೇಷರತ್ತಾಗಿ ಕರಾಳ ಎಸ್ಮಾವನ್ನು ಹಿಂತೆಗೆದುಕೊಳ್ಳಬೇಕು, ಬಂಧಿತ ನಾಯಕರು ಮತ್ತು ಕಾರ್ಮಿಕರನ್ನು ತಕ್ಷಣವೇ ಬಿಡುಗಡೆ ಮಾಡಬೇಕು ಮತ್ತು ಆಶಾ ಮತ್ತು ಅಂಗನವಾಡಿ ಒಕ್ಕೂಟಗಳೊಂದಿಗೆ ಮಾಡಿಕೊಂಡಿರುವ ಒಪ್ಪಂದವನ್ನು ಜಾರಿಗೆ ತರುವಂತೆ ಹರಿಯಾಣ ಸರ್ಕಾರವನ್ನು ಒತ್ತಾಯಿಸಿದೆ.

ಖಾಸಗೀಕರಣದ ವಿರುದ್ಧ ಚಂಡೀಗಢದ ವಿದ್ಯುತ್ ನೌಕರರ ಹೋರಾಟ– 72 ಗಂಟೆಗಳ ಮುಷ್ಕರಕ್ಕೆ ಸಿದ್ಧತೆ: ಸಿಐಟಿಯು ಬೆಂಬಲ

ಚಂಡೀಗಢ ಕೇಂದ್ರಾಡಳಿತ ಪ್ರದೇಶದ ವಿದ್ಯುತ್ ಇಲಾಖೆಯನ್ನು ಖಾಸಗೀಕರಣಗೊಳಿಸಲು ಕೇಂದ್ರ ಸರಕಾರ ನಿರ್ಧರಿಸಿದೆ. ಇದು ಈ ನಗರದ ಮತ್ತು ಉಪನಗರಗಳ ಜನರಿಗೆ ಅಗ್ಗದಲ್ಲಿ, ದಕ್ಷತೆಯಿಂದ ವಿದ್ಯುತ್ ಪೂರೈಕೆ ಮಾಡುತ್ತಿರುವ ವ್ಯವಸ್ಥೆಯಾಗಿದೆ, ಅಲ್ಲದೆ ಲಾಭ ಮಾಡುತ್ತಿರುವ ಸಂಸ್ಥೆಯಾಗಿದೆ.

ನ್ಯಾಯಾಂಗದ ಆದೇಶವನ್ನು ಸಂಪೂರ್ಣವಾಗಿ ಧಿಕ್ಕರಿಸಿ, ನಗರ ವಿದ್ಯುತ್ ಇಲಾಖೆಯನ್ನು ಒಂದು ಕಂಪನಿಯಾಗಿ ಮಾಡಿ ಅದರ ಶೇರನ್ನು ಕೋಲ್ಕತ್ತಾ ಮೂಲದ ಆರ್‌ಪಿ–ಸಂಜೀವ್ ಗೋಯೆಂಕಾ (ಆರ್‌ಪಿಎಸ್‌ಜಿ) ಗುಂಪಿನ ಎಮಿನೆಂಟ್ ಎಲೆಕ್ಟ್ರಿಸಿಟಿ ಡಿಸ್ಟ್ರಿಬ್ಯೂಷನ್ (ಇಇಡಿ) ಕಂಪನಿಗೆ ವರ್ಗಾಯಿಸಲಾಗುತ್ತದೆ. 1,000 ಕೋಟಿ ರೂ. ಗಿಂತ ಹೆಚ್ಚು ವಾರ್ಷಿಕ ವಹಿವಾಟು ಹೊಂದಿರುವ, 20,000– ರೂ.25,000 ಕೋಟಿ ಮೌಲ್ಯದ ಆಸ್ತಿ ಇರುವಇಲಾಖೆಯನ್ನು ಸ್ವಾಧೀನಪಡಿಸಿಕೊಳ್ಳಲು ರೂ.871 ಕೋಟಿಗಳ 'ಅತಿ ಹೆಚ್ಚು ಬಿಡ್'ನ್ನು ಈ ಗುಂಪು ಕೊಟ್ಟಿದೆ ಎನ್ನಲಾಗಿದೆ. ಸಾರ್ವಜನಿಕ ಆಸ್ತಿಗಳ ಇಂತಹ ಹಗಲು ದರೋಡೆಯನ್ನುನ್ಯಾಂಯಸಮ್ಮತಗೊಳಿಸುವ ಸಲುವಾಗಿ, ಭೂಮಿ ಮತ್ತು ಸ್ಥಿರ ಆಸ್ತಿಗಳ ಮೌಲ್ಯಮಾಪನವನ್ನು ವಾರ್ಷಿಕವಾಗಿ ರೂ.1/– ನಿಗದಿಪಡಿಸಲಾಗಿದೆ.

ಖಾಸಗೀಕರಣದ ನಿರ್ಧಾರವನ್ನು 2020 ರಲ್ಲಿ ತೆಗೆದುಕೊಳ್ಳಲಾಗಿದ್ದರೂ, ಯುಟಿ ಪವರ್‌ಮೆನ್ ಯೂನಿಯನ್ ಚಂಡೀಗಢದ ಬ್ಯಾನರ್‌ನಡಿಯಲ್ಲಿ ವಿದ್ಯುತ್ ನೌಕರರು ನ್ಯಾಯಾಲಯದ ಒಳಗೆ ಮತ್ತು ಹೊರಗೆ.ನಡೆಸಿದ ತೀವ್ರ ಆಂದೋಲನದಿಂದ ಅದು ಇಲ್ಲಿಯವರೆಗೆ ಸ್ಥಗಿತಗೊಂಡಿದೆ.

2021ರ ಸೆಪ್ಟೆಂಬರ್‌ನಲ್ಲಿ ಕೇಂದ್ರ ಗೃಹ ಸಚಿವಾಲಯವು ಈ ಮಹತ್ವದ ಸರ್ಕಾರಿ ಇಲಾಖೆಯನ್ನು ಖಾಸಗಿಯವರಿಗೆ ಮಾರಾಟ ಮಾಡುವ ಅಂತಿಮ ನಿರ್ಧಾರವನ್ನು ತೆಗೆದುಕೊಂಡಾಗ, ತಕ್ಷಣವೇ ಚಂಡೀಗಢದ ವಿದ್ಯುತ್ ನೌಕರರು ಅಕ್ಟೋಬರ್, 2021 ರಿಂದ ಹಲವಾರು ಮುಷ್ಕರಗಳನ್ನು ನಡೆಸಿದರು. ನಂತರ ಮತ್ತೆ 1ನೇ ಫೆಬ್ರವರಿ 2022 ರಂದು ಒಂದು ದಿನದ ಮುಷ್ಕರ ನಡೆಸಿದರು. ಜಮ್ಮು –ಕಾಶ್ಮೀರ, ಹಿಮಾಚಲ ಪ್ರದೇಶ, ಹರಿಯಾಣ ಮತ್ತು ಪಂಜಾಬ್‌ನ ಪಕ್ಕದ ರಾಜ್ಯಗಳ ವಿದ್ಯುತ್ ನೌಕರರು ಬೆಂಬಲ ವ್ಯಕ್ತಪಡಿಸಿದರು. ವಿದ್ಯುತ್ ವಲಯದ ನೌಕರರು ಮತ್ತು ಇಂಜಿನಿಯರ್‌ಗಳ ಸಂಘಟನೆಗಳ ರಾಷ್ಟ್ರೀಯ ನಾಯಕರು ವಿದ್ಯುತ್ ನೌಕರರು ಮತ್ತು ಎಂಜಿನಿಯರ್‌ಗಳ ರಾಷ್ಟ್ರೀಯ ಸಮನ್ವಯ ಸಮಿತಿಯ ವಿಶಾಲ ವೇದಿಕೆಯನ್ನು ಪ್ರತಿನಿಧಿಸುವ ಮುಖಂಡರು ಭಾಗವಹಿಸಿದರು. ಮತ್ತೊಮ್ಮೆ, 15 ಫೆಬ್ರವರಿ 2022 ರಂದು ಇಡೀ ಚಂಡೀಗಢ ನಾಗರಿಕ ಸಮಾಜ– ನಿವಾಸಿ ಸಂಘಗಳು ಮತ್ತು ಗ್ರಾಮೀಣ ಪ್ರದೇಶದ ರೈತರು ಸೇರಿದಂತೆ ಸಾಮಾನ್ಯ ಜನರು ಟ್ರೇಡ್ ಯೂನಿಯನ್‌ಗಳು ಮತ್ತು ರಾಜಕೀಯ ಪಕ್ಷಗಳೊಂದಿಗೆ ದೊಡ್ಡ ಪ್ರಮಾಣದಲ್ಲಿ ಸಜ್ಜುಗೊಂಡರು – ಈ ವಿನಾಶಕಾರಿ ದೇಶ–ವಿರೋಧಿ ಕ್ರಮದ ವಿರುದ್ಧ ಬೃಹತ್ ಧರಣಿ ನಡೆಸಿದರು. ಈಗ ಯುಟಿ ಪವರ್‌ಮೆನ್ ಯೂನಿಯನ್ ಚಂಡೀಗಢವು 72 ಗಂಟೆಗಳ ಮುಷ್ಕರವನ್ನು ಘೋಷಿಸಿದೆ– ಫೆಬ್ರವರಿ ಲಾಭ ಗಳಿಸುವ ಸಾರ್ವಜನಿಕ ಘಟಕವನ್ನು ಖಾಸಗಿಗೆ ವರ್ಗಾಯಿಸುವ ಈ ದೇಶ ವಿರೋಧಿ ಕ್ರಮದ ವಿರುದ್ಧ 22 ರಿಂದ 24 ರವರೆಗೆ ಮೂರು ದಿನಗಳ ಮುಷ್ಕರ ನಡೆಸಲಿದ್ದಾರೆ. ಖಾಸಗೀಕರಣವನ್ನು ನಿಲ್ಲಿಸುವ ಬೇಡಿಕೆಯನ್ನು ಒಪ್ಪಿಕೊಳ್ಳದಿದ್ದರೆ, ಈ 72 ಗಂಟೆಗಳ ಮುಷ್ಕರವನ್ನು ಅನಿರ್ದಿಷ್ಟಾವಧಿ ಮುಷ್ಕರವನ್ನಾಗಿ ಪರಿವರ್ತಿಸಲಾಗುವುದು ಎಂದು ಯುಟಿ ಪವರ್‌ಮೆನ್ ಯೂನಿಯನ್ ಚಂಡೀಗಢ ಘೋಷಿಸಿದೆ.

ಕೇಂದ್ರಾಡಳಿತ ಪ್ರದೇಶಗಳಾದ ಜಮ್ಮು ಮತ್ತು ಕಾಶ್ಮೀರ ಮತ್ತು ಪಾಂಡಿಚೇರಿಯಲ್ಲಿಯೂ ವಿದ್ಯುತ್ ಸೌಲಭ್ಯಗಳ ಖಾಸಗೀಕರಣದ ಇಂತಹ ಕ್ರಮದ ಬಗ್ಗೆ ಕೇಂದ್ರ ಸರ್ಕಾರವು ಯೋಚಿಸಿದಾಗ, ಸಾರ್ವಜನಿಕ ಬೆಂಬಲದೊಂದಿಗೆ ವಿದ್ಯುತ್ ನೌಕರರು ಮತ್ತು ಇಂಜಿನಿಯರ್‌ಗಳ ಐಕ್ಯ ಜಂಟಿ ಚಳವಳಿಯಿಂದ ಅದನ್ನು ಸೋಲಿಸಲಾಯಿತು. ಇದರಿಂದಲೂ ಯಾವುದೇ ಪಾಠ ಕಲಿಯದೆ, ನಿರಂಕುಶ ಆಡಳಿತವು ಖಾಸಗಿ ಕಾರ್ಪೊರೇಟ್‌ಗೆ ತನ್ನ ನಿಷ್ಠೆಯನ್ನು ಪ್ರದರ್ಶಿಸಲು ಅದೇ ಮಾರ್ಗವನ್ನು ಅನುಸರಿಸುತ್ತಿದೆ ಎಂದು ಸಿಐಟಿಯು ಖೇದ ವ್ಯಕ್ತಪಡಿಸಿದೆ. ಮತ್ತು ಈ ಹೋರಾಟಕ್ಕೆ ಬೆಂಬಲ ಮತ್ತು ಸೌಹಾರ್ದವನ್ನು ವ್ಯಕ್ತಪಡಿಸಿದೆ.

ಸಂಘ ಸಂಸ್ಥೆಗಳಿಗೆ ಜಮೀನು: ಕೃಷಿ ಕೂಲಿಕಾರರ ಆಕ್ಷೇಪ..... ಪುಟ 16 ರಿಂದ

ರಂದು ರಾಜ್ಯಾದ್ಯಂತ ಪ್ರತಿಭಟನೆ ಮಾಡಿದ್ದಾರೆ.

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ ರಾಜ್ಯ ಸರ್ಕಾರ ಗೋಮಾಳ, ಹುಲ್ಲುಬನಿ, ಗಾಯರಾಣ, ಸೊಪ್ಪಿನಬೆಟ್ಟ ಮೊದಲಾದ ಗ್ರಾಮೀಣ ಪ್ರದೇಶದ ಸರ್ಕಾರಿ ಜಮೀನುಗಳನ್ನು ಖಾಸಗಿ ಸಂಘ ಸಂಸ್ಥೆಗಳಿಗೆ ಮಂಜೂರು ಮಾಡಲು ಮುಂದಾಗಿದೆ ಎಂಬ ಆಘಾತಕಾರಿ ಸುದ್ದಿ ವ್ಯಾಪಿಸತೊಡಗಿದೆ. ಈ ಉದ್ದೇಶಕ್ಕಾಗಿ ಕಂದಾಯ ಸಚಿವ ಆರ್. ಅಶೋಕ್‌ರವರು ಅಧ್ಯಕ್ಷರಾಗಿರುವ ಒಂದು ಉಪಸಮಿತಿಯನ್ನು ರಚಿಸಲಾಗುತ್ತಿದ್ದು ಸಚಿವರುಗಳಾದ ಮಾಧುಸ್ವಾಮಿ, ಅರಗ ಜ್ಞಾನೇಂದ್ರ, ಪ್ರಭು ಚೌವಾಣ್, ಬಿ.ಸಿ. ಪಾಟೀಲ್ ಮತ್ತು ಬಿ.ಎ. ಬಸವರಾಜ ಸಮಿತಿಯ ಸದಸ್ಯರುಗಳಾಗಿದ್ದಾರೆ ಎನ್ನಾಲಾಗಿದೆ.

ಸದರಿ ಭೂಮಿಯನ್ನು ಸಂಘ ಸಂಸ್ಥೆಗಳಿಗೆ ನೀಡುವ ನೆಪದಲ್ಲಿ 20 ಲಕ್ಷ ಎಕರೆ ಭೂಮಿಯನ್ನು ಸಂಘ ಪರಿವಾರದ ಹಿನ್ನೆಲೆಯ ಶೈಕ್ಷಣಿಕ ಮೊದಲಾದ ಸಂಸ್ಥೆಗಳಿಗೆ ಮಂಜೂರು ಮಾಡಲು ಸರ್ಕಾರ ಮುಂದಾಗಿದೆ. ಸರಕಾರದ ಈ ಉದ್ದೇಶದಿಂದಾಗಿ 25 ಲಕ್ಷಕ್ಕೂ ಹೆಚ್ಚು ಬಗರ್ ಹುಕ್ಕುಂ ಸಾಗುವಳಿದಾರ ಬಡವರಿಗೆ ಅನ್ಯಾಯವಾಗಲಿದೆ. ಇವರು ಕಳೆದ ಹತ್ತಿಪ್ಪತ್ತು ವರ್ಷಗಳಿಂದ ನಮೂನೆ 50, 53 ಮತ್ತು 57 ರಲ್ಲಿ ಅರ್ಜಿಹಾಕಿಕೊಂಡು ಸಾಗುವಳಿ ಮಾಡುತ್ತಾ ಮಂಜೂರಾತಿಗಾಗಿ ಕಾಯುತ್ತಾ ಇದ್ದಾರೆ. ಇನ್ನೂ ಬಹಳಷ್ಟು ಸ್ವಂತ ಮನೆ ಇಲ್ಲದ ಬಡವರು ಸರ್ಕಾರಿ ಜಾಗೆಯಲ್ಲಿ ಮನೆ ಅಥವ ಗುಡಿಸಲುಗಳನ್ನು ನಿರ್ಮಿಸಿಕೊಂಡು ನಮೂನೆ 94ಸಿ (ಗ್ರಾಮೀಣ) ಮತ್ತು 94ಸಿಸಿ (ನಗರ) ಅಡಿಯಲ್ಲಿ ಹಕ್ಕು ಪತ್ರಕ್ಕಾಗಿ ಕಾಯುತ್ತಿದ್ದಾರೆ. ಇಂತಹ ಅರ್ಹರಿಗೆ ಭೂಮಿಯನ್ನು ನೀಡುವ ಬದಲಾಗಿ ಬೊಮ್ಮಾಯಿ ಸರ್ಕಾರ ಸಂಘ ಸಂಸ್ಥೆಗಳಿಗೆ ನೀಡಲು ಮುಂದಾಗಿರುವುದು ಅತ್ಯಂತ ಆಕ್ಷೇಪಾರ್ಹವಾಗಿದೆ. ಈಗಾಗಲೇ ಸಾವಿರಾರು ಎಕರೆ ಭೂಮಿಯನ್ನು ಕಾರ್ಪೊರೇಟ್ ಕಂಪೆನಿಗಳಿಗೆ ನೀಡಲಾಗಿದೆ.





ಆದ್ದರಿಂದ ಸರ್ಕಾರ ಈ ಅನ್ಯಾಯದ ಕ್ರಮವನ್ನು ಹಿಂಪಡೆದು, ಸಂಘ ಸಂಸ್ಥೆಗಳ ಬದಲಾಗಿ ಸ್ವಂತ ಭೂಮಿ ಇಲ್ಲದ/ ಮನೆ ನಿವೇಶನ ಇಲ್ಲದವರಿಗೆ ಒದಗಿಸಬೇಕೆಂದು ಒತ್ತಾಯಿಸಿ ಫೆಬ್ರುವರಿ 15 ರಂದು ರಾಜ್ಯದಾದ್ಯಂತ ಕೃಷಿ ಕೂಲಿಕಾರರು ಪ್ರತಿಭಟನೆಗಳನ್ನು ನಡೆಸಿದ್ದಾರೆ. ಮಂಡ್ಯ ಜಿಲ್ಲಾಧಿಕಾರಿಗಳ ಕಚೇರಿ ಎದುರು ನಡೆದ 2 ದಿನಗಳ ಹಗಲು ರಾತ್ರಿ ಪ್ರತಿಭಟನೆ ಜಿಲ್ಲಾಧಿಕಾರಿಗಳ ಭರವಸೆಯೊಂದಿಗೆ ಯಶಸ್ವಿಯಾಗಿ ನಡೆದಿದೆ. ಸಂಗಾತಿ ಎಂ. ಪುಟ್ಟಮಾದು, ಬಿ. ಹನುಮೇಶ್, ಕೆ. ಹನುಮೇಗೌಡ ಮೊದಲಾದವರು ನೇತೃತ್ವ ವಹಿಸಿದ್ದರು. 500 ಕ್ಕೂ ಹೆಚ್ಚು ಜನ ಕೂಲಿಕಾರರು ಭಾಗವಹಿಸಿದ್ದರು. ಕೊಪ್ಪಳದಲ್ಲಿ ಫೆಬ್ರುವರಿ 15 ರಂದು ಎಂ. ಬಸವರಾಜ, ಸುಂಕಪ್ಪ ಗದಗ ನೇತೃತ್ವದಲ್ಲಿ ನಡೆದ ಪ್ರತಿಭಟನೆಯಲ್ಲಿ 35 ಜನ ಹಾಗೂ ಶರಣಪ್ಪ ಇಟಗಿ ನೇತೃತ್ವದಲ್ಲಿ ಕಾರಟಗಿಯಲ್ಲಿ ನಡೆದ ಪ್ರತಿಭಟನೆಯಲ್ಲಿ 40 ಮಂದಿ ಕೂಲಿಕಾರರು ಭಾಗವಹಿಸಿದ್ದಾರೆ.

ಸಿಂಧನೂರಿನಲ್ಲಿ ವಿರೇಶ್ ಸೋಮಲಾಪುರ, ವಿರೇಶ ಕುರಕುಂದ ನೇತೃತ್ವದಲ್ಲಿ 25, ಕಲಬುರಗಿಯಲ್ಲಿ ಭೀಮಶೆಟ್ಟಿ ಯಂಪಳ್ಳಿ, ಚಂದ್ರಪ್ಪ ಪೂಜಾರಿ, ಮೇಘರಾಜ, ಜಗದೇವಿ ಚಂದನಕೇರಾ ಮುಖಂಡತ್ವದಲ್ಲಿ 15 ಮಂದಿ, ಮಳವಳ್ಳಿಯಲ್ಲಿ 200 ಮಂದಿ, ಮುಂಡಗೋಡ್‌ನಲ್ಲಿ ಭೀಮಣ್ಣ ಭೋವಿ ನೇತೃತ್ವದಲ್ಲಿ 15 ಮಂದಿ, ಬೈಂದೂರುನಲ್ಲಿ ವೆಂಕಟೇಶ್ ಕೋಣಿ ಹಾಗೂ ಕುಂದಾಪುರದಲ್ಲಿ 15 ಮಂದಿ ಭಾಗವಹಿಸಿದ್ದರು. ಪ್ರತಿಯೊಂದು ಕಡೆಯಲ್ಲಿಯೂ ವಿವರವಾದ ಮನವಿ ಪತ್ರಗಳನ್ನು ತಹಶಿಲ್ದಾರರ ಅಥವ ಜಿಲ್ಲಾಧಿಕಾರಿಗಳ ಮೂಲಕ ಮುಖ್ಯಮಂತ್ರಿಗೆ ಸಲ್ಲಿಸಲಾಯಿತು. ಕೃಷಿ ಭೂಮಿಗಾಗಿ, ಮನೆ ನಿವೇಶನಗಳಿಗಾಗಿ ಹೋರಾಟವನ್ನು ಮುಂದಿನ ದಿನಗಳಲ್ಲಿ ತೀವ್ರಗೊಳಿಸಲು ನಿರ್ಧರಿಸಲಾಗಿದೆ.

ಚಂದ್ರಪ್ಪ ಹೊಸ್ಕೇರಾ





ಬಜೆಟ್ ವಿರೋಧಿಸಿ ಕೃಷಿಕೂಲಿಕಾರರ ಪ್ರತಿಭಟನೆ



ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿ, ಕನಿಷ್ಟ ನೂರು ದಿನ ಉದ್ಯೋಗ ನೀಡಲು ರೂಪಾಯಿ 2.64 ಲಕ್ಷ ಕೋಟಿ ಹಣ ಈ ವರ್ಷದ ಬಜೆಟ್ ನಲ್ಲಿ ತೆಗೆದಿರಿಸಬೇಕಾಗಿತ್ತು. ಆದರೆ ಕೇಂದ್ರ ಸರ್ಕಾರ ಇಟ್ಟಿದ್ದು ಕೇವಲ ರೂಪಾಯಿ 73,000 ಕೋಟಿ. ಬಜೆಟ್ ನಲ್ಲಿ ನರೇಗಾ ಯೋಜನೆಗೆ ನಿರಂತರ ಅನುದಾನ ಕಡಿತ ಮಾಡುತ್ತಿರುವುದರಿಂದ ಕೂಲಿಕಾರರು ಊರು ತೊರೆದು ನಗರ ಪ್ರದೇಶಕ್ಕೆ ವಲಸೆ ಹೋಗುವ ಸನ್ನಿವೇಶ ನಿರ್ಮಾಣವಾಗುತ್ತಿದೆ.

ಒಮ್ಮೆ ಕೆಲಸ ಪಡೆದು ಕೊಂಡವರು ಮತ್ತೊಮ್ಮೆ ಅರ್ಜಿ ಕೊಟ್ಟರೆ ಪಂಚಾಯತ್ ನವರ ಹುಬ್ಬು ಮೇಲೆರುತ್ತದೆ. ಕೆಲಸಕ್ಕಾಗಿ ತಿಂಗಳಾನುಗಟ್ಟಲೆ ಕಾಯಬೇಕು ಎಂದು ಅಖಿಲ ಭಾರತ ಕೃಷಿಕೂಲಿಕಾರರ ಸಂಘ(AIAWU)ದ ಉಡುಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ವೆಂಕಟೇಶ್ ಕೋಣಿ ಆತಂಕ ವ್ಯಕ್ತಪಡಿಸಿದರು.

ಬೈಂದೂರು ತಾಲುಕು ಕೆರ್ಗಾಲ್ ಗ್ರಾಮದ ಉದ್ಯೋಗ ಖಾತ್ರಿ ಕೆಲಸಗಾರರ ಪ್ರತಿಭಟನಾ ಸಭೆಯನ್ನುದ್ದೇಶಿಸಿ ಮಾತನಾಡಿದರು.

ಬೈಂದೂರು ತಾಲೂಕು ಡಿವೈಎಫ್ಐ ಮುಖಂಡರಾದ ಹರೀಶ್ ಬೈಂದೂರು ಹೋರಾಟ ಬೆಂಬಲಿಸಿ ಮಾತನಾಡಿದರು. ಬಿಜೂರು ಗ್ರಾಮದ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಸಂಘದ ಮಂಜುನಾಥ ದೇವಾಡಿಗ ಇವರು ಉಪಸ್ಥಿತರಿದ್ದರು.

ಕೆಂಪು ಪುಸ್ತಕ ದಿನ 2022 ಆಚರಣೆಗೆ ಕರೆ..... ಪುಟ 16 ರಿಂದ

ಏರ್ಪಡಿಸಿದೆ. ಸ್ಪರ್ಧೆಯ ಆಯ್ದ ಕಲಾಕೃತಿಗಳ ಆನ್–ಲೈನ್ ಪ್ರದರ್ಶನವನ್ನು ಫೆ. 21 ರಂದು ಏರ್ಪಡಿಸಲಾಗಿದೆ.

ಮಾರ್ಕ್ಸ್‌ವಾದದ ಮೇಲೆ, ಎಡ ಪ್ರಜಾಸತ್ತಾತ್ಮಕ ಶಕ್ತಿಗಳ ಮೇಲೆ ಜಗತ್ತಿನಾದ್ಯಂತ ಸೈದ್ಧಾಂತಿಕ ದಾಳಿ (ಎರಡು ದೇಶಗಳಲ್ಲಿ ಮಾರ್ಕ್ಸ್ ವಾದ ವನ್ನು ನಿಷೇಧಿಸಲಾಗಿದೆಯಂತೆ) ತೀವ್ರವಾಗುತ್ತಿರುವ ಈ ಸಂದರ್ಭದಲ್ಲಿ, "ಕೆಂಪು ಪುಸ್ತಕ ದಿನ"ವನ್ನು ಮೇ ದಿನಾಚರಣೆಯಂತೆ ಜಾಗತಿಕವಾಗಿ ಎಡ ಶಕ್ತಿಗಳ ಸಾರ್ವತ್ರಿಕ ದಿನವನ್ನಾಗಿ ಆಚರಿಸಿ ಸ್ಥಾಪಿಸುವ ಅಗತ್ಯವಿದೆ. ಸಿಪಿಐ(ಎಂ) ಪೊಲಿಟ್‌ಬ್ಯುರೊ 'ಕೆಂಪು ಪುಸ್ತಕ ದಿನ'ವನ್ನು ಫೆ.21, 2022 ರಂದು ಆಚರಿಸಲು ತನ್ನ ಘಟಕಗಳಿಗೆ ಕರೆ ಕೊಟ್ಟಿದೆ

ಕರ್ನಾಟಕದಲ್ಲಿ 'ಕೆಂಪು ಪುಸ್ತಕ ದಿನ –2022' ಆಚರಣೆಯ ಭಾಗವಾಗಿ ಈ ಕಾರ್ಯಕ್ರಮಗಳನ್ನು ಯಶಸ್ವಿಗೊಳಿಸಲು ಸಿಪಿಐ(ಎಂ) ರಾಜ್ಯ ಸಮಿತಿ ಕರೆ ಕೊಟ್ಟಿದೆ.

1. ಫೆ.14–21"ನಾನು_ಕಮ್ಯುನಿಸ್ಟ್‌ಪ್ರಣಾಳಿಕೆಓದಿದ್ದು" ಫೇಸ್ ಬುಕ್ ಚಲೇಂಜ್ ಪ್ರಚಾರಾಂದೋಲನ **#RedBooksDay2022** ಮತ್ತು #**ನಾನು_ಕಮ್ಯುನಿಸ್ಟ್_ಪ್ರಣಾಳಿಕೆ_ಓದಿದ್ದು** ಹ್ಯಾಶ್ ಟ್ಯಾಗ್ ನೊಂದಿಗೆ
2. ಫೆ. 21 ರಂದು ರಾಜ್ಯ ಮಟ್ಟ ದ ಆನ್ ಲೈನ್ ಸಭೆ

* ಉಪನ್ಯಾಸ: "ಕಮ್ಯುನಿಸ್ಟ್ ಪ್ರಣಾಳಿಕೆಯ ಮಹತ್ವ" : ಕಾ.ಎಂ.ಎ.ಬೇಬಿ, ಪಿ ಬಿ ಸದಸ್ಯರು
* "ನನಗೆ ಇಷ್ಟವಾದ ಕಮ್ಯುನಿಸ್ಟ್ ಪ್ರಣಾಳಿಕೆಯ ಭಾಗ" – 5 ಸಂಗಾತಿಗಳಿಂದ ಪ್ರಣಾಳಿಕೆಯ ಭಾಗಗಳ ಓದು
* ಕಮ್ಯುನಿಸ್ಟ್ ಪ್ರಣಾಳಿಕೆ"ಯ ಕುರಿತು ಕೆಲವು ಅಂತರ್‍ರಾಷ್ಟ್ರೀಯ ಕಲಾಕೃತಿಗಳ ಪ್ರದರ್ಶನ
* "ಸಮತಾವಾದ'ದ ಆದರ್ಶಗಳನ್ನು ಒಳಗೊಂಡ ಮೊದಲ ಕನ್ನಡ ಕವನಗಳ ವಾಚನ/ಹಾಡು

3. ಫೆ. 21–28 ಅವಧಿಯಲ್ಲಿ ಜಿಲ್ಲಾ ಅಥವಾ ಇತರ ಕೇಂದ್ರಗಳಲ್ಲಿ (ರಾಜ್ಯ ಮಟ್ಟದ ಆನ್ ಲೈನ್ ಸಭೆಗಳ ನಾಲ್ಕು ಅಂಶಗಳಲ್ಲಿ ಕೆಲವು ಅಥವಾ ಎಲ್ಲ ನಾಲ್ಕನ್ನೂ ಅಥವಾ ಇತರ ಅಂಶಗಳನ್ನು ಒಳಗೊಂಡ) ದೈಹಿಕ ಸಭೆಗಳು.

JANASHAKTHI KANNADA VARA PATRIKE FEBRUARY 21-27, 2022 Price: Rs. 10/- Date of Publication: 18 FEBRUARY 2022 RNI No. KARKAN /2006/17926 Posted on 21-02-2022
"REGISTERD" Postal Reg. No. RNP/KA/BGS/2078/2019-21 Posted at BG PSO, BG - 560026 Licensed to Post without prepayment License No. PMG/BG/WPP-283/2019-21 **Posted at Periodical Rate** - Rs. 2





ಸಂಘ ಸಂಸ್ಥೆಗಳಿಗೆ ಜಮೀನು: ಕೃಷಿ ಕೂಲಿಕಾರರ ಆಕ್ಷೇಪ


ಸರ್ಕಾರಿ ಭೂಮಿಗಳನ್ನು ಖಾಸಗಿ ಸಂಘ ಸಂಸ್ಥೆಗಳಿಗೆ ಮಂಜೂರು ಮಾಡಲು ಹೊರಟಿರುವ ಸರ್ಕಾರದ ನೀತಿಯನ್ನು ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘ ತೀವ್ರವಾಗಿ ವಿರೋಧಿಸಿದೆ. ಬಡವರ ಎಲ್ಲ ಬಗರ್ ಹುಕ್ಕುಂ ಸಾಗುವಳಿ ಪ್ರಕರಣಗಳನ್ನು ಸಕ್ರಮಗೊಳಿಸಿ ತುರ್ತಾಗಿ ಹಕ್ಕು ಪತ್ರಗಳನ್ನು ನೀಡಲು ಒತ್ತಾಯಿಸಿ ಫೆಬ್ರವರಿ 15

ಪುಟ 15 ಕ್ಕೆ





ಕೆಂಪು ಪುಸ್ತಕ ದಿನ 2022 ಆಚರಣೆಗೆ ಕರೆ



ಫೆಬ್ರುವರಿ 21, 1848 ಮಾರ್ಕ್ಸ್-ಎಂಗೆಲ್ಸ್ ಕಮ್ಯುನಿಸ್ಟ್ ಪ್ರಣಾಳಿಕೆಯನ್ನು ಪ್ರಕಟಿಸಿದ ದಿನ. ಇದನ್ನು ಪ್ರತಿ ವರ್ಷ 'ಕೆಂಪು ಪುಸ್ತಕ ದಿನ'ವಾಗಿ ಆಚರಿಸಲು ಭಾರತದ ಮತ್ತು ಅಂತರರಾಷ್ಟ್ರೀಯ ಎಡ ಪ್ರಕಾಶಕರ ಸಂಘ ನಿರ್ಧರಿಸಿ, ಕಳೆದ ಎರಡು ವರ್ಷಗಳಿಂದ ಜಗತ್ತಿನಾದ್ಯಂತ ಆಚರಿಸಲಾಗುತ್ತಿದೆ. ಕಮ್ಯುನಿಸ್ಟ್ ಪ್ರಣಾಳಿಕೆ ಅಥವಾ ಯಾವುದೇ ಕ್ಲಾಸಿಕ್ ಮಾರ್ಕ್ಸ್‌ವಾದಿ ಕೃತಿಯನ್ನು ಆರಿಸಿಕೊಂಡು ಅದರ ಓದು ಮತ್ತಿತರ ಕಾರ್ಯಕ್ರಮಗಳನ್ನು ತಮ್ಮ ಭಾಷಾ ದೇಶ-ಪ್ರದೇಶದ ಪರಿಸ್ಥಿತಿಗೆ ಅನುಗುಣವಾಗಿ ಆಚರಿಸಲು ಎರಡೂ ಸಂಘಗಳು ಕೆಲವು ಸಾಮಾನ್ಯ ಸೂಚನೆಗಳನ್ನು ನೀಡಿವೆ. 'ಕೆಂಪು ಪುಸ್ತಕ ದಿನ'ದ ಆಚರಣೆಯ ಭಾಗವಾಗಿ "ಕಮ್ಯುನಿಸ್ಟ್ ಪ್ರಣಾಳಿಕೆ"ಯ ಕುರಿತು ಒಂದು ಅಂತರ್ರಾಷ್ಟ್ರೀಯ ಕಲಾಕೃತಿ ಸ್ಪರ್ಧೆಯನ್ನು

ಪುಟ 15 ಕ್ಕೆ

CPIM 23ನೇ ಮಾಹಾಧಿವೇಶನ ಕರಡು ರಾಜಕೀಯ ನಿರ್ಣಯ ಕನ್ನಡ ಅನುವಾದ ಬಿಡುಗಡೆ



ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಯು. ಬಸವರಾಜು ಮತ್ತು ಕಾರ್ಯದರ್ಶಿ ಮಂಡಳಿ ಸದಸ್ಯರಿಂದ

JANASHAKTHI KANNADA VARA PATRIKE: Printed, Published by **U. BASAVARAJ**, No. 37/a, 8th Cross, EMS Bhavan, Mahalakshmi Layout, Bangalore 560086, Karnataka on behalf of **COMMUNIST PARTY OF INDIA (MARXIST)** and
Printed at : Kriya Prakashana, No. 12, 18th Cross, Sampangirama Nagar, Bangalore 560027
Editor : **NITYANANDASWAMI**